# ಅಧ್ಯಾಯ-೧೨

# ಇತರ ಸಮಾಜ ಸೇವಾ ಸೌಲಭ್ಯಗಳು



ಯಾವುದೇ ಒಂದು ದೇಶದ ಅಭಿವೃದ್ಧಿ ಎಂದರೆ ಅಲ್ಲಿನ ದುರ್ಬಲ ವರ್ಗದವರನ್ನು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮೇಲೆತ್ತುವುದೇ ಆಗಿದೆ. ಹಾಗೆಯೇ ಪ್ರತಿಯೊಬ್ಬ ಪ್ರಜೆಯ ಪ್ರಗತಿಯಿಂದಲೂ ಒಂದು ದೇಶವು ಮುಂದುವರಿದ ದೇಶವೆಂದು ಪರಿಗಣಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ಮೊದಲಿನಿಂದಲೂ ಶ್ರಮಿಸುತ್ತಾ ಬಂದಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣ ಯೋಜನೆಗಳ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪ್ರಯತ್ನಿಸುತ್ತಿವೆ. ಇದೇ ರೀತಿ ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಕರ್ನಾಟಕ ಸರ್ಕಾರದ ಮುಖ್ಯ ಧ್ಯೇಯವಾಗಿದೆ. ದಲಿತರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಕಾರ್ಮಿಕರು, ವಿಕಲ ಚೇತನರೇ ಮುಂತಾದವರ ಏಳಿಗೆಗಾಗಿ ಕೈಗೊಳ್ಳುವ ಕಾರ್ಯಕ್ರಮಗಳೆಲ್ಲವೂ ಸಮಾಜಸೇವೆಯ ವಿವಿಧ ವಿಧಾನಗಳಾಗಿವೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು, ಕರ್ನಾಟಕವನ್ನು ಸರ್ವ ಸಮಾನತೆಯುಳ್ಳ ಹಾಗೂ ಅಭಿವೃದ್ಧಿಶೀಲ ರಾಜ್ಯವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿವೆ. ಸರ್ಕಾರದ ವತಿಯಿಂದ ಒದಗಿಸಲ್ಪಟ್ಟಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಹಾಗೂ ಅವುಗಳ ಯಶಸ್ಸು ಗಮನಾರ್ಹ. ಅಲ್ಲದೆ, ವ್ಯಕ್ತಿಗಳು ಮತ್ತು ಇತರೆ ಸ್ವಯಂ ಸೇವಾ ಸಂಸ್ಥೆಗಳೂ ಈ ಕಾರ್ಯಕ್ರಮಗಳನ್ನು ನೆರವೇರಿಸುವುದರಲ್ಲಿ ಮುಂದಾಗಿವೆ. ಈ ದಿಸೆಯಲ್ಲಿ ಕಾರ್ಯರೂಪಕ್ಕೆ ಬಂದಿರುವ ಪ್ರಮುಖ ಕಾರ್ಯಕ್ರಮ ಮತ್ತು ಚಟುವಟಿಕೆಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

## ಕಾರ್ಮಿಕ ಕಲ್ಯಾಣ

ಸ್ವಾತಂತ್ರ್ಯಪೂರ್ವದಲ್ಲಿ ಕೈಗಾರಿಕಾ ಅಭಿವೃದ್ಧಿಯು ಒಂದು ಮಿತಿಯಲ್ಲಿದ್ದು, ಕಾರ್ಮಿಕ ಸಂಘಟನೆಯೂ ಸೀಮಿತವಾಗಿತ್ತು. ಇದೇ ರೀತಿ ಕಾರ್ಮಿಕ ಕಾನೂನುಗಳೂ ಕಡಿಮೆಯಿದ್ದವು. ಮೊದಲ ಮಹಾಯುದ್ಧದ ಅಂತ್ಯದ ವೇಳೆಗೆ ಕರ್ನಾಟಕದಲ್ಲಿ ಆಧುನಿಕ ಕೈಗಾರಿಕೆಗಳು ತಲೆ ಎತ್ತಿದ್ದವಾದರೂ ಕಾರ್ಮಿಕ ಸಂಘಟನೆಗಳು ಇರಲಿಲ್ಲ. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ೧೯೩೧ರಲ್ಲಿ ಕಾರ್ಮಿಕ ನಿಯೋಜನಾ ಸಮಿತಿಯೊಂದನ್ನು ನೇಮಿಸಿ, ಅನಿಯಂತ್ರಿತ ಕೈಗಾರಿಕೋದ್ಯಮ ಮತ್ತು ಕೂಲಿಕಾರರ ಪರಿಸ್ಥಿತಿಗಳನ್ನು ವರದಿ ಮಾಡುವಂತೆ ಆದೇಶಿಸಿತು. ಏತನ್ಮಧ್ಯೆ, ೧೯೨೬ರಲ್ಲಿ ಕೇಂದ್ರದಲ್ಲಿ ಜಾರಿಗೆ ಬಂದ ಕಾರ್ಮಿಕ ಸಂಘಗಳ ಅಧಿನಿಯಮವು, ಹಳೆಯ ಮೈಸೂರು ಪ್ರದೇಶಗಳಿಗೆ ೧೯೪೧ರವರೆಗೆ ಅನ್ವಯವಾಗಲಿಲ್ಲ. ಆದರೂ ಕಾಂಗ್ರೆಸ್ ಮುಖಂಡರು ಮೊದಲ ಬಾರಿಗೆ ಕಾರ್ಮಿಕರ ಸಂಘಟನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ವೃತ್ತಿ ಸಂಘಗಳಿಗೆ ನೋಂದಣಿ ಮಾಡಿಸುವ ಮತ್ತು ಅವುಗಳಿಗೆ ವ್ಯಾಖ್ಯೆ ಕೊಡುವ ಉದ್ದೇಶದಿಂದ ಸರ್ಕಾರ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿಗೆ ತಂದಿತು. ಆನಂತರ ರಾಜ್ಯದಲ್ಲಿ ಅಲ್ಲಲ್ಲಿ ಕಾರ್ಮಿಕರು ಸಂಘಟನೆಗೊಂಡು, ಸಂಘಗಳು ಅಸ್ತಿತ್ವಕ್ಕೆ ಬರತೊಡಗಿದವು.

ಕರ್ನಾಟಕದಲ್ಲಿ ಕೆಲವು ಉದ್ದಿಮೆದಾರರು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಸೌಲಭ್ಯಗಳು ಹೆಚ್ಚು ಪರಿಣಾಮಕಾರಿಯಾಗಿ ಆಗದೇ ಇದ್ದುದರಿಂದ ಮತ್ತು ಕಾರ್ಮಿಕ ಸಂಘಗಳಿಗೆ ಅವುಗಳನ್ನು ಹೇಗೆ ಜಾರಿಗೊಳಿಸಬೇಕೆಂಬ ತಿಳುವಳಿಕೆ ಇಲ್ಲದೇ ಇದ್ದುದರಿಂದ ಸರ್ಕಾರದ ಮಧ್ಯ ಪ್ರವೇಶ ಅವಶ್ಯವಾಯಿತು. ಇದರೊಂದಿಗೆ ಭಾರತ ಸರ್ಕಾರದ ೧೯೪೭ ರ ಔದ್ಯೋಗಿಕ ವ್ಯಾಜ್ಯ ಕಾಯ್ದೆಯೂ ಜಾರಿಗೆ ಬಂದಿತು. ಸಂಧಾನದ ಮತ್ತು ಕಡ್ಡಾಯ ಮಧ್ಯಸ್ಥಿಕೆ ಮುಖಾಂತರ ಔದ್ಯೋಗಿಕ ಶಾಂತಿಯನ್ನು ದೊರಕಿಸಿಕೊಡುವುದು, ಸಂಘಟಿತ ಕಾರ್ಮಿಕರ ವ್ಯಾಜ್ಯಗಳಿಗೆ ಪರಿಹಾರವನ್ನು ನೀಡುವುದು ಈ ಕಾಯ್ದೆಯ ಮುಖ್ಯ ಉದ್ದೇಶಗಳಾಗಿದ್ದವು. ಅದರಂತೆ ಕೇಂದ್ರ ಸರ್ಕಾರದ ೧೯೪೮ರ ಕಾರ್ಖಾನೆಯ ಕಾನೂನಿನ ಅನ್ವಯದಿಂದಾಗಿ ರಾಜ್ಯದಲ್ಲಿ ೧೯೫೦ರಿಂದ ಪ್ರತಿಯೊಬ್ಬ ಉದ್ಯಮಿಯೂ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು.

### ಕಾರ್ಮಿಕ ಇಲಾಖೆ

ಕರ್ನಾಟಕದಲ್ಲಿ ೧೯೩೫ರಲ್ಲಿ ಕಾರ್ಮಿಕ ಇಲಾಖೆಯು ಅಸ್ತಿತ್ವಕ್ಕೆ ಬಂದಿತು. ಕಾರ್ಮಿಕ ಇಲಾಖೆಯ ಮುಖ್ಯ ಉದ್ದೇಶ ಕಾರ್ಮಿಕರು ಮತ್ತು ಮಾಲೀಕರ ನಡುವಿನ ಬಾಂಧವ್ಯ ಬೆಸೆದು ಉತ್ಪಾದನೆಗೆ ಅನುವು ಮಾಡಿಕೊಡುವುದೇ ಆಗಿದೆ. ಕಾರ್ಮಿಕ ಆಯುಕ್ತರು ಕಾರ್ಮಿಕ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಸಹಾಯಕರಾಗಿ ಕೇಂದ್ರ ಕಚೇರಿಯಲ್ಲಿ ಇಬ್ಬರು ಅಪರ ಕಾರ್ಮಿಕ ಆಯುಕ್ತರು, ಒಬ್ಬರು ಜಂಟಿ ಕಾರ್ಮಿಕ ಆಯುಕ್ತರು, ಒಬ್ಬರು ಉಪ ಕಾರ್ಮಿಕ ಆಯುಕ್ತರು, ಒಬ್ಬರು ಕಾರ್ಯದರ್ಶಿಯವರು(ಕನಿಷ್ಠ ವೇತನ ಸಲಹಾ ಮಂಡಳಿ), ಒಬ್ಬರು ಕಾರ್ಮಿಕ ಅಧಿಕಾರಿ ಹಾಗೂ ಮೂವರು ವ್ಯವಸ್ಥಾಪಕರು ಇರುತ್ತಾರೆ.

### ಕೈಗಾರಿಕಾ ಬಾಂಧವ್ಯ

ಇಲಾಖೆಯ ಅಧೀನ ಕಚೇರಿಗಳನ್ನು ಐದು ಪ್ರಾದೇಶಿಕಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಪ್ರಾದೇಶಿಕದಲ್ಲಿ ಒಬ್ಬ ಉಪ ಕಾರ್ಮಿಕ ಆಯುಕ್ತರು ಇರುತ್ತಾರೆ ಅಂತಹ ಪ್ರಾದೇಶಿಕಗಳು ಯಾವುವೆಂದರೆ ಬೆಂಗಳೂರಿನಲ್ಲಿ ಎರಡು, ಹಾಸನ, ಬೆಳಗಾವಿ ಮತ್ತು ಕಲಬುರಗಿ ಇವುಗಳಲ್ಲದೆ, ೧೨ ವಿಭಾಗೀಯ ಕಚೇರಿಗಳಿರುತ್ತವೆ. ಈ ಕಚೇರಿಗಳಿಗೆ ಸಹಾಯಕ ಕಾರ್ಮಿಕ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಅವರ ಅಧೀನದಲ್ಲಿ ೪೨ ಉಪ ವಿಭಾಗೀಯ ಕಚೇರಿಗಳು ಇರುತ್ತವೆ. ಈ ಕಚೇರಿಗಳಿಗೆ ಕಾರ್ಮಿಕ ಅಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ನಗರ ಪಾಲಿಕೆಯ ಪರಿಧಿಯಲ್ಲಿ ಬರುವ ೮೩ ವೃತ್ತಗಳಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರು ತಾಲೂಕು ಮಟ್ಟದಲ್ಲಿ ೧೭೪ ಕಾರ್ಮಿಕ ನಿರೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯ ಕಾರ್ಯ ಚಟುವಟಿಕೆಗಳು ಹೀಗಿವೆ:

ಕಾರ್ಮಿಕರ ಕಲ್ಯಾಣ ಮತ್ತು ಸಾಮರಸ್ಯ ಪೂರಿತ ಕೈಗಾರಿಕಾ ಶಾಂತಿ ನೆಲೆಸುವಂತೆ ಶ್ರಮಿಸುವುದು, ರಾಜ್ಯದ ಆರ್ಥಿಕ ಅಭಿವೃದ್ಧಿ ಸಾಧಿಸುವುದು ಇಲಾಖೆಯ ಘನೋದ್ದೇಶವಾಗಿದೆ.

### ಇಲಾಖೆಯ ಗುರಿಗಳು:

- ಸೌಹಾರ್ದಯುತ ಕೈಗಾರಿಕಾ ಬಾಂಧವ್ಯ ನೆಲೆಸುವಂತೆ ಮಾಡುವುದು ಮತ್ತು ಕೈಗಾರಿಕಾ ವಿವಾದಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥ ಗೊಳಿಸುವುದು;
- ಕಾರ್ಮಿಕ ಕಾನೂನು ಹಾಗೂ ಸಾಮಾಜಿಕ ಭದ್ರತೆಯ ಯೋಜನೆಗಳನ್ನು ಜಾರಿ ಮಾಡುವುದರ ಮೂಲಕ ಉದ್ಯೋಗ ಕ್ರಮೀಕರಣ, ಕ್ಷೇಮಾಭಿವೃದ್ಧಿ, ಆರೋಗ್ಯ ರಕ್ಷಣೆ, ಸುರಕ್ಷತೆ, ಸಾಮಾಜಿಕ ಆರ್ಥಿಕ ಭದ್ರತೆ ಹಾಗೂ ಅಸಂಘಟಿತ ಕಾರ್ಮಿಕರ ಉನ್ನತಿಯನ್ನು ಸಾಧಿಸುವುದು;
- ಬಾಲಕಾರ್ಮಿಕರ ಬಿಡುಗಡೆ ಹಾಗೂ ಪುನರ್ ವಸತಿ;
- ಆಡಳಿತದಲ್ಲಿ ಜವಾಬ್ದಾರಿಯಿಂದ ಪ್ರತಿಕ್ರಿಯಿಸುವಿಕೆ, ಸಾಮರ್ಥ್ಯ ಹಾಗೂ ಪಾರದರ್ಶಕತೆಯನ್ನು ವೃದ್ಧಿಸುವುದು;

### ಇಲಾಖೆಯ ಕೆಲಸಗಳು [ಕಾರ್ಯಚಟುವಟಿಕೆಗಳು]

### ಕೇಂದ್ರ ಸರ್ಕಾರದ ೨೨ ಹಾಗೂ ರಾಜ್ಯ ಸರ್ಕಾರದ ೪ ಕಾರ್ಮಿಕ ಕಾಯ್ದೆಗಳ ಆಡಳಿತ ಮತ್ತು ಅನುಷ್ಠಾನ

- ಮುಷ್ಕರ, ಬೀಗಮುದ್ರೆ, ಕೆಲಸ ಸ್ಥಗಿತ ಇವುಗಳನ್ನು ಸಮಯೋಚಿತವಾಗಿ ತಡೆಗಟ್ಟುವುದು, ಲೇಆಫ್ ಮತ್ತು ರಿಟ್ರೆಂಚ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಪರಿಹಾರ ದೊರಕಿಸಿಕೊಡುವುದು. ಕೈಗಾರಿಕಾ ವಿವಾದಗಳಲ್ಲಿ ಒಪ್ಪಂದಗಳನ್ನೇರ್ಪಡಿಸುವುದರ ಮೂಲಕ ಕೈಗಾರಿಕಾ ಶಾಂತಿ ಮತ್ತು ಮಾಲೀಕ ಮತ್ತು ಕಾರ್ಮಿಕರ ನಡುವೆ ಉತ್ತಮ ಬಾಂಧವ್ಯವನ್ನು ಮೂಡಿಸುವುದು.
- ಕಾರ್ಮಿಕ ನ್ಯಾಯಾಲಯ ಮತ್ತು ಔದ್ಯಮಿಕ ನ್ಯಾಯಾಧೀಕರಣಗಳ ಐ-ತೀರ್ಪುಗಳನ್ನು ಅನುಷ್ಠಾನ ಗೊಳಿಸುವುದು.
- ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿಪಡಿಸುವುದು ಮತ್ತು ಪರಿಷ್ಕರಣೆ.
- ಇದುವರೆಗೆ ೭೬ ಅನುಸೂಚಿತ ಉದ್ದಿಮೆಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ ೭೪ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಿದ್ದು, ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಉಳಿದ ೨ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.
- ಕೃಷಿ ಕಾರ್ಮಿಕರೂ ಸೇರಿದಂತೆ ಎಲ್ಲಾ ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿಯಾಗುವಂತೆ ಕ್ರಮವಹಿಸುವುದು.
- ಸಕ್ಕರೆ ಮತ್ತು ಕಾರ್ಯನಿರತ ಪತ್ರಕರ್ತರ ವೇತನ ಮಂಡಳಿಗಳು ಸೇರಿದಂತೆ ಹಲವು ವೇತನ ಮಂಡಳಿಗಳ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದು.
- ಭಾರತ ಸರ್ಕಾರದಿಂದ ಮಾನ್ಯ ಮಾಡಲಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO)ಯ ನಿರ್ಣಯಗಳನ್ನು (Convention) ಮತ್ತು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದು.
- ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಬಾಲ ಕಾರ್ಮಿಕರಿಗೆ ಪುನರ್‌ವಸತಿ ಕಲ್ಪಿಸುವುದು. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (NCLP) ಮತ್ತು ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯ (SCLP) ಅನುಷ್ಠಾನ.

### ಅರೆನ್ಯಾಯಿಕ ಪ್ರಕಾರ್ಯಗಳು (Quasi-judicial functions)

- ೧೯೪೮ರ ಕನಿಷ್ಠ ವೇತನ ಕಾಯ್ದೆ –ಕಾರ್ಮಿಕ ಅಧಿಕಾರಿಗಳು
- ೧೯೭೨ರ ಉಪದಾನ ಪಾವತಿ ಕಾಯ್ದೆ – ಸಹಾಯಕ ಕಾರ್ಮಿಕ ಆಯುಕ್ತರುಗಳು ಮತ್ತು ಉಪ ಕಾರ್ಮಿಕ ಆಯುಕ್ತರುಗಳು
- ೧೯೩೬ರ ವೇತನ ಪಾವತಿ ಕಾಯ್ದೆ – ಕಾರ್ಮಿಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರುಗಳು.
- ೧೯೮೮ರ ಜೀವನ ನಿರ್ವಹಣೆ ಭತ್ಯೆ ಕಾಯ್ದೆ – ಕಾರ್ಮಿಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರುಗಳು.
- ೧೯೭೧ರ ಹೆರಿಗೆ ಭತ್ಯೆ ಕಾಯ್ದೆ – ಕಾರ್ಮಿಕ ಅಧಿಕಾರಿಗಳು ಮತ್ತು ಮೇಲ್ಪಟ್ಟ ಉನ್ನತ ಅಧಿಕಾರಿಗಳು.

- ೧೯೪೬ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳು) ಕಾಯ್ದೆ – ಉಪ ಕಾರ್ಮಿಕ ಆಯುಕ್ತರು ಮತ್ತು ಅಪರ ಕಾರ್ಮಿಕ ಆಯುಕ್ತರುಗಳು (ಮೇಲ್ಮನವಿ ಪ್ರಾಧಿಕಾರಿ)
- ೧೯೪೭ರ ಕೈಗಾರಿಕಾ ವಿವಾದಗಳ ಕಾಯ್ದೆ – ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ಆಯುಕ್ತರನ್ನೊಳಗೊಂಡಂತೆ ಇಲಾಖೆಯ ಎಲ್ಲಾ ಅಧಿಕಾರಿಗಳು.

೧೯೨೬ರ ಕಾರ್ಮಿಕ ಸಂಘಗಳ ಕಾಯ್ದೆ ಅಡಿಯಲ್ಲಿ ೩೧.೧೨.೨೦೧೫ರ ಅವಧಿಯಲ್ಲಿ ನೋಂದಣಿಯಾದ ಒಟ್ಟು ಕಾರ್ಮಿಕ ಸಂಘಗಳ ಸಂಖ್ಯೆ ೪೪೩೭. ಈ ಸಾಲಿನಲ್ಲಿ ಮೂರು ಮುಷ್ಕರಗಳು, ಮೂರು ಬೀಗಮುದ್ರೆ ಆಗಿದ್ದು, ಇದರಲ್ಲಿ ೧೯೮ ಕಾರ್ಮಿಕರು ಪಾಲ್ಗೊಂಡಿದ್ದರು. ಕೈಗಾರಿಕಾ ವಿವಾದ ಕಾಯ್ದೆ ೧೯೪೭ರಂತೆ ೧೫೧೫ ವಿಲೇವಾರಿಯಾದ ಪ್ರಕರಣಗಳು, ೧೫೯ ಪ್ರಕರಣಗಳನ್ನು ಹಿಂತೆಗೆದುಕೊಂಡಿದ್ದು, ೪೭೮ ಪ್ರಕರಣಗಳು ಬಾಕಿ ಇರುತ್ತವೆ. ೧೯೪೬ರ ಔದ್ಯೋಗಿಕ ಉದ್ಯೋಗಗಳ(ಸ್ಥಾಯಿ ಆದೇಶಗಳು) ಕಾಯ್ದೆ ಅಡಿಯಲ್ಲಿ ಒಟ್ಟು ೯೬ ಸ್ಥಾಯಿ ಆದೇಶಗಳನ್ನು ಮಾಡಲಾಗಿದೆ. ಕನಿಷ್ಠ ವೇತನ ಕಾಯ್ದೆ ೧೯೪೮ರ ಕಲಂ ಅಡಿಯಲ್ಲಿ ಕಾರ್ಮಿಕ ಅಧಿಕಾರಿಗಳನ್ನು ಕ್ಲೇಂ ಪ್ರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಅದರಲ್ಲಿ ಸ್ವೀಕರಿಸಿದ ಒಟ್ಟು ಅರ್ಜಿಗಳ ಸಂಖ್ಯೆ ೪೫೫೯, ವಿಲೇವಾರಿಯಾದ ಕ್ಲೇಂ ಅರ್ಜಿಗಳ ಸಂಖ್ಯೆ ೧೫೫, ಬಾಕಿ ಉಳಿದಿರುವ ಕ್ಲೇಂ ಅರ್ಜಿಗಳ ಸಂಖ್ಯೆ ೫೩೧೪ ಆಗಿವೆ.

**ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನ ಕ್ರಿಯಾ ಯೋಜನೆ:** ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು, ಬಾಲ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ, ೧೯೮೬ನ್ನು ಜಾರಿಗೆ ತರಲಾಗಿದೆ. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ೧೯೬೧ರಲ್ಲಿ ಸಹ ಬಾಲ ಕಾರ್ಮಿಕ ನೇಮಕಾತಿ ನಿಷೇಧಿಸಲಾಗಿದೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಹೊರತುಪಡಿಸಿ, ೧೧ ಇತರೆ ಇಲಾಖೆಯ ಅಧಿಕಾರಿಗಳನ್ನು ಬಾಲಕಾರ್ಮಿಕ ಕಾಯ್ದೆ(ನಿಯಂತ್ರಣ ಮತ್ತು ನಿಷೇಧ) ೧೯೮೬ರ ಕಲಂ ೧೭ರಡಿಯಲ್ಲಿ ನಿರೀಕ್ಷಕರೆಂದು ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ, ೧೯೬೧ರ ಕಲಂ ೨೪ನ್ನು ಜಾರಿಗೊಳಿಸಲು ೧೦ ಇಲಾಖೆಗಳ ಅಧಿಕಾರಿಗಳನ್ನು ಹೆಚ್ಚುವರಿ ನಿರೀಕ್ಷಕರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಈ ಎರಡು ಕಾಯ್ದೆಗಳಡಿಯಲ್ಲಿ ೨೦೧೫ನೇ ಸಾಲಿನಲ್ಲಿ ೧೪,೩೧೫ ತಪಾಸಣೆಗಳನ್ನು ನಡೆಸಿದ್ದು ೧,೭೧೫ ಬಾಲಕಾರ್ಮಿಕರನ್ನು ಪತ್ತೆ ಹಚ್ಚಿದ್ದು, ೭೧ ತಪ್ಪಿತಸ್ಥ ಮಾಲೀಕರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ೨೦೧೫ರಲ್ಲಿ ೧೩ ಜಿಲ್ಲೆಗಳಲ್ಲಿ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಮತ್ತು ಕೇಂದ್ರ ಸರ್ಕಾರದ ಬಾಲ ಕಾರ್ಮಿಕ ಕ್ರಿಯಾ ಯೋಜನೆಯು ಕರ್ನಾಟಕದ ೧೭ ಜಿಲ್ಲೆಗಳಲ್ಲಿ ಜಾರಿಯಲ್ಲಿದ್ದು, ಎನ್‌ಸಿಎಲ್‌ಪಿ ಮತ್ತು ಎಸ್‌ಸಿಎಲ್‌ಪಿ ಯೋಜನೆಯಡಿ ೪೮ ಬಾಲಕಾರ್ಮಿಕ ಶಾಲೆಗಳಲ್ಲಿ ೧,೮೦೯ ಬಾಲ ಕಾರ್ಮಿಕರು ದಾಖಲಾಗಿದ್ದಾರೆ.

ಕರ್ನಾಟಕ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯನ್ನು ೨೦೦೧ರಲ್ಲಿ ರೂಪಿಸಿದ್ದು, ಸದರಿ ಯೋಜನೆಯನ್ನು ೨೦೧೨ನೇ ಸಾಲಿನವರೆಗೆ ಮುಂದುವರೆಸಲಾಗಿತ್ತು. ಅಂದಿನ ಕ್ರಿಯಾ ಯೋಜನೆ ಯಲ್ಲಿನ ಕೊರತೆಗಳನ್ನು ಗುರುತಿಸಿ, ಕ್ರಿಯಾ ಯೋಜನೆಯನ್ನು ಪುನರ್‌ರಚಿಸಿ ಪುನರ್‌ರಚಿತ ಕ್ರಿಯಾ ಯೋಜನೆಯನ್ನು ೨೦೧೭ರವರೆಗೆ ವಿಸ್ತರಿಸಲು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಿದೆ.

ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷ ಜೂನ್ ೨೧ನ್ನು "ವಿಶ್ವ ಬಾಲಕಾರ್ಮಿಕ ವಿರೋಧಿ ದಿನ"ವನ್ನಾಗಿ ಆಚರಿಸಲಾಗುತ್ತಿದೆ. ಅಲ್ಲದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಿರ್ವಹಿಸುತ್ತಿರುವ ಸಹಾಯವಾಣಿ ೧೦೯೮ರ ಸೇವೆಯನ್ನು ಪಡೆದುಕೊಳ್ಳಲಾಗಿದೆ.

**ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ:** ಅಪಘಾತದ ಕಾರಣ ಮರಣ/ಶಾಶ್ವತ ದುರ್ಬಲತೆ/ತಾತ್ಕಾಲಿಕ ದುರ್ಬಲತೆ ಹೊಂದಿ ಸಂಕಷ್ಟಕ್ಕೆ ಸಿಲುಕುವ ಆಟೋ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ ಮತ್ತು ಬಸ್ ವಾಹನ ಚಾಲಕರ ಹಿತರಕ್ಷಣೆ ಮತ್ತು ಅವರ ಕುಟುಂಬದ ಸದಸ್ಯರಿಗೆ ನೆರವು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು ೨೦೧೧–೧೨ನೇ ಸಾಲಿನಲ್ಲಿ **"ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ"** ಎಂಬ ವಿನೂತನ ವಿಮಾ ಯೋಜನೆಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಜಾರಿಗೆ ತಂದಿದೆ.

**ಯೋಜನೆಯ ವಿವರ:** ಕರ್ನಾಟಕ ರಾಜ್ಯದಲ್ಲಿ ಪರವಾನಗಿ ಪಡೆದ ಖಾಸಗಿ ವಾಹನ ಚಾಲಕರಿಗೆ ಈ ಯೋಜನೆಯು ಅನ್ವಯವಾಗುತ್ತದೆ. ಸದರಿ ಚಾಲಕರು ಒಂದು ಬಾರಿ ರೂ. ೨೫ ನೋಂದಣಿ ಶುಲ್ಕವನ್ನು ಪಾವತಿಸಿ ಮಂಡಳಿಯಲ್ಲಿ ಪಾವತಿಸಬೇಕು. ಯೋಜನೆಗೆ ವಯಸ್ಸಿನ ಮಿತಿ ೨೦ರಿಂದ ೭೦ ವರ್ಷಗಳು.

**ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ:** ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಪಡಿತರ ಚೀಟಿ ಪಡೆದಿರುವ ಬಿಪಿಎಲ್ ಕುಟುಂಬಗಳು ಹಾಗೂ ಕೇಂದ್ರ ಸರ್ಕಾರ ಗುರುತಿಸಿದ ಇತರೆ ಕಾರ್ಮಿಕ ವರ್ಗಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ. ಈ ಯೋಜನೆಯ ಮೂಲಕ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಕಾರ್ಮಿಕ ಇಲಾಖೆಯು ಈ ಸಾಧನೆಯ ಮೂಲಕ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿದೆ.

ದಿ:೨೭.೦೩.೨೦೧೫ರಂದು ಕಾರ್ಮಿಕ ಆಯುಕ್ತರು ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ ಸೊಸೈಟಿ ಇವರ ಅಧ್ಯಕ್ಷತೆಯಲ್ಲಿ ಎಲ್ಲಾ ವಿಮಾ ಸಂಸ್ಥೆಗಳ ನವೀಕರಣ ಒಡಂಬಡಿಕೆಗಳಿಗೆ (ದಿ:೦೧.೦೨.೨೦೧೫ ರಿಂದ ದಿ: ೩೧.೦೧.೨೦೧೬ರವರೆಗೆ ಅನ್ವಯವಾಗುವಂತೆ) ಸಹಿ ಹಾಕಲಾಗಿದೆ. ೨೦೧೪–೧೫ನೇ ಸಾಲಿನ ೪೩ ಲಕ್ಷ ಫಲಾನುಭವಿಗಳಿಗೆ ಸ್ಮಾರ್ಟ್‌ಕಾರ್ಡ್ ವಿತರಿಸುವ ಪ್ರಾರಂಭಿಕ ಗುರಿಯನ್ನು ಮೀರಿ ೨೦೧೫ರ ಜೂನ್ ಅಂತ್ಯದವರೆಗೆ ೬೫,೪೯,೫೮೯ ಕುಟುಂಬಗಳನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಲಾಗಿದೆ. ದೇಶದ ಯಾವುದೇ ಭಾಗದಿಂದ ಯೋಜನೆಯ ವಿವರ ಅಥವಾ ಮಾಹಿತಿಯನ್ನು ಪಡೆಯಲು ಉಚಿತ ಸಹಾಯವಾಣಿ ೧೮೦೦ ೪೨೫ ೨೬೪೬ ಮತ್ತು ಕಾಲ್ ಸೆಂಟರ್ ವ್ಯವಸ್ಥೆಯನ್ನು ಸೃಷ್ಟಿಸಲಾಗಿದೆ. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ

ಡಿಸೆಂಬರ್ ಮಾಹೆ (೩೧.೧೨.೨೦೧೫ರವರೆಗೆ) ಅಂತ್ಯದವರೆಗೆ ಒಟ್ಟು ೮೧೩ ಆಸ್ಪತ್ರೆಗಳನ್ನು (ಸರ್ಕಾರಿ ೨೭೦ & ಖಾಸಗಿ ೫೪೩) ಎಂಪ್ಯಾನಲ್ ಮಾಡಲಾಗಿದೆ.

ರಾಜ್ಯದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಎಂಪ್ಯಾನಲ್ ಆದ ಆಸ್ಪತ್ರೆಗಳಲ್ಲಿ (ದಿ:೩೧.೧೨.೨೦೧೫ರವರೆಗೆ) ೬೪, ೭೫೦ ಫಲಾನುಭವಿಗಳು ರೂ. ೫೭.೨೮ ಕೋಟಿ ಮೊತ್ತದ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆದಿರುತ್ತಾರೆ. ೨೦೧೪-೧೫ನೇ ಸಾಲಿನ ಅಂತ್ಯದಲ್ಲಿ SCSP ಅಡಿ ರೂ. ೧೪.೨೪ ಕೋಟಿ, ಟಿಎಸ್‌ಪಿ ಅಡಿ ರೂ. ೭.೪೦ ಕೋಟಿ ಮತ್ತು ಇತರೆ ವೆಚ್ಚದಡಿ ರೂ.೧೭.೦೦ ಕೋಟಿ ಒಟ್ಟು ರೂ. ೩೭.೭೪ ಕೋಟಿ ಬಿಡುಗಡೆಯಾಗಿರುತ್ತದೆ. ಈ ಬಿಡುಗಡೆಯಾದ ಅನುದಾನದಲ್ಲಿ ೨೦೧೪-೧೫ನೇ ಸಾಲಿನಲ್ಲಿ ನೋಂದಣಿಯಾದ ಕುಟುಂಬಗಳ ರಾಜ್ಯದ ಪಾಲಿನ ವಿಮಾವಂತಿಕೆಯಾಗಿ ರೂ.೨೧.೦೯ ಕೋಟಿ ಪಾವತಿಯಾಗಿರುತ್ತದೆ. ೨೦೧೩-೧೪ ಹಾಗೂ ೨೦೧೪-೧೫ನೇ ಸಾಲಿನಲ್ಲಿ ನೋಂದಣಿಯಾಗಿ ಸ್ಮಾರ್ಟ್‌ಕಾರ್ಡ್ ಪಡೆದ ಫಲಾನುಭವಿಗಳ ವಿಮಾ ಪಾಲಿಸಿಗಳನ್ನು ದಿ:೩೧.೦೩.೨೦೧೬ರವರೆಗೆ ನವೀಕರಿಸಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. ೧೫.೦೦ ಕೋಟಿ ಮತ್ತು ಇತರೆ ವೆಚ್ಚದಡಿ ರೂ. ೯.೧೯೫ ಕೋಟಿ ಒಟ್ಟು ೨೪.೧೯೫ ಕೋಟಿ ಬಿಡುಗಡೆಯಾಗಿರುತ್ತದೆ. ದಿ: ೧.೪.೨೦೧೬ರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ.

**ಸಕಾಲ ಯೋಜನೆ:** ಸೇವೆಗಳನ್ನು ಸಾರ್ವಜನಿಕರಿಗೆ ತ್ವರಿತವಾಗಿ ತಲುಪಿಸಲು ಕರ್ನಾಟಕ ಸಾರ್ವಜನಿಕ ಸೇವೆಗಳ ಖಾತರಿ ಅಧಿನಿಯಮ ೨೦೧೧ರ ಅಡಿ ಅನುಸೂಚಿಗೆ ಕಾರ್ಮಿಕ ಇಲಾಖೆಯ ೧೩ ಸೇವೆಗಳನ್ನು ಸೇರಿಸಿದ್ದು, ಅದರ ಪ್ರಕಾರ ನಿಗಧಿಪಡಿಸಿದ ಅವಧಿಯೊಳಗೆ ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸಲಾಗುತ್ತಿದೆ.

**ಇ-ಕಾರ್ಮಿಕ ಯೋಜನೆ:** ೨೦೧೨-೧೩ನೇ ಸಾಲಿನಲ್ಲಿ ೧೩ನೇ ಹಣಕಾಸು ಆಯೋಗವು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ೧೯೬೧ ರ ಪ್ರಕಾರ ನೋಂದಣಿ, ನವೀಕರಣ, ತಿದ್ದುಪಡಿಗಳನ್ನು ಗಣಕೀಕರಣಗೊಳಿಸಲು ಇಲಾಖೆಗೆ ಅನುದಾನ ರೂ.೨೪೯.೦೦ ಲಕ್ಷಗಳನ್ನು ಮಂಜೂರು ಮಾಡಿದ್ದು, ಕಿಯೋನಿಕ್ಸ್ ಸಹಯೋಗದೊಂದಿಗೆ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿದೆ. ಪ್ರಸ್ತುತ ರಾಜ್ಯಾದ್ಯಂತ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ೧೯೬೧ರಡಿ ನೋಂದಣಿ, ನವೀಕರಣ, ವಾರ್ಷಿಕ ವರದಿ, ತಿದ್ದುಪಡಿಗಳನ್ನು ಆನ್‌ಲೈನ್ ಮೂಲಕವೇ ನೆರವೇರಿಸಲಾಗುತ್ತಿದೆ.

ಇಲಾಖೆಯ ಈ ಕೆಳಗಿನ ೭ ಪ್ರಮುಖ ಕಾಯ್ದೆಗಳಡಿ ನೋಂದಣಿ, ನವೀಕರಣ, ಪರವಾನಗಿ, ತಿದ್ದುಪಡಿ, ವಾರ್ಷಿಕ ವರದಿ ಸಲ್ಲಿಕೆ ಕಾರ್ಯಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಲು ತಂತ್ರಾಂಶವನ್ನು ರೂಪಿಸುವ ಕಾರ್ಯವನ್ನು ಎನ್‌ಐಸಿ (NIC) ಗೆ ನೀಡಲಾಗಿದೆ.

- ➢ ಗುತ್ತಿಗೆಕಾರ್ಮಿಕ (ನಿಯಂತ್ರಣ ಮತ್ತು ರದ್ದತಿ) ಕಾಯ್ದೆ ೧೯೭೦
- ➢ ಕಾರ್ಮಿಕ ಸಂಘಗಳ ಕಾಯ್ದೆ ೧೯೨೬
- ➢ ಬೀಡಿ ಮತ್ತು ಸೀಗಾರ್ ಕಾರ್ಮಿಕರು (ಸೇವಾ ಷರತ್ತುಗಳು) ಕಾಯ್ದೆ ೧೯೬೬
- ➢ ಅಂತರರಾಜ್ಯ ವಲಸೆ ಕಾರ್ಮಿಕರ (ಸೇವಾ ನಿಯಂತ್ರಣ ಮತ್ತು ಷರತ್ತುಗಳು) ಕಾಯ್ದೆ ೧೯೭೯
- ➢ ತೋಟಕಾರ್ಮಿಕರ ಕಾಯ್ದೆ ೧೯೫೧
- ➢ ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ, ೧೯೬೧.
- ➢ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ [ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತುಗಳು] ೧೯೯೬ ರಡಿ ನೋಂದಣಿ

**ವೆಬ್ ಪೋರ್ಟಲ್ :**

**"ಕಾರ್ಮಿಕ ಸಹಯೋಗ"** - ಎಂಬ ವೆಬ್‌ಪೋರ್ಟಲ್‌ನ್ನು ಅಭಿವೃದ್ಧಿ ಗೊಳಿಸಲಾಗಿದ್ದು, ಇದರ ಮೂಲಕ ಅಧಿಕಾರಿ / ನಿರೀಕ್ಷಕರುಗಳು ವಿವಿಧ ಕಾರ್ಮಿಕ ಕಾಯ್ದೆಗಳಡಿ ತನಿಖೆ ಕೈಗೊಂಡ ಕೂಡಲೇ ವೆಬ್‌ಪೋರ್ಟಲ್‌ನಲ್ಲಿ ಅಳವಡಿಸಬಹುದಾಗಿದೆ. ಈ ವೆಬ್‌ಪೋರ್ಟಲ್‌ನಲ್ಲಿ ಅಂಗಡಿ ವಾಣಿಜ್ಯ ಸಂಸ್ಥೆಗಳ ಮಾಲೀಕರು ತನಿಖೆಯ ನಂತರ ಪಾಲನಾ ವರದಿಯನ್ನು ಸಹ 'Kar. LIN'[ಕರ್ನಾಟಕ ಲೇಬರ್ ಐಡೆಂಟಿಫಿಕೇಷನ್ ನಂಬರ್] ಮೂಲಕ ಅಪ್ ಲೋಡ್ ಮಾಡಲೂ ಸಹ ಅವಕಾಶ ಕಲ್ಪಿಸಲಾಗಿದೆ. ಇದರೊಂದಿಗೆ ಎಲ್ಲಾ ಸಂಸ್ಥೆಗಳೂ ವಿವಿಧ ಕಾಯ್ದೆಗಳಡಿ ತಮ್ಮ ವಾರ್ಷಿಕ ವರದಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ.

**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವಾಲಯದ ನೇರ ನಿಯಂತ್ರಣದಡಿ ಕಾರ್ಯ ನಿರ್ವಹಿಸುತ್ತಿರುವ ಈ ಇಲಾಖೆಯು ತನ್ನ ಕಚೇರಿಯನ್ನು ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕ ಭವನದ ಎರಡನೇ ಮಹಡಿಯಲ್ಲಿ ಹೊಂದಿದೆ. ಇಲಾಖೆಯಲ್ಲಿ ಕಾರ್ಖಾನೆ ಮತ್ತು ಬಾಯ್ಲರು ವಿಭಾಗಗಳೆಂಬ ಎರಡು ಶಾಖೆಗಳಿವೆ. ಎರಡೂ ಶಾಖೆಗಳಿಗೆ ನಿರ್ದೇಶಕರು ಆಡಳಿತಾತ್ಮಕ ಮತ್ತು ಶಾಸನಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿನ ಅಂಗ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ಕಾರ್ಯದರ್ಶಿಯಾಗಿ ಹಾಗೂ ಸೆಂಟ್ರಲ್ ಸೇಫ್ಟಿ ಮಾನಿಟರಿಂಗ್ ಸೆಲ್, ಪ್ರೆಷರ್ ವೆಸೆಲ್ಸ್ ಅಂಡ್ ಪ್ಲಾಂಟ್ ಸೇಫ್ಟಿ ಮಾನಿಟರಿಂಗ್ ಸೆಲ್ ಮತ್ತು ಬಾಯ್ಲರ್ ಟೆಸ್ಟಿಂಗ್ ಟ್ರೈನಿಂಗ್ ಅಂಡ್ ಎಕ್ಸಾಮಿನೇಷನ್ ಸೆಲ್ ಹಾಗೂ ಮಹಿಳಾ ಹಕ್ಕು ತರಬೇತಿ ಮತ್ತು ಸುರಕ್ಷತಾ ಉಸ್ತುವಾರಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳಿಗೆ ಇಲಾಖಾ ನಿರ್ದೇಶಕರೇ ಮುಖ್ಯಸ್ಥರಾಗಿರುತ್ತಾರೆ. ಹಾಗೆಯೇ ಇಲಾಖೆಯು ಹೊರತರುತ್ತಿರುವ ತ್ರೈಮಾಸಿಕ ಪತ್ರಿಕೆ ಸುರಕ್ಷಾ ವಾಹಿನಿಯ ಮುಖ್ಯ ಸಂಪಾದಕರಾಗಿರುತ್ತಾರೆ. ಅಲ್ಲದೆ ಮಾಹಿತಿ ಹಕ್ಕು ಅಧಿನಿಯಮ, ೨೦೦೫ರ ಅಡಿ ಮೇಲ್ಮನವಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಪ್ರಾಧಿಕಾರ ಅಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಿರ್ದೇಶಕರಿಗೆ ಕೇಂದ್ರ ಕಛೇರಿಯಲ್ಲಿ ೫೭ ಮಂದಿ ಸಿಬ್ಬಂದಿ ಮತ್ತು ೧೦ ಮಂದಿ ಅಧಿಕಾರಿಗಳು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ

ಸಹಾಯ ಮಾಡುತ್ತಿದ್ದಾರೆ. ಆಡಳತದಲ್ಲಿ ಆಡಳತಾಧಿಕಾರಿಯವರು, ಶಾಸನಜಾರಿ, ಕಾನೂನು, ಸಾಂಖ್ಯಿಕ ಶಾಖೆ, ಬಜೆಟ್ ಮತ್ತು ಬಾಯ್ಲರುಗಳಿಗೆ ಸಂಬಂಧಿಸಿದಂತೆ ಮೂರು ಜಂಟಿ ನಿರ್ದೇಶಕರು ಹಾಗೂ ಕಾರ್ಮಿಕರ ಆರೋಗ್ಯ ಮತ್ತು ವೃತ್ತಿ ಖಾಯಿಲೆಗಳಿಗೆ ಸಂಬಂಧಿಸಿದಂತೆ ಒಬ್ಬರು ಜಂಟಿ ನಿರ್ದೇಶಕರು (ವೈದ್ಯಕೀಯ), ಒಬ್ಬರು ವೃತ್ತಿ ಆರೋಗ್ಯ ತಜ್ಞರು ಸಹಾಯಕರಾಗಿರುತ್ತಾರೆ. ಇತರೆ ವಿಷಯಗಳಿಗೆ ಒಬ್ಬರು ಬಾಯ್ಲರುಗಳ ಸಹಾಯಕ ನಿರ್ದೇಶಕರು(ಬಿಟಿಟಿಇ ಸೆಲ್) ಮತ್ತು ಇಬ್ಬರು ಪತ್ರಾಂಕಿತ ವ್ಯವಸ್ಥಾಪಕರು ಸಹಕರಿಸುತ್ತಿದ್ದಾರೆ. ಕಾರ್ಖಾನೆಗಳ ಜಂಟಿ ನಿರ್ದೇಶಕರು, ವಿಭಾಗ-೧, ಬಾಯ್ಲರುಗಳ ಜಂಟಿ ನಿರ್ದೇಶಕರು, ಕಾರ್ಖಾನೆಗಳ ಜಂಟಿ ನಿರ್ದೇಶಕರು(ವೈದ್ಯಕೀಯ) ಹಾಗೂ ಆಡಳತಾಧಿಕಾರಿ ಅವರನ್ನು ಮಾಹಿತಿ ಹಕ್ಕು ಅಧಿನಿಯಮ ೨೦೦೫ರ ಅಡಿಯಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಇಲಾಖೆಯ ಧ್ಯೇಯೋದ್ದೇಶಗಳು ಹೀಗಿವೆ:

೧. ಕಾರ್ಮಿಕರ ಆರೋಗ್ಯ, ಸುರಕ್ಷಿತ ಕೆಲಸದ ಪರಿಸರ ಮತ್ತು ಕಲ್ಯಾಣ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುತ್ತಿರುವ ಬಗ್ಗೆ ಉಸ್ತುವಾರಿ ವಹಿಸುವುದು.

೨. ಅಪಾಯಕಾರಿ ಕಾರ್ಯಾಚರಣೆ ಹೊಂದಿರುವ ಘಟಕಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ವೃತ್ತಿ ಖಾಯಿಲೆಗಳಿಗೆ ತುತ್ತಾಗದಂತೆ ನಿಗಾವಹಿಸುವುದು.

೩. ಅಪಾಯಕಾರಿ ಕಾರ್ಯಾಚರಣೆ ಹೊಂದಿರುವ ಘಟಕಗಳಲ್ಲಿ ಸಂಭವಿಸಬಹುದಾದ ದುರಂತಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು ಹಾಗೂ ನಂತರದ ಪರಿಣಾಮಗಳನ್ನು ನಿಯಂತ್ರಿಸುವುದು.

೪. ಔದ್ಯಮಿಕ ಆರೋಗ್ಯ, ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಶಿಕ್ಷಣ ಮತ್ತು ತರಬೇತಿ ನೀಡುವ ಮೂಲಕ ಜ್ಞಾನ ವೃದ್ಧಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

೫. ರಾಷ್ಟ್ರಮಟ್ಟದಲ್ಲಿ ಗ್ರಾಹಕ ಸೂಚ್ಯಂಕ, ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ರಾಷ್ಟ್ರೀಯ ನೀತಿ ರೂಪಿಸಲು ಅನುವಾಗುವಂತೆ ವಿವಿಧ ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕೃತ ಮಾಹಿತಿಯನ್ನು ಒದಗಿಸುವುದು.

೬. ಕಾರ್ಮಿಕರಿಗೆ ಅವರ ದುಡಿದ ವೇತನ ಸಕಾಲದಲ್ಲಿ ದೊರೆಯುವಂತೆ ನಿಗಾವಹಿಸುವುದು.

೭. ಚಾಲ್ತಿಯಲ್ಲಿರುವ ರೆಗ್ಯುಲೇಷನ್ ಅನ್ವಯ ಬಾಯ್ಲರುಗಳ ವಿನ್ಯಾಸ, ತಯಾರಿಕೆ, ಸ್ಥಾಪನೆ ಹಾಗೂ ಕಾರ್ಯನಿರ್ವಹಣೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ನಿಯತಕಾಲಿಕ ಪರಿಶೀಲನೆ ನಡೆಸುವುದು.

೮. ಬಾಯ್ಲರುಗಳ ಸ್ಫೋಟದಂತಹ ಅವಘಡಗಳನ್ನು ನಿಯಂತ್ರಿಸುವುದು ಹಾಗೂ ಸುರಕ್ಷತೆಯನ್ನು ಪ್ರವರ್ತಿಸುವುದು.

೯. ಬಾಯ್ಲರ್ ಮೇಲೆ ಕೆಲಸ ಮಾಡುವ ಕಾರ್ಮಿಕರ ಮತ್ತು ಆಸುಪಾಸಿನ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ಹಾನಿಯಾಗದಂತೆ ಸಂರಕ್ಷಿಸುವುದು.

೧೦. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾನದಂಡಕ್ಕನು ಗುಣವಾಗಿ ಬಾಯ್ಲರ್ ಮತ್ತು ಇತರೆ ಪ್ರೆಶರ್ ಪಾರ್ಟ್‌ಗಳ ವಿನ್ಯಾಸ/ತಯಾರಿಕೆಯ ಉಸ್ತುವಾರಿ ವಹಿಸುವುದು.

೧೧. ಬಾಯ್ಲರ್ ಉಪಯೋಗದಲ್ಲಿ ಹಬೆಯ ಉತ್ಪಾದನಾ ವೆಚ್ಚ, ಸಿದ್ಧವಸ್ತುವಿನ ತಯಾರಿಕಾ ವೆಚ್ಚವನ್ನು ಉಳಿಸಲು ಎನರ್ಜಿಯನ್ನು ಉಳಿಸುವ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲು ತಿಳುವಳಿಕೆ ನೀಡುವುದು.

೧೨. ಬಾಯ್ಲರ್ ನಡೆಸುವ ಕಾರ್ಮಿಕರಿಗೆ ಬಾಯ್ಲರನ್ನು ದಕ್ಷತೆ ಮತ್ತು ಸುರಕ್ಷತೆಯಿಂದ ನಡೆಸುವ ಬಗ್ಗೆ ತರಬೇತಿ ನೀಡುವುದು.

೧೩. ಬಾಯ್ಲರ್ ಮತ್ತು ಇನ್ನಿತರೆ ಪ್ರೆಶರ್ ಪಾರ್ಟ್‌ಗಳನ್ನು ತಯಾರಿಸುವವರಿಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ಕ್ರೀಪ್ ಗುಣಮಟ್ಟದ ಮೆಟೀರಿಯಲ್ಸ್‌ಗಳನ್ನು ಬಾಯ್ಲರ್ ತಯಾರಿಕೆಯಲ್ಲಿ ಆಯ್ಕೆ ಮಾಡಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡಿ, ಉತ್ಪಾದನಾ ವೆಚ್ಚವನ್ನು ತಗ್ಗಿಸುವ ಬಗ್ಗೆ ಸಲಹೆ ನೀಡುವುದು.

ರಾಜ್ಯದಲ್ಲಿ ೩೧.೧೨.೨೦೧೫ರ ಹೊತ್ತಿಗೆ ೧೫,೯೦೩ ನೋಂದಾಯಿತ ಕಾರ್ಖಾನೆಗಳು ಇದ್ದು, ೧೭,೫೪,೭೩೧ ಮಂದಿ ಕಾರ್ಮಿಕರು ದುಡಿಯುತ್ತಿದ್ದಾರೆ. ೭೭ ಅತಿ ಅಪಾಯಕಾರಿ ಘಟಕಗಳನ್ನೊಳಗೊಂಡಂತೆ ಒಟ್ಟು ೧೧೮೧ ಅಪಾಯಕಾರಿ ಕಾರ್ಖಾನೆಗಳಿರುತ್ತವೆ.

ಬಾಯ್ಲರ್ ವಿಭಾಗದಲ್ಲಿ ೪೪೫೦ ಬಾಯ್ಲರುಗಳು, ೯೮ ಎಕಾನಾಮೈಸರುಗಳು ಮತ್ತು ೩,೬೩೭ ಹಬೆ ಕೊಳವೆ ನೋಂದಾವಣೆ ಆಗಿರುತ್ತವೆ. ಕರ್ನಾಟಕ ಬಾಯ್ಲರ್ ಅಟೆಂಡೆಂಟ್ ರೂಲ್ಸ್ ೧೯೬೨ ಮತ್ತು ಕರ್ನಾಟಕ ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ರೂಲ್ಸ್ ೧೯೫೫ ಅಡಿಯಲ್ಲಿ, ಬಾಯ್ಲರ್ ಕೆಪಾಸಿಟಿಯ ಆಧಾರದ ಮೇಲೆ ಬಾಯ್ಲರ್ ಅಟೆಂಡೆಂಟ್ ಅಥವಾ ಬಾಯ್ಲರ್ ಆಪರೇಷನ್ ಎಂಜಿನಿಯರ್‌ಗಳ ಉಸ್ತುವಾರಿಯಲ್ಲಿಯೇ ಬಾಯ್ಲರ್‌ನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಬಾಯ್ಲರ್ ಸುರಕ್ಷತೆಗೆ ಒತ್ತು ಕೊಡುವುದರ ಜೊತೆಗೆ ಹಬೆ ಉತ್ಪಾದನೆ ಘಟಕಗಳಲ್ಲಿ 'ದಕ್ಷವಾಗಿ ಹಬೆಯನ್ನು ಉಪಯೋಗಿಸುವ ಬಗ್ಗೆ' ಹಾಗೂ 'ದಕ್ಷತೆಯಿಂದ ಉರುವಲನ್ನು ಉಪಯೋಗಿಸುವ ಬಗ್ಗೆ' ಬಾಯ್ಲರ್ ಅಪರೇಷನ್ ಎಂಜಿನಿಯರ್‌ಗಳಿಗೆ ಮತ್ತು ಅಟೆಂಡರುಗಳಿಗೆ ತರಬೇತಿಯನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನಿರಂತರವಾಗಿ ನೀಡುತ್ತಿದೆ.

ಪ್ರತಿ ವರ್ಷ ಮಾರ್ಚ್ ೨೦೦೪ ರಂದು 'ರಾಷ್ಟ್ರೀಯ ಸುರಕ್ಷತಾ ದಿನಾಚರಣೆ' ಹಾಗೂ ಡಿಸೆಂಬರ್ ೨೦೦೪ ರಂದು 'ರಾಸಾಯನಿಕ ದುರಂತ ನಿವಾರಣಾ' ದಿನವನ್ನು ಅರ್ಥಪೂರ್ಣವಾಗಿ ಮತ್ತು ಉಪಯುಕ್ತವಾಗಿ ಆಚರಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳಲ್ಲಿ ಸುರಕ್ಷತಾ ಓಟ, ಸುರಕ್ಷತಾ ಉಪಕರಣಗಳ ವಸ್ತುಪ್ರದರ್ಶನಗಳನ್ನು ಭಾಗೀದಾರರು ಮತ್ತು ಸಾರ್ವಜನಿಕರ ವೀಕ್ಷಣೆಗೆ ಏರ್ಪಡಿಸಲಾಗುತ್ತದೆ. ಮತ್ತು ಸುರಕ್ಷತಾ ಜಾಹೀರಾತುಗಳನ್ನೊಳಗೊಂಡ "ಸುರಕ್ಷತಾ ವಾಹಿನಿ" ಎಂಬ ತ್ರೈಮಾಸಿಕ ಪತ್ರಿಕೆಯನ್ನು ನಿಯತಕಾಲಿಕವಾಗಿ ಹೊರ ತರಲಾಗುತ್ತಿದೆ.

### ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು

ಕಾರ್ಮಿಕ ರಾಜ್ಯ ವಿಮಾ ಯೋಜನೆಯು ಒಂದು ಸಾಮಾಜಿಕ ಭದ್ರತೆಯ ಪ್ರಮುಖ ಯೋಜನೆಯಾಗಿದ್ದು, ಈ ಯೋಜನೆಯನ್ನು ಪ್ರಥಮವಾಗಿ ದಿ:೨೪-೦೨-೧೯೫೨ರಂದು ಕೈಗಾರಿಕಾ ನಗರವಾದ ದೆಹಲಿ ಹಾಗೂ ಕಾನ್‌ಪುರದಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ಎರಡು ಪ್ರಕಾರವಾದ ಸೇವೆಯನ್ನು ಒದಗಿಸಲಾಗುತ್ತಿದ್ದು, ಅದರಲ್ಲಿ ಒಂದು ವೈದ್ಯಕೀಯೇತರ ಸೇವೆಗಳು, ವೈದ್ಯಕೀಯ ಸೇವೆಯನ್ನು ಕಾರ್ಮಿಕರ ರಾಜ್ಯ ವಿಮಾ ಯೋಜನೆಯ ಮೂಲಕ ವಿಸ್ತರಿಸಲಾಗುತ್ತಿದ್ದು, ಇದು ರಾಜ್ಯ ಸರ್ಕಾರದ ಕಾರ್ಮಿಕ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಇದು ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ ಯೋಜನೆಯನ್ನು ಕರ್ನಾಟಕದಲ್ಲಿ ದಿ:೨೨-೦೭-೧೯೫೮ರಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭದ ಅವಧಿಯಲ್ಲಿ ೪೮,೦೦೦ ವಿಮಾದಾರರಿಗೆ ಒಂದು ೧೦೦ ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ ೧೨ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯದ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಯಿತು. ಕಾರ್ಮಿಕರ ರಾಜ್ಯ ವಿಮಾ ಯೋಜನೆಯ ವ್ಯಾಪ್ತಿಯನ್ನು ಪ್ರಥಮವಾಗಿ ಇಪ್ಪತ್ತು ಮತ್ತು ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವ ಕಾರ್ಖಾನೆಗಳಿಗೆ ವಿಸ್ತರಿಸಲಾಯಿತು ಹಾಗೂ ತಿಂಗಳಿಗೆ ರೂ. ೪೦೦ ವೇತನ ಮೀರದ ಕಾರ್ಮಿಕರನ್ನು ಮಾತ್ರ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ದಿ:೦೧-೦೫-೨೦೧೦ರಿಂದ ಈ ವೇತನ ಮಿತಿಯನ್ನು ಗರಿಷ್ಟ ಮಾಹೆಯಾನ ರೂ.೧೫,೦೦೦ ವೇತನ ಪಡೆಯುತ್ತಿರುವ ಕಾರ್ಮಿಕರಿಗೆ ವಿಸ್ತರಿಸಲಾಗಿರುತ್ತದೆ ಮತ್ತು ಈ ಯೋಜನೆಯ ವ್ಯಾಪ್ತಿಗೆ ಇತರೆ ಸಂಸ್ಥೆಗಳನ್ನು ಸಹ ತರಲಾಗಿದೆ. ಇಪ್ಪತ್ತು ಅಥವಾ ಹೆಚ್ಚು ನೌಕರರನ್ನು ಹೊಂದಿದ್ದು, ವಿದ್ಯುತ್ತನ್ನು ಬಳಸದೆ ಇರುವ ಕಾರ್ಖಾನೆಗಳು ಹಾಗೂ ೧೦ರಿಂದ ಮೇಲ್ಪಟ್ಟು ಕಾರ್ಮಿಕರನ್ನು ಹೊಂದಿದ್ದು ವಿದ್ಯುತ್ತನ್ನು ಬಳಸುತ್ತಿರುವ ಕಾರ್ಖಾನೆಗಳನ್ನು ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ೨೦ ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಅಂಗಡಿ ಮುಂತಾದ ಸಂಸ್ಥೆಗಳು ಹೋಟೆಲ್, ಸಿನಿಮಾ ಮಂದಿರ, ದಿನಪತ್ರಿಕೆ ಸಂಸ್ಥೆ, ರಸ್ತೆ ಸಾರಿಗೆ ಸಂಸ್ಥೆ, ವಾಣಿಜ್ಯ ಸಂಸ್ಥೆಗಳನ್ನು ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಯೋಜನೆಯಡಿ ಏಳು ಪ್ರಮುಖ ಸೌಲಭ್ಯವನ್ನು ವಿಸ್ತರಿಸುತ್ತಿದೆ: ೧. ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯ ೨. ಖಾಯಿಲೆಯಿಂದ ಉಂಟಾಗುವ ಸಂಬಳ ಕಡಿತದ ವಿರುದ್ಧ ಭದ್ರತೆ ೩. ಪ್ರಸವ ಸೌಲಭ್ಯ ೪. ಅಂಗವಿಕಲರಿಗೆ ಪರಿಹಾರ ೫. ಅವಲಂಬಿತರಿಗೆ ಪರಿಹಾರ ೬. ಶವಸಂಸ್ಕಾರ ವೆಚ್ಚ ೭. ನಿರುದ್ಯೋಗಿ ಭತ್ಯೆ/ರಾಜೀವ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ.

**ಇಲಾಖೆಯು ೨೦೧೪-೧೫ನೇ ಸಾಲಿನಲ್ಲಿ ಸಾಧಿಸಿದ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳು:** ಗೊಟ್ಟಿಗೆರೆ, ಬೆಂಗಳೂರು ಪ್ರದೇಶಗಳಲ್ಲಿ ಪೂರ್ಣ ಕಾ.ರಾ.ವಿ. ಚಿಕಿತ್ಸಾಲಯವನ್ನು ಪ್ರಾರಂಭಿಸಲಾಗಿದೆ. ಕಾ.ರಾ.ವಿ.ಯೋಜನೆಯನ್ನು ದೇವನಹಳ್ಳಿ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇದರಿಂದ ೬೦೦೦ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ವಿಸ್ತರಿಸಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಂಜಾರು ಪ್ರದೇಶಕ್ಕೂ ಈ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಇದರಿಂದ ಸುಮಾರು ೫೩೦ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ವಿಸ್ತರಿಸಲಾಗಿದೆ. ದೊಡ್ಡಬಳ್ಳಾಪುರ ಹಾಗೂ ಯಲಹಂಕದ ಕಾ.ರಾ.ವಿ. ಚಿಕಿತ್ಸಾಲಯಗಳನ್ನು ವಿಶಾಲವಾದ ಕಟ್ಟಡಗಳಿಗೆ ಸ್ಥಳಾಂತರಿಸಲಾಗಿದೆ. ಇಲಾಖೆಯು ೨೦ ಆರೋಗ್ಯ ತಪಾಸಣಾ ಶಿಬಿರ ಹಾಗೂ ೦೮ ಸಿ.ಎಂ.ಇ. ಪ್ರೋಗ್ರಾಂಗಳನ್ನು ಆಯೋಜಿಸಿರುತ್ತದೆ. ರಾಜ್ಯ ಸರ್ಕಾರವು ೨೦೧೪-೧೫ನೇ ಸಾಲಿನಲ್ಲಿ ವೈದ್ಯಕೀಯ ಮತ್ತು ಜನಾರೋಗ್ಯ ಶೀರ್ಷಿಕೆಯಲ್ಲಿ ಯೋಜನೆ, ಯೋಜನೇತರ ಮತ್ತು ಯೋಜನೇತರ ಆಯುರ್ವೇದಿಕ್‌ಗಳಿಗೆ ರೂ. ೧೬,೨೪೧.೨೬ ಲಕ್ಷಗಳನ್ನು ಒದಗಿಸಲಾಗಿದ್ದು, ಅದರಲ್ಲಿ ರೂ. ೧೫,೧೩೭.೭೦ ಲಕ್ಷಗಳನ್ನು ವೆಚ್ಚ ಮಾಡಿ ಶೇ.೯೫.೧೯ ಪ್ರಗತಿ ಸಾಧಿಸಲಾಗಿದೆ.

೨೦೧೫-೧೬ನೇ ಸಾಲಿನಲ್ಲಿ ವೈದ್ಯಕೀಯ ಮತ್ತು ಜನಾರೋಗ್ಯ ಶೀರ್ಷಿಕೆಯಲ್ಲಿ ಯೋಜನೆ, ಯೋಜನೇತರ ಮತ್ತು ಯೋಜನೇತರ ಆಯುರ್ವೇದಿಕ್‌ಗಳಿಗೆ ರೂ. ३३,२५२.೦೦ ಲಕ್ಷಗಳನ್ನು ಒದಗಿಸಲಾಗಿದ್ದು, ಅದರಲ್ಲಿ ರೂ. ३೧,೮೮೫.೪೭ ಲಕ್ಷಗಳನ್ನು ವೆಚ್ಚ ಮಾಡಿ ಶೇ. ೯೩.೨೦ ಸಾಧನೆ ಮಾಡಲಾಗಿದೆ

### ಉದ್ಯೋಗ ಮತ್ತು ತರಬೇತಿ ಇಲಾಖೆ

ಉದ್ಯೋಗ ಮತ್ತು ತರಬೇತಿ ಇಲಾಖೆಯು ಉದ್ಯೋಗಾಕಾಂಕ್ಷಿಗಳಿಗೆ ರಾಷ್ಟ್ರೀಯ ಸೇವೆಯನ್ನು ಹಾಗೂ ಯುವ ಜನರಿಗೆ ವೃತ್ತಿಪರ ತರಬೇತಿ ಯೋಜನೆಯನ್ನು ಉದ್ಯೋಗಕ್ಕೆ ಅಥವಾ ಸ್ವಯಂ ಉದ್ಯೋಗಕ್ಕೆ ಅನುಕೂಲವಾಗುವಂತೆ ಭಾರತ ಸರ್ಕಾರವು ರೂಪಿಸಿರುವ ನೀತಿ ನಿಯಮಗಳ ಪ್ರಕಾರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತರಿಗೆ ನಿರ್ದೇಶಕರು, ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು(ತರಬೇತಿ) ಹಾಗೂ ಉಪ ನಿರ್ದೇಶಕರು(ತರಬೇತಿ) ಹಾಗೂ ಇನ್ನಿತರ ಅಧಿಕಾರಿಗಳು, ಸಿಬ್ಬಂದಿಗಳು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೆರವಾಗುತ್ತಿದ್ದಾರೆ.

**ಇಲಾಖೆಯ ಮುಖ್ಯ ಉದ್ದೇಶಗಳು:** ನಿರುದ್ಯೋಗಿಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಹಾಗೂ ಉದ್ಯೋಗಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಮಾರುಕಟ್ಟೆಯ ಬಗ್ಗೆ ಮಾಹಿತಿಗಳನ್ನು ಒದಗಿಸುವುದು. ತಾಂತ್ರಿಕ ಕ್ಷೇತ್ರದಲ್ಲಿ ಯುವಜನರಿಗೆ ತರಬೇತಿ ನೀಡಿ ಅವರಿಗೆ ಕೈಗಾರಿಕೆಗಳಲ್ಲಿ ನಿಪುಣ ಕೆಲಸಗಾರರಾಗಿ ಉದ್ಯೋಗ ಕಲ್ಪಿಸಲು ನೆರವಾಗುವುದು. ಕೈಗಾರಿಕಾ ಉದ್ಯಮಗಳಲ್ಲಿ ಕೆಲಸ ಮಾಡುವ ಕುಶಲಕರ್ಮಿಗಳಿಗೆ ಪುನರ್ ತರಬೇತಿ ಮತ್ತು ಮುಂದುವರೆದ ಉಚ್ಛ ತರಬೇತಿ ನೀಡುವುದರ ಮೂಲಕ ಕೈಗಾರಿಕೋತ್ಪನ್ನಗಳ ಗುಣಮಟ್ಟ ಹೆಚ್ಚಿಸುವುದು. ಗ್ರಾಮಾಂತರ ಪ್ರದೇಶದ ಅನಕ್ಷರಸ್ಥ ಹಾಗೂ ಅಲ್ಪ-ಅಕ್ಷರಸ್ಥರಿಗೆ ಸ್ವಯಂ ಉದ್ಯೋಗ ಅವಕಾಶಕ್ಕೆ ಅನುಕೂಲವಾಗುವಂತೆ ವಿವಿಧ ವೃತ್ತಿಗಳಲ್ಲಿ ತಾಂತ್ರಿಕ ತರಬೇತಿ ನೀಡುವುದು. ವೃತ್ತಿ ತರಬೇತಿಯ ಕ್ಷೇತ್ರದಲ್ಲಿ ಯುವಜನರಿಗೆ ತರಬೇತಿಯನ್ನು ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಶಿಶಿಕ್ಷು ಯೋಜನೆಯನ್ನು ರಾಷ್ಟ್ರೀಯ ಶಿಶಿಕ್ಷು ಅಧಿನಿಯಮ

೧೯೬೧ರ ಅಡಿಯಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಅಧಿನಿಯಮದನ್ವಯ ಎಲ್ಲಾ ಕೈಗಾರಿಕಾ ಉದ್ಯಮಗಳು, ಶಿಶಿಕ್ಷು ಅಭ್ಯರ್ಥಿಗಳನ್ನು ವಿವಿಧ ತರಬೇತಿಗೆ ಸೇರಿಸಲು ಕಟ್ಟುಪಾಡನ್ನು ಹೊರಿಸುತ್ತದೆ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ ೧೯೫೯ ಮತ್ತು ೧೯೬೦ಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

**ತರಬೇತಿ ವಿಭಾಗ:** ಕೈಗಾರಿಕಾ ರಂಗ ಹಾಗೂ ತಾಂತ್ರಿಕ ಜ್ಞಾನ ಕ್ಷೇತ್ರದಲ್ಲಿ ತ್ವರಿತಗತಿಯಲ್ಲಿ ಬದಲಾವಣೆ ಆಗುತ್ತಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಅರ್ಹ ಮತ್ತು ನಿಪುಣ ಕುಶಲಕರ್ಮಿಗಳ ಅಗತ್ಯವಿದೆ. ಕೈಗಾರಿಕಾ ವೃತ್ತಿಗಳಲ್ಲಿ ಅಂದರೆ ಜೋಡಣೆ, ಟರ್ನರ್, ಎಲೆಕ್ಟ್ರಾನಿಕ್ಸ್, ಗಣಕೀಕರಣ, ರೆಫ್ರಿಜಿರೇಷನ್, ಮೆಷಿನಿಸ್ಟ್ ಮುಂತಾದ ಕ್ಷೇತ್ರಗಳಲ್ಲಿ ನಿಪುಣತೆ ಹೊಂದಿದ ಪ್ರೌಢ ಪುರುಷರು ಹಾಗೂ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಇವೆ. ಅಂತೆಯೇ ವ್ಯಕ್ತಿ ತರಬೇತಿ ಪಡೆಯಲು ಆಸಕ್ತಿ ಹೊಂದಿರುವ ಯುವಕ ಯುವತಿಯರ ಸಂಖ್ಯೆಯೂ ಹೆಚ್ಚುತ್ತಿದೆ. ಉದ್ಯೋಗ ಮತ್ತು ತರಬೇತಿ ಇಲಾಖೆಯು ತರಬೇತಿ ನೀಡಲು ಅಗತ್ಯವಾದ ಸೌಲಭ್ಯಗಳನ್ನು ರಾಜ್ಯದಲ್ಲಿ ಹೊಂದಿರುವುದರಿಂದ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ತಮ ಸ್ಥಿತಿಯಲ್ಲಿದೆ.

**ತರಬೇತಿ ವಿಭಾಗದ ಮುಖ್ಯ ಉದ್ದೇಶಗಳು:** ನಿಪುಣ ಕೆಲಸಗಾರರು ಕೈಗಾರಿಕೆಗಳಿಗೆ ನಿರಂತರವಾಗಿ ದೊರೆಯುವಂತೆ ಮಾಡುವುದು. ಕ್ರಮಬದ್ಧವಾದ ತರಬೇತಿ ಮತ್ತು ಪುನರ್ ತರಬೇತಿ ನೀಡುವುದರ ಮೂಲಕ ಉತ್ಪಾದನೆಯ ಗುಣಮಟ್ಟವನ್ನು ಹೆಚ್ಚಿಸುವುದು. ಕೈಗಾರಿಕಾ ಉದ್ಯಮಗಳಲ್ಲಿ ಉದ್ಯೋಗ ಪಡೆಯಲು ಹಾಗೂ ಸ್ವಯಂ ಉದ್ಯೋಗದ ಸಲುವಾಗಿ ತರಬೇತಿಯನ್ನು ನೀಡುವುದರ ಮೂಲಕ ಯುವಜನರ ಕೌಶಲ್ಯತೆಯನ್ನು ಹೆಚ್ಚಿಸಿ ನಿರುದ್ಯೋಗದ ಪ್ರಮಾಣವನ್ನು ಕಡಿಮೆ ಮಾಡುವುದು.

**ತರಬೇತಿ ಕಾರ್ಯಕ್ರಮಗಳು:** ೧. ಕುಶಲಕರ್ಮಿ ತರಬೇತಿ ಯೋಜನೆ, ೨. ಮಾನವ ಸಂಪನ್ಮೂಲ ಅಭಿವೃದ್ಧಿ, ೩. ರಾಜ್ಯ ಮಟ್ಟದ ವೃತ್ತಿ ಕೌಶಲ್ಯ ಸ್ಪರ್ಧೆ(ಎನ್.ಸಿ.ವಿ.ಟಿ), ೪. ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ತಿಗೆ ಸಂಯೋಜನೆ, ೫. ಶಿಶಿಕ್ಷು ತರಬೇತಿ ಯೋಜನೆ, ೬. ರಾಜ್ಯ ಯೋಜನಾ ಅನುಷ್ಠಾನ ಘಟಕ(ಎಸ್.ಪಿ.ಐ.ಯು)

### ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ವೃತ್ತಿ ಜೀವನ ಕಲೆ/ ಇಂಗ್ಲೀಷ್ ಕಲಿಕೆಯನ್ನು ನೀಡಲು ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಜ್ಞಾನ ಆಯೋಗದ ಸಹಯೋಗದೊಂದಿಗೆ ಸಹಯೋಗ ಕಾರ್ಯಕ್ರಮದಡಿಯಲ್ಲಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ೨೦೧೪ರಲ್ಲಿ ೧೦ ಮಿನಿ ಉದ್ಯೋಗ ಮೇಳಗಳನ್ನು ಹಾಗೂ ೦೨ ಬೃಹತ್ ಉದ್ಯೋಗ ಮೇಳಗಳನ್ನು ಏರ್ಪಡಿಸಲಾಗಿದೆ. ಈ ಮೇಳಗಳಲ್ಲಿ ಒಟ್ಟು ೧೬೦೩ ಜನ ಉದ್ಯೋಗ ಪಡೆದಿದ್ದಾರೆ. ೨೦೧೫ರಲ್ಲಿ ೬೨ ಉದ್ಯೋಗ ಮೇಳಗಳನ್ನು ಇಲಾಖೆಯು ಏರ್ಪಡಿಸಿದೆ. ಆ ಮೂಲಕ ೨೦೪೭ ಅಭ್ಯರ್ಥಿಗಳಿಗೆ ಉದ್ಯೋಗವನ್ನು ದೊರಕಿಸಿಕೊಡಲಾಗಿದೆ.

### ವಿಶೇಷ ಹೊಸ ಯೋಜನೆಗಳು:

೧) ಉದ್ಯೋಗಾವಕಾಶ ೨) ರಾಜ್ಯ ವೃತ್ತಿ ಶಿಕ್ಷಣ ಅಡಿಯಲ್ಲಿ ಶಿಶಿಕ್ಷು ತರಬೇತಿ ಯೋಜನೆ, ೩) ಭೂಸ್ವಾಧೀನ ಸಂತ್ರಸ್ಥರಿಗೆ ಕೌಶಲ್ಯ ತರಬೇತಿ ಹಾಗೂ ಉದ್ಯೋಗಾವಕಾಶ, ೪) ಸಾರ್ವಜನಿಕ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು. ೫) ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಕೇಂದ್ರಗಳನ್ನಾಗಿ ಪರಿವರ್ತಿಸುವುದು, ೬) ವಿವಿಧ ಇಲಾಖೆಗಳ ತರಬೇತಿ ಕಾರ್ಯಕ್ರಮಗಳನ್ನು ಒಂದೇ ವೇದಿಕೆ ಅಡಿ ತರುವುದು.

**ಉದ್ಯೋಗ ವಿಭಾಗ:** ರಾಷ್ಟ್ರೀಯ ಉದ್ಯೋಗ ಸೇವೆಯು ಜುಲೈ ೧೯೪೫ರಲ್ಲಿ ವಿಶ್ವ ಸಮರದ ನಂತರ ತೊಂದರೆಗೀಡಾದ ಸೈನಿಕರಿಗೆ ಪುನರ್ವಸತಿಯನ್ನು ಕಲ್ಪಿಸುವ ಸಲುವಾಗಿ ಅಸ್ತಿತ್ವಕ್ಕೆ ಬಂದಿತು. ಈ ಸೇವೆ ೧೯೪೬ರ ಅಂತ್ಯದವರೆಗೆ ಅಂತಹ ಮಾಜಿ ಸೈನಿಕರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುವುದಕ್ಕೆ ಸೀಮಿತವಾಗಿತ್ತು. ೧೯೪೮ರ ಪ್ರಾರಂಭದಲ್ಲಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಆ ವೇಳೆಗೆ ಅಸ್ತಿತ್ವಕ್ಕೆ ಬಂದಿದ್ದ ಉದ್ಯೋಗ ವಿನಿಮಯ ಕೇಂದ್ರಗಳ ಸೇವೆ ಎಲ್ಲರಿಗೂ ಪ್ರಾಪ್ತವಾಗುವಂತೆ ವಿಸ್ತರಿಸಲಾಯಿತು. ೧೯೪೫ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರವನ್ನು ತೆರೆಯುವುದರ ಮೂಲಕ ಉದ್ಯೋಗ ಸೇವೆಯು ಕರ್ನಾಟಕದಲ್ಲಿ ಪ್ರಾರಂಭಗೊಂಡಿತು. ೧೯೫೨ರಲ್ಲಿ ಮೈಸೂರಿನಲ್ಲಿ ಇನ್ನೊಂದು ಕೇಂದ್ರವು ತೆರೆಯಲ್ಪಟ್ಟು, ೧೯೫೬ರ ರಾಜ್ಯ ಏಕೀಕರಣದ ನಂತರ ಹಂತ ಹಂತವಾಗಿ ಉದ್ಯೋಗ ವಿನಿಮಯ ಕೇಂದ್ರಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಸ್ತಿತ್ವಕ್ಕೆ ಬಂದವು. ಪ್ರಸ್ತುತ ರಾಜ್ಯದಲ್ಲಿ ಒಟ್ಟು ೪೦ ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇಲಾಖೆಯ ನಿರ್ದೇಶನಾಲಯದಲ್ಲಿ ಆಯುಕ್ತರಿಗೆ ಸಹಾಯಕರಾಗಿ ಉದ್ಯೋಗ ವಿಭಾಗದಲ್ಲಿ ಒರ್ವ ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು ಮತ್ತು ಇಬ್ಬರು ಸಹಾಯಕ ನಿರ್ದೇಶಕರು ಕಾರ್ಯನಿರತರಾಗಿರುತ್ತಾರೆ. ೨೦೧೦ನೇ ಸಾಲಿನಲ್ಲಿ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಲು, ೨೧ ಉದ್ಯೋಗ ಮೇಳಗಳನ್ನು ಇಲಾಖೆಯು ಏರ್ಪಡಿಸಿರುತ್ತದೆ. ಎನ್.ಐ.ಸಿ. ನವದೆಹಲಿ, ಯವರಿಂದ ಅಭಿವೃದ್ಧಿಪಡಿಸಿರುವ "ವೆಬ್ ಆಧಾರಿತ ಪೋರ್ಟಲ್" ಅನ್ನು ರಾಜ್ಯದ ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಅಳವಡಿಸಿದ್ದು, ಇದೊಂದು ರಾಷ್ಟ್ರೀಯ ಇ-ಆಡಳಿತ ಕಾರ್ಯಕ್ರಮದಲ್ಲಿನ Mission Mode Project ಗಳಲ್ಲಿ ಒಂದಾಗಿರುತ್ತದೆ. ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಾಕಾಂಕ್ಷಿಗಳ ನೋಂದಣಿಯನ್ನು ವೆಬ್ ಆಧಾರಿತ ಪೋರ್ಟಲ್‌ನ ಮೂಲಕ ಮಾಡಲಾಗುತ್ತಿದೆ. ಹೊಸದಾಗಿ ರಚಿಸಲಾದ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

### ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಜಾರಿಗೊಳಿಸುತ್ತಿದೆ. ಪರಿಶಿಷ್ಟ ಜಾತಿಯವರ ಶೈಕ್ಷಣಿಕ, ಸಾಮಾಜಿಕ,

ಆರ್ಥಿಕ, ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಆಯುಕ್ತರು ಮುಖ್ಯಸ್ಥರಾಗಿದ್ದು, ಇವರ ಅಧೀನದಲ್ಲಿ ಇಬ್ಬರು ಅಪರ ನಿರ್ದೇಶಕರು, ಐದು ಜನ ಜಂಟಿ ನಿರ್ದೇಶಕರು, ಎಂಟು ಜನ ಉಪನಿರ್ದೇಶಕರು, ಒಬ್ಬ ಮುಖ್ಯ ಲೆಕ್ಕಾಧಿಕಾರಿ ಮತ್ತು ಇಬ್ಬರು ಸಹಾಯಕ ನಿರ್ದೇಶಕರು ಹಾಗೂ ಇಬ್ಬರು ಪತ್ರಾಂಕಿತ ವ್ಯವಸ್ಥಾಪಕರು ಕೇಂದ್ರಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಾರೆ.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆಗೆ ಒಬ್ಬರು ಜಂಟಿ ನಿರ್ದೇಶಕರಿದ್ದು, ಅವರೇ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಸಹಾಯಕರಾಗಿ ಒಬ್ಬರು ಉಪನಿರ್ದೇಶಕರು, ಒಬ್ಬರು ಆಡಳಿತಾಧಿಕಾರಿ ಹಾಗೂ ಇತರೆ ಸಿಬ್ಬಂದಿ ವರ್ಗದವರಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ಪರೀಕ್ಷಾ ಪೂರ್ವ ತರಬೇತಿ ಕೇಂದ್ರವನ್ನು ಬೆಂಗಳೂರಿನಲ್ಲಿ ನಡೆಸಲಾಗುತ್ತಿದೆ. ಬೆಂಗಳೂರು ವಸಂತನಗರದ ಅಂಬೇಡ್ಕರ್ ಭವನದಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರವಿದೆ. ಇಲ್ಲಿ ನಾಗರೀಕ ಸೇವೆಗಳಾದ, ಭಾರತೀಯ ಆಡಳಿತ ಸೇವೆ, ಕರ್ನಾಟಕ ಆಡಳಿತ ಸೇವೆಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ, ಲೋಕಸೇವಾ ಆಯೋಗ ಹಾಗೂ ಬ್ಯಾಂಕಿಂಗ್ ಪರೀಕ್ಷೆಯನ್ನೊಳಗೊಂಡಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉಚಿತವಾಗಿ ತರಬೇತಿಗಳನ್ನು ನೀಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮುಖ್ಯಸ್ಥರಾಗಿದ್ದು, ಇವರು ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ತಾಲೂಕು ಮಟ್ಟದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಗಳಿದ್ದು, ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು ತಾಲೂಕಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಇಲಾಖೆಯ ಕಾರ್ಯಕ್ರಮಗಳನ್ನು ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಹಮತಿಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ೧೭೬ ತಾಲೂಕುಗಳಲ್ಲಿ ೮೦ ತಾಲೂಕುಗಳ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಗ್ರೂಪ್ 'ಎ' ವೃಂದದ ಸಹಾಯಕ ನಿರ್ದೇಶಕರು ಗ್ರೇಡ್–೧ ಎಂದು ಪದನಾಮ ಮಾಡಲಾಗಿದೆ. ಹಾಗೆಯೇ ಉಳಿದ ೯೬ ತಾಲೂಕುಗಳಲ್ಲಿರುವ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಯನ್ನು ಗ್ರೂಪ್ 'ಬಿ' ವೃಂದದ ಸಹಾಯಕ ನಿರ್ದೇಶಕರು ಗ್ರೇಡ್–೨ ಹುದ್ದೆಗಳೆಂದು ಪದನಾಮ ಮಾಡಲಾಗಿದೆ.

**ಯೋಜನಾ ಕಾರ್ಯಕ್ರಮಗಳು:** ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಿಗಾಗಿ ಯೋಜನೆ ರೂ.೧,೭೫,೯೪೯.೩೦ ಲಕ್ಷಗಳನ್ನು, ಯೋಜನೇತರ ರೂ.೪೦,೪೨೫.೮೪ ಲಕ್ಷಗಳನ್ನು, ಒಟ್ಟು ರೂ.೨,೧೬,೪೧೫.೧೪ ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ. ೨೦೧೪–೧೫ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಿಗಾಗಿ ಯೋಜನೆ ರೂ.೨,೬೯,೬೬೦.೨೮ ಲಕ್ಷಗಳನ್ನು, ಯೋಜನೇತರ ರೂ.೪೫,೯೭೨.೭೬ ಲಕ್ಷಗಳನ್ನು, ಒಟ್ಟು ರೂ.೩,೧೫,೬೩೩.೦೪ ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ. ೨೦೧೫–೧೬ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಿಗಾಗಿ ಯೋಜನೆ ರೂ.೨,೯೩,೫೨೬.೦೦ ಲಕ್ಷಗಳನ್ನು, ಯೋಜನೇತರ ರೂ.೪೯,೭೫೩.೦೦ ಲಕ್ಷಗಳನ್ನು, ಒಟ್ಟು ರೂ.೩,೪೩,೨೭೯.೦೦ ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

ಇದರಲ್ಲಿ ೨೦೧೩–೧೪ನೇ ಸಾಲಿನಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಸೇರಿದಂತೆ ಒಟ್ಟಾರೆಯಾಗಿ ರೂ.೧,೮೭,೪೭೪.೭೭ ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ಬಿಡುಗಡೆಗೆ ಪ್ರತಿಯಾಗಿ ಶೇ. ೯೮.೯೬ರಷ್ಟು ಸಾಧನೆ ಮಾಡಲಾಗಿದೆ. ಇದರಲ್ಲಿ ಯೋಜನೆಯಡಿ ರೂ. ರೂ.೧,೭೬,೬೪೦.೪೯ ಲಕ್ಷಗಳನ್ನು ಯೋಜನೇತರ ರೂ.೪೦,೯೯೩.೩೫ ಖರ್ಚಾಗಿದ್ದು, ಒಟ್ಟಾರೆ ರೂ.೨,೧೭,೬೩೩.೮೪ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ರೂ.೬,೧೩೫.೫೭ಕೋಟಿಗಳನ್ನು ಒದಗಿಸಿಕೊಂಡಿದ್ದು, ಮಾರ್ಚ್ ೨೦೧೪ರ ಅಂತ್ಯದ ವೇಳೆಗೆ ರೂ.೫,೨೫೩.೩೧ಕೋಟಿಗಳನ್ನು ಖರ್ಚು ಮಾಡಲಾಗಿದೆ.

೨೦೧೪–೧೫ನೇ ಸಾಲಿನಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಸೇರಿದಂತೆ ಒಟ್ಟಾರೆಯಾಗಿ ರೂ.೨,೮೨,೨೧೮.೩೧ ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ಬಿಡುಗಡೆಗೆ ಪ್ರತಿಯಾಗಿ ಶೇ. ೯೪.೭೦ರಷ್ಟು ಸಾಧನೆ ಮಾಡಲಾಗಿದೆ. ಇದರಲ್ಲಿ ಯೋಜನೆಯಡಿ ರೂ.೨೩೮೮೭೬.೧೯ ಲಕ್ಷಗಳನ್ನು ಯೋಜನೇತರ ೪೩೩೪೨.೧೨ ಖರ್ಚಾಗಿದ್ದು, ಒಟ್ಟಾರೆ ೨೮೨೨೧೮.೩೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ ಜಾತಿ ಉಪಯೋಜನೆಯಡಿಯಲ್ಲಿ ರೂ.೯,೯೦೩.೪೨ಕೋಟಿಗಳನ್ನು ಒದಗಿಸಿಕೊಂಡಿದ್ದು, ಮಾರ್ಚ್ ಅಂತ್ಯದ ವೇಳೆಗೆ ರೂ.೯,೭೦೭.೯೦ ಕೋಟಿಗಳನ್ನು ಖರ್ಚು ಮಾಡಲಾಗಿದೆ. ಶೇ. ೮೧.೧೩ರಷ್ಟು ಪ್ರಗತಿ ಸಾಧಿಸಲಾಗಿದೆ. ೨೦೧೪–೧೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ೪೨ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು, ೨೦೧೫ರ ಮಾರ್ಚ್ ಅಂತ್ಯದ ವೇಳೆಗೆ ೫೫೫.೦೦ ಕೋಟಿಗಳನ್ನು ಖರ್ಚು ಮಾಡಲಾಗಿದ್ದು, ಶೇ.೧೦೦ರಷ್ಟು ಪ್ರಗತಿ ಸಾಧಿಸಲಾಗಿದೆ.

೨೦೧೪–೧೫ನೇ ಸಾಲಿನಲ್ಲಿ ರೂ.೬,೫೭೬.೩೮ ಲಕ್ಷಗಳ ವೆಚ್ಚದಲ್ಲಿ ೨೮೦ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಲ್ಲಿ ಅಗತ್ಯ ದುರಸ್ತಿ ಮತ್ತು ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹಾಗೆಯೇ ೩೨ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಸಂಕೀರ್ಣ ನಿರ್ಮಾಣಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳಲ್ಲಿ ೧೦ ವಸತಿ ಶಾಲಾ ಸಂಕೀರ್ಣಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದೇ ಸಾಲಿನಲ್ಲಿ ಒಟ್ಟು ೬,೫೧,೧೪೧ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ, ೩,೧೩,೧೩೨ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿ ಮಂಜೂರು ಮಾಡಿ ಅವರ ವೈಯಕ್ತಿಕ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

೨೦೧೫–೧೬ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ ರಾಜ್ಯ ವಲಯ

ಮತ್ತು ಜಿಲ್ಲಾ ವಲಯ ಸೇರಿದಂತೆ ಒಟ್ಟಾರೆಯಾಗಿ ರೂ.೩೪,೩೨೭೯.೦೦ ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ. ಇದರಲ್ಲಿ ಯೋಜನೆಯಡಿ ರೂ.೨,೯೩,೫೨೬.೦೦ ಲಕ್ಷಗಳನ್ನು ಯೋಜನೇತರ ರೂ.೪೯,೭೫೩.೦೦ ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ರೂ.೧,೧೫,೧೮೭೩.೦೦ಲಕ್ಷಗಳನ್ನು ಒದಗಿಸಲಾಗಿದೆ.

## ರಾಜ್ಯವಲಯದ ಕಾರ್ಯಕ್ರಮಗಳು

ರಾಜ್ಯ ವಲಯದಲ್ಲಿ ೨೦೧೫-೧೬ನೇ ಸಾಲಿನಲ್ಲಿ ೨೨ ಯೋಜನಾ ಕಾರ್ಯಕ್ರಮಗಳು ಹಾಗೂ ೭ ಯೋಜನೇತರ ಕಾರ್ಯಕ್ರಮಗಳು ಹಾಗೂ ಜಿಲ್ಲಾ ವಲಯದಲ್ಲಿ ೧೭ ಯೋಜನಾ ಮತ್ತು ೧೪ ಯೋಜನೇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ನಾಗರಿಕ ಹಕ್ಕು ಸಂರಕ್ಷಣಾ ಯೋಜನೆ:** ೧೯೭೪ರಲ್ಲಿ ನಾಗರೀಕ ಹಕ್ಕು ಜಾರಿ ಸಂರಕ್ಷಣಾ ಘಟಕವನ್ನು ಪ್ರಾರಂಭಿಸಲಾಗಿದ್ದು, ೧೯೮೮ರಲ್ಲಿ ನಿರ್ದೇಶನಾಲಯವಾಗಿದ್ದು, ಇದಕ್ಕೆ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರು ಮುಖ್ಯಸ್ಥರಾಗಿರುತ್ತಾರೆ. ಸದರಿ ನಿರ್ದೇಶನಾಲಯವು ಏಳು ಪ್ರಾದೇಶಿಕ ಕೇಂದ್ರಗಳನ್ನು ಹೊಂದಿರುತ್ತದೆ. ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ಬೆಂಗಳೂರು ಕೇಂದ್ರ ಸ್ಥಾನಗಳಲ್ಲಿ ಅಸ್ಪೃಶ್ಯತಾ ನಿವಾರಣಾ ಕಾಯ್ದೆ ೧೯೫೫ ಅನ್ನು ಜಾರಿಗೊಳಿಸುವ ಮತ್ತು ದೌರ್ಜನ್ಯ ನಿಯಂತ್ರಣ ಕಾಯ್ದೆ ೧೯೮೯ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಉದ್ಯೋಗ ಇತರೆ ಮೀಸಲಾತಿ ಪಡೆಯುವ ಪ್ರಕರಣಗಳನ್ನು ಪರಿಶೀಲಿಸಲು ತನಿಖಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

**ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ಶತಮಾನದ ಕಾರ್ಯಕ್ರಮದಡಿ ಸಂಶೋಧನ ಸಂಸ್ಥೆ :** ಈ ಸಂಶೋಧನಾ ಸಂಸ್ಥೆಯ ಮುಖ್ಯ ಉದ್ದೇಶ ಪರಿಶಿಷ್ಟ ಜಾತಿಗಳ ಸಾಮಾಜಿಕ, ಆರ್ಥಿಕ, ಹಾಗೂ ಶೈಕ್ಷಣಿಕ ರಂಗಗಳಲ್ಲಿಯ ಸ್ಥಾನಮಾನಗಳ ಬಗ್ಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯು ಅನುಷ್ಠಾನಗೊಳಸುತ್ತಿರುವ ಕಾರ್ಯಕ್ರಮಗಳ ಪರಿಣಾಮ ಕುರಿತ ಅಧ್ಯಯನ ಮತ್ತು ಶಿಫಾರಸ್ಸು ಮುಂತಾದವುಗಳ ಬಗ್ಗೆ ನಿಯತಕಾಲಿಕವಾಗಿ ಸಮೀಕ್ಷೆ ನಡೆಸುವುದು, ಇದಲ್ಲದೆ ಇದುವರೆಗೆ ವಿವಿಧ ಯೋಜನೆಗಳಡಿ ಆರ್ಥಿಕ ಸಹಾಯ ಮತ್ತು ಸವಲತ್ತುಗಳನ್ನು ನೀಡಿದ್ದರ ಬಗ್ಗೆ ಎಷ್ಟೋ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಅವರ ಆರ್ಥಿಕ ಪರಿಸ್ಥಿತಿ ಬಗ್ಗೆ ಮತ್ತು ಕೆಲವು ಯೋಜನೆಗಳನ್ನು ಮಾರ್ಪಡಿಸಿ ಹೊಸ ಯೋಜನೆಗಳನ್ನು ರೂಪಿಸಲು ಸಹಾಯಕವಾಗುವಂತೆ ಸಮೀಕ್ಷೆ ಕೈಗೊಳ್ಳುವುದು.

ಈ ಸಂಸ್ಥೆಯಿಂದ ಪ್ರತ್ಯೇಕ ಪುಸ್ತಕ ಭಂಡಾರ, ತರಬೇತಿ ಕಾರ್ಯಕ್ರಮ, ಸಮ್ಮೇಳನಗಳನ್ನು ನಡೆಸುವುದು ಹಾಗೂ ವಿವಿಧ ವಿಷಯಗಳ ಬಗ್ಗೆ ವಿಚಾರ ಸಂಕಿರಣ ಮತ್ತು ಗೋಷ್ಠಿಗಳನ್ನು ನಡೆಸುವುದು, ಇಲಾಖಾ ಕಾರ್ಯಕ್ರಮಗಳ ಉಪಯೋಗದ ಬಗ್ಗೆ ಹಾಗೂ ಸೂಕ್ತ ಬದಲಾವಣೆಗಳ ಬಗ್ಗೆ ಅಧ್ಯಯನ ನಡೆಸುವುದು, ಇದಲ್ಲದೆ ಇಲಾಖಾ ಕಾರ್ಯಕ್ರಮಗಳ ಮೌಲ್ಯ ಮಾಪನ ಉಸ್ತುವಾರಿಯೂ ಸಹ ಈ ಸಂಸ್ಥೆಯ ಧ್ಯೇಯವಾಗಿದೆ.

ಸರ್ಕಾರ ಸೂಚಿಸುವ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ವತಿಯಿಂದ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ತಾಲೂಕಿನ ವಿವಿಧ ಹಂತದ ನೌಕರರಿಗೆ ತರಬೇತಿ ಕಾರ್ಯಕ್ರಮಗಳು, ಎಸ್.ಎಸ್. ಎಲ್.ಸಿ/ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಮೂಹ ಕಾರ್ಯಾಗಾರಗಳು, ಹೈದರಾಬಾದ್-ಕರ್ನಾಟಕ ಮೀಸಲಾತಿ ಬಗ್ಗೆ ಕಾರ್ಯಾಗಾರ, ಅರಿವು ಮೂಡಿಸುವ ಹಾಗೂ ಸಾಕ್ಷ್ಯ ಚಿತ್ರ ತಯಾರಿಸುವ ಕಾರ್ಯಕ್ರಮಗಳಿಗೆಂದು ೨೦೧೩-೧೪ನೇ ಸಾಲಿನಲ್ಲಿ ರೂ.೭೫.೦೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಅವಧಿಯಲ್ಲಿ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಮೂಹ ತರಬೇತಿಯನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮಗಳಲ್ಲಿ ಒಟ್ಟು ೪೪೦೭ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ. ೨೦೧೪-೧೫ನೇ ಸಾಲಿನಲ್ಲಿ ೧೩೦.೭೧ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ರೂ.೧೫೭.೦೦ ಲಕ್ಷಗಳನ್ನು ಒದಗಿಸಲಾಗಿದೆ.

**ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ:** ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವನ್ನು ೧೩.೧೦.೨೦೦೫ರಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಎಂದು ಮರುನಾಮಕರಣ ಮಾಡಿತು. ಈ ನಿಗಮದ ವತಿಯಿಂದ ಸ್ವಯಂ ಉದ್ಯೋಗಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಮೈಕ್ರೋ ಫೈನಾನ್ಸ್ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಈ ನಿಗಮದ ವತಿಯಿಂದ ೨೦೧೩-೧೪ನೇ ಸಾಲಿನಲ್ಲಿ ೮೩೩೧ ಫಲಾನುಭವಿಗಳಿಗೆ ರೂ. ೩೬೪೬.೬೪ ಲಕ್ಷಗಳನ್ನು, ೨೦೧೪-೧೫ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ೧೩,೫೮೯ ನಿರುದ್ಯೋಗಿ ಪರಿಶಿಷ್ಟ ಜಾತಿ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ ಪ್ರಾರಂಭಿಸಲು ಸಹಾಯ ಧನವನ್ನು ಒದಗಿಸಲಾಗಿದೆ.

ಪರಿಶಿಷ್ಟ ಜಾತಿಯ ಜನರು ಹೊಂದಿದ ಜಮೀನಿನಲ್ಲಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಗಂಗಾಕಲ್ಯಾಣ ಯೋಜನೆಯಡಿ ೨೦೧೩-೧೪ನೇ ಸಾಲಿನಲ್ಲಿ ೬೬೨ ಹಾಗೂ ೧೦೯ ಸಾಮೂಹಿಕ/ಏತ ನೀರಾವರಿ ಸೌಲಭ್ಯ, ೨೦೧೪-೧೫ನೇ ಸಾಲಿನಲ್ಲಿ ೧೦೭೩ ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ೮೫೧ ಸಾಮೂಹಿಕ/ಏತ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ.

ಮೈಕ್ರೋ ಫೈನಾನ್ಸ್ ಯೋಜನೆಯಡಿ ೨೦೧೩-೧೪ನೇ ಸಾಲಿನಲ್ಲಿ ಜನವರಿ ೨೦೧೪ರ ಅಂತ್ಯದವರೆಗೆ ೧೧,೦೫೫ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ. ಹಾಗೆಯೇ ಮೈಕ್ರೋ ಕ್ರೆಡಿಟ್ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ೨೦೧೩-೧೪ನೇ ಸಾಲಿನಲ್ಲಿ ೧೯೫೮ ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಗುರುತಿಸಲ್ಪಟ್ಟ ಸಫಾಯಿ ಕರ್ಮಚಾರಿಗಳು ಮತ್ತು ಅವರ ಅವಲಂಬಿತರಿಗೆ ೨೦೧೩-೧೪ನೇ ಸಾಲಿನಲ್ಲಿ ೧೨೧೭ ಸೌಲಭ್ಯವನ್ನು ಕಲ್ಪಿಸಲಾಗಿದೆ.

೨೦೧೫-೧೬ನೇ ಸಾಲಿನಲ್ಲಿ ಈ ನಿಗಮದ ವತಿಯಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ. ೪೫,೧೦೦.೦೦ ಲಕ್ಷಗಳನ್ನು ಒದಗಿಸಲಾಗಿದೆ.

**ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ:** ಕರ್ನಾಟಕ ರಾಜ್ಯದ ತಾಂಡಾಗಳ ಹಾಗೂ ತಾಂಡಾ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಭೌತಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ತಾಂಡಾ ನಿವಾಸಿಗಳ ಅಭಿವೃದ್ಧಿ ಸಾಧಿಸುವುದು ನಿಗಮದ ಉದ್ದೇಶವಾಗಿದೆ.

೨೦೧೩-೧೪ ನೇ ಸಾಲಿನಲ್ಲಿ ತಾಂಡಾಗಳ ಮೂಲ ಸೌಕರ್ಯ ಯೋಜನೆಗಳಿಗೆ ಒಟ್ಟು ರೂ. ೧,೭೯೭.೯೫ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ನಿಗಮದ ವತಿಯಿಂದ ೨೦೧೪-೧೫ನೇ ಸಾಲಿನಲ್ಲಿ ೨೫೨ ಬಂಜಾರ ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಸಿ.ಸಿ. ರಸ್ತೆ, ಚರಂಡಿ, ಶೌಚಾಲಯ, ಬೀದಿ ದೀಪಗಳನ್ನು ಹಾಗೂ ೧೦೨ ಸೇವಾಲಾಲ್ ಭವನಗಳನ್ನು ನಿರ್ಮಿಸಲಾಗಿದೆ.

೨೦೧೫-೧೬ನೇ ಸಾಲಿನಲ್ಲಿ ನಿಗಮದ ಯೋಜನಾ ಕಾರ್ಯಕ್ರಮಗಳಿಗಾಗಿ ರೂ.೭,೫೦೦.೦೦ ಲಕ್ಷಗಳನ್ನು ಒದಗಿಸಲಾಗಿದೆ.

ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದವತಿಯಿಂದ ಚರ್ಮ ಕುಶಲಕರ್ಮಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ, ಜೀವನೋಪಾಯ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಕಾರ್ಯಕ್ರಮ, ಚರ್ಮಕುಶಲ ಕರ್ಮಿಗಳಿಗಾಗಿ ಆಧುನಿಕ ಕೌಶಲ್ಯ ಅಭಿವೃದ್ಧಿ ತರಬೇತಿ, ಆಧುನಿಕ ಮಾರಾಟ ಕುಟೀರಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ೨೦೧೩-೧೪ನೇ ಸಾಲಿನಲ್ಲಿ ರೂ. ೩೪೧.೦೦ಲಕ್ಷಗಳನ್ನು ವೆಚ್ಚ ಮಾಡಿದೆ. ೨೦೧೫-೧೬ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗಾಗಿ ರೂ. ೪,೫೦೦.೦೦ ಲಕ್ಷಗಳನ್ನು ಒದಗಿಸಲಾಗಿದೆ.

**೨೦೧೫-೧೬ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ** ನೆರವಿನಿಂದ ರಾಜ್ಯ, ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ವಿಚಾರ ಸಂಕಿರಣ ಹಾಗೂ ಕಮ್ಮಟಗಳ ಮೂಲಕ ಸಾಮಾನ್ಯರಲ್ಲಿ ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆ ೧೯೫೫ ಹಾಗೂ ದೌರ್ಜನ್ಯ ನಿವಾರಣಾ ಕಾಯ್ದೆ ೧೯೮೯ರಲ್ಲಿರುವ ಎಲ್ಲ ಅಂಶಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ರೂ.೫೦೦ ಲಕ್ಷಗಳನ್ನು ಒದಗಿಸಲಾಗಿದೆ

**ಪರೀಕ್ಷಾ ಪೂರ್ವ ತರಬೇತಿ ಕೇಂದ್ರ (ಕೇಂದ್ರ ಪುರಸ್ಕೃತ ಯೋಜನೆ):** ರಾಜ್ಯ ಹಾಗೂ ಕೇಂದ್ರ ಸರ್ಕಾರದ ಲೋಕಸೇವಾ ಆಯೋಗಗಳು ಮತ್ತು ಇತರೆ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಯಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಡಾ.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ಬೆಂಗಳೂರು ಇಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಐ.ಎ.ಎಸ್/ ಐ.ಪಿ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ ಇನ್ನಿತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.

**ಅಸ್ಪೃಶ್ಯತಾ ನಿರ್ಮೂಲನಾ ಯೋಜನೆ :** ಈ ಯೋಜನೆಯ ಮೂಲಕ ಅಂತರ್ಜಾತಿ ವಿವಾಹಿತ ದಂಪತಿಗಳಲ್ಲಿ ಪರಿಶಿಷ್ಟ ಜಾತಿಯ ಪುರುಷರು ಅನ್ಯ ಜಾತಿಯ ಹಿಂದೂ ಧರ್ಮದ ಮಹಿಳೆಯರನ್ನು ವಿವಾಹವಾದಲ್ಲಿ ಅಂತಹ ಪ್ರತಿ ಅರ್ಹ ದಂಪತಿಗಳಿಗೆ ರೂ.೨.೦೦ ಲಕ್ಷಗಳನ್ನು ಹಾಗೂ ಪರಿಶಿಷ್ಟ ಜಾತಿಯ ಮಹಿಳೆಯರು ಅನ್ಯ ಜಾತಿಯ ಪುರುಷನನ್ನು ವಿವಾಹವಾದಲ್ಲಿ ರೂ. ೩.೦೦ ಲಕ್ಷಗಳನ್ನು ಪ್ರೋತ್ಸಾಹ ಧನವಾಗಿ ನೀಡಲೆಂದು ೫೦೦.೦೦ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ರಾಜ್ಯದ ಪಾಲು ರೂ. ೨೫೦.೦೦ ಲಕ್ಷಹಾಗೂ ಕೇಂದ್ರದ ಪಾಲು ರೂ. ೨೫೦.೦೦ ಲಕ್ಷಗಳಾಗಿವೆ.

**ಪರಿಶಿಷ್ಟ ಜಾತಿ ಉಪಯೋಜನೆಯ ವಿಶೇಷ ಕೇಂದ್ರೀಯ ನೆರವು :** ೨೦೧೫-೧೬ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ ರೂ. ೯,೮೫೫.೩೩ ಲಕ್ಷಗಳನ್ನು ಕಾಲ್ಪನಿಕ ಹಂಚಿಕೆ ಮಾಡಿ ಬಿಡುಗಡೆಗೊಳಿಸಿದ್ದು, ಪರಿಶಿಷ್ಟ ಜಾತಿಯವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಾಗೆಯೇ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನವಾಗಿ ನೀಡಲು ರೂ. ೨೧,೦೦೫.೦೦ಲಕ್ಷಗಳನ್ನು ಒದಗಿಸಲಾಗಿದೆ.

**ಪರಿಶಿಷ್ಟ ಜಾತಿ ಉಪಯೋಜನೆಯಡಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಮೊತ್ತ :** ೨೦೧೨-೧೩ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯ ಅಡಿಯಲ್ಲಿ ಹಮ್ಮಿಕೊಂಡ ೩೩ ಕಾರ್ಯಕ್ರಮಗಳಿಗೆ ಒಟ್ಟು ರೂ.೯೩,೦೦೦.೦೦ ಲಕ್ಷಗಳನ್ನು ಹಾಗೂ ೨೦೧೩-೧೪ನೇ ಸಾಲಿನಲ್ಲಿ ಹಮ್ಮಿಕೊಂಡ ೪೨ ಕಾರ್ಯಕ್ರಮಗಳಿಗೆ ರೂ. ೧,೦೫,೦೦೦.೦೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ಒಟ್ಟು ೩೩ ಕಾರ್ಯಕ್ರಮಗಳಿಗೆ ಒಟ್ಟಾರೆ ರೂ.೧೧,೭೭೩.೫೫ ಲಕ್ಷಗಳನ್ನು ಒದಗಿಸಲಾಗಿದೆ.

**ಪ್ರತಿಭಾವಂತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವಾಗಿ ಕೇಂದ್ರ ಯೋಜನೆ ಕಾರ್ಯಕ್ರಮ :** ವೈದ್ಯಕೀಯ ಹಾಗೂ ತಾಂತ್ರಿಕ ವೃತ್ತಿಪರ ಕೋರ್ಸ್‌ಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಸೇರ್ಪಡೆಯಾಗಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರದ ಶೇ. ೧೦೦ ಅನುದಾನದಲ್ಲಿ ರೂ. ೪೯ ಲಕ್ಷಗಳನ್ನು ನೀಡಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**'ವಿದ್ಯಾಸಿರಿ' ಯೋಜನೆ:** ಈ ಯೋಜನೆಯನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ವಿಸ್ತರಿಸಿದ್ದು, ಇದಕ್ಕೆ ೨೦೧೪-೧೫ನೇ ಸಾಲಿನಲ್ಲಿ ರೂ. ೨೦೦.೦೦ ಲಕ್ಷಗಳನ್ನು ಒದಗಿಸಲಾಗಿದ್ದು, ಮಾರ್ಚ್ ಅಂತ್ಯದ ವೇಳೆಗೆ ಶೇ.೧೦೦ರಷ್ಟು ಅಂದರೆ ರೂ. ೨೦೦.೦೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

**ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಆಯೋಗ:** ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಆಯೋಗವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಶಾಇ ೫೮ ಶಾಸನ ೨೦೦೧ ದಿ:೧೦.೧೦.೨೦೦೦ರಲ್ಲಿ ರಚಿಸಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿ, ರಕ್ಷಣೆ, ತೀವ್ರ ರೀತಿಯ ಯೋಜನೆಗಳ ಅನುಷ್ಠಾನ, ಮೀಸಲಾತಿ, ಸರ್ಕಾರಿ ಮತ್ತು ಶೈಕ್ಷಣಿಕ ಸಂಸ್ಥೆಗಳ ಉದ್ಯೋಗ ಮೀಸಲಾತಿ ಚುನಾಯಿತ ಸರ್ಕಾರದ ನೀತಿ ನಿಯಮದಲ್ಲಿ ಭಾಗವಹಿಸಲು ಈ ಆಯೋಗವು

ಗುರಿ ಮತ್ತು ನಿರ್ದೇಶನವನ್ನು ಹೊಂದಿರುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಸಂರಕ್ಷಣೆ ವಿವಿಧ ರಕ್ಷಣಾ ಕ್ರಮಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು, ಮತ್ತು ಅವರನ್ನು ಸಂರಕ್ಷಿತ ಹಕ್ಕುಗಳಿಂದ ವಂಚಿತಗೊಳಿಸಿರುವುದಕ್ಕೆ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು, ಈ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ್ವದು, ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

೨೦೧೩-೧೪ನೇ ಸಾಲಿನಲ್ಲಿ ರೂ. ೧೦೫.೦೦ ಲಕ್ಷಗಳನ್ನು, ೨೦೧೪-೧೫ನೇ ಸಾಲಿನಲ್ಲಿ ರೂ. ೧೮೫.೫೦ ಲಕ್ಷಗಳನ್ನು, ೨೦೧೫-೧೬ನೇ ಸಾಲಿನಲ್ಲಿ ಆಯೋಗದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರೂ. ೧೯೨.೦೦ಲಕ್ಷಗಳನ್ನು ಒದಗಿಸಲಾಗಿತ್ತು.

ಭೋವಿ ಅಭಿವೃದ್ಧಿ ನಿಗಮದ ಅಡಿಯಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ೨೦೧೫-೧೬ ನೇ ಸಾಲಿನಲ್ಲಿ ರೂ. ೨,೫೪,೫೯೩.೦೦ಲಕ್ಷಗಳನ್ನು ಒದಗಿಸಲಾಗಿದೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ರಾಜ್ಯ ಮಟ್ಟದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮುಖ್ಯಸ್ಥರಾಗಿ ಕೆ.ಎ.ಎಸ್ ಸೂಪರ್ ಟೈಂ ಸ್ಕೇಲ್ ದರ್ಜೆಯ ಅಧಿಕಾರಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಕೇಂದ್ರ ಕಚೇರಿಯಲ್ಲಿ ಇಬ್ಬರು ಉಪ ನಿರ್ದೇಶಕರು, ಒಬ್ಬ ಸಹಾಯಕ ನಿರ್ದೇಶಕರು, ಒಬ್ಬ ಸಂಶೋಧನಾಧಿಕಾರಿ, ಒಬ್ಬ ಲೆಕ್ಕಾಧಿಕಾರಿ, ಸಹಾಯಕ ಸಾಂಖ್ಯಿಕ ಅಧಿಕಾರಿ ಹಾಗೂ ಇತರೆ ಪೂರಕ ಸಿಬ್ಬಂದಿಗಳು ಕಚೇರಿ ಕಾರ್ಯದಲ್ಲಿ ನೆರವು ನೀಡುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನಿಯಂತ್ರಣದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾರೆ.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಐದು ಯೋಜನಾ ಸಮನ್ವಯಾಧಿಕಾರಿಗಳು, ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಾಗೂ ಬೆಳಗಾವಿ, ರಾಯಚೂರು, ಚಾಮರಾಜನಗರ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಹಾವೇರಿ, ದಾವಣಗೆರೆ ಮತ್ತು ಬಳ್ಳಾರಿ, ಜಿಲ್ಲೆಗಳಲ್ಲಿ ಒಂಬತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸೇವಾ ನಿರತರಾಗಿದ್ದಾರೆ ಇನ್ನುಳಿದ ೧೬ ಜಿಲ್ಲೆಗಳಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ತಾಲೂಕು ಮಟ್ಟದಲ್ಲಿ ೧೭೬ ತಾಲೂಕುಗಳಲ್ಲಿ ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು ಕಚೇರಿ ಮುಖ್ಯಸ್ಥರಾಗಿದ್ದು ಇತರೆ ಸಿಬ್ಬಂದಿಗಳೊಂದಿಗೆ ಇಲಾಖೆಯ ಕಾರ್ಯಕ್ರಮಗಳನ್ನು ತಾಲೂಕು ಮಟ್ಟದಲ್ಲಿ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್ ಇವರ ನಿಯಂತ್ರಣದಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆ.

**ರಾಜ್ಯ ವಲಯದ ಕಾರ್ಯಕ್ರಮಗಳು:** ೧) ಸಂಶೋಧನೆ ಮತ್ತು ತರಬೇತಿ ೨) ಗಿರಿಜನ ಉಪಯೋಜನೆ ಕ್ರೋಢೀಕೃತ ಅನುದಾನ ೩) ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ ೪) ವಿದ್ಯಾರ್ಥಿನಿಲಯ ಹಾಗೂ ಆಶ್ರಮ ಶಾಲೆಗಳ ಕಟ್ಟಡಗಳ ನಿರ್ಮಾಣ ೫) ಮೊರಾರ್ಜಿ ದೇಸಾಯಿ ವಸತಿ ಶಾಲೆ ೬) ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ ೭) ವಸತಿ ಶಾಲೆಗಳ ಕಟ್ಟಡ ನಿರ್ಮಾಣ೮) ಆಶ್ರಮ ಶಾಲೆ ಮತ್ತು ಹಾಸ್ಟೆಲ್‌ಗಳ ನಿರ್ಮಾಣ ೯) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪ್ರತಿಭಾ ಉನ್ನತೀಕರಣ.

**ಜಿಲ್ಲಾ ವಲಯದ ಕಾರ್ಯಕ್ರಮಗಳು(ಯೋಜನೆ):** ೧) ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನಗಳು ಮತ್ತು ಆರ್ಥಿಕ ಸಹಾಯಧನ ೨) ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಸ್ಥಾಪನೆ ೩) ವಿದ್ಯಾರ್ಥಿ ನಿಲಯಗಳ ನಿರ್ವಹಣೆ ೪) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳು ೫) ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ವೆಚ್ಚ ಮತ್ತು ವಸತಿ ವೆಚ್ಚ ಮಂಜೂರಾತಿ ೬) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ೭) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ೮) ಪರಿಶಿಷ್ಟ ವರ್ಗದವರಿಗೆ ಇತರೆ ರಿಯಾಯಿತಿಗಳು ೯) ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ೧೦) ವಿದ್ಯಾರ್ಥಿ ನಿಲಯಗಳು ೧೧) ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚ ೧೨) ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳು ೧೩) ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಸಹಾಯ.

**ಜಿಲ್ಲಾ ವಲಯ ಕಾರ್ಯಕ್ರಮಗಳು (ಯೋಜನೇತರ):** ೧) ಮಹಿಳಾ ಕಲ್ಯಾಣ ಕೇಂದ್ರಗಳು ೨) ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ೩) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ ೪) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ೫) ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ ೬) ಆಶ್ರಮ ಶಾಲೆಗಳು ೭) ಗಿರಿಜನ ಪ್ರದೇಶ ಉಪ ಯೋಜನೆಗಳು.

೨೦೧೩-೧೪ನೇ ಸಾಲಿನಲ್ಲಿ ಮಾರ್ಚ್ ೨೦೧೪ರ ವೇಳೆಗೆ ಯೋಜನೆಯಡಿ ರೂ. ೬೫,೦೦೩.೧೩ ಲಕ್ಷಗಳನ್ನು ಮತ್ತು ಯೋಜನೇತರದಡಿ ರೂ. ೭,೭೧೫.೫೦ ಲಕ್ಷ ಸೇರಿ ಒಟ್ಟು ರೂ. ೭೨,೭೧೮.೬೩ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ಗಿರಿಜನ ಉಪಯೋಜನೆ:** ಪರಿಶಿಷ್ಟ ವರ್ಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯನ್ನು ೧೯೭೬-೭೭ರಿಂದ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ

ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೯೨ ರಿಂದ ಗಿರಿಜನ ಉಪ ಯೋಜನೆಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

**ಗಿರಿಜನ ಉಪ ಯೋಜನೆಯ ಧ್ಯೇಯೋದ್ದೇಶಗಳು:** ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳು ಹಾಗೂ ಇತರೆ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು. ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು. ಪರಿಶಿಷ್ಟ ವರ್ಗದ ಕಾಲೋನಿ/ ಹಾಡಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವುದು. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು. ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಸೌಲಭ್ಯಗಳು, ಆರೋಗ್ಯ ಸೇವೆ ಇತ್ಯಾದಿ ಸೌಲಭ್ಯಗಳನ್ನು ಗಿರಿಜನ ಉಪ ಯೋಜನೆಯಡಿ ಒದಗಿಸಲಾಗುತ್ತದೆ.

೨೦೧೩-೧೪ನೇ ಸಾಲಿನಲ್ಲಿ ಗಿರಿಜನ ಉಪಯೋಜನೆ ಕಾರ್ಯಕ್ರಮಗಳಿಗೆ ರೂ.೪೪,೯೨೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ದಿ:೨೭.೦೫.೨೦೦೬ರಂದು ಮಂಜೂರಾಗಿದ್ದು, ೨೨.೦೨.೨೦೦೭ರಿಂದ ಪ್ರತ್ಯೇಕವಾಗಿ ಕಾರ್ಯಾರಂಭ ಮಾಡಿರುತ್ತದೆ. ನಿಗಮದ ಮೂಲ ಉದ್ದೇಶ ರಾಜ್ಯದ ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಪಡಿಸುವ ಉದ್ದೇಶವಾಗಿದೆ. ಈ ನಿಗಮಕ್ಕೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಒಟ್ಟು ೧೭೪ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ. ಇದರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು,ಲೆಕ್ಕಾಧಿಕಾರಿಗಳು, ಜಿಲ್ಲಾ ವ್ಯವಸ್ಥಾಪಕರು(೨) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಅಧೀನ ಅಧಿಕಾರಿಗಳು ಇರುತ್ತಾರೆ. ಈ ನಿಗಮವು ಒಂಬತ್ತು ಜಿಲ್ಲೆಗಳಲ್ಲಿ ಸ್ವತಂತ್ರ್ಯವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ ಜಿಲ್ಲೆಗಳಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಮತ್ತು ಅವರ ಸಿಬ್ಬಂದಿ ವರ್ಗದವರು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಯೋಜನೆಗಳ ಅನುಷ್ಠಾನ ಮತ್ತು ಉಸ್ತುವಾರಿ ಕೆಲಸವನ್ನು ಹಾಲಿ ನಿರ್ವಹಿಸುತ್ತಿದ್ದಾರೆ. ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಸ್ವಯಂ ಉದ್ಯೋಗ ಯೋಜನೆ:** ಅ) ಸ್ವಯಂ ಉದ್ಯೋಗ ಯೋಜನೆ ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ ಇ) ನೇರಸಾಲ ಯೋಜನೆ ಈ) ಮೈಕ್ರೋ ಕ್ರೆಡಿಟ್(ಕಿರುಸಾಲ) ಯೋಜನೆ ೨) ಭೂ ಒಡೆತನ ಯೋಜನೆ ೩) ಗಂಗಾ ಕಲ್ಯಾಣ ಯೋಜನೆ: ಅ)ಐತ ನೀರಾವರಿ ಯೋಜನೆ ಆ) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗಳು ಮುಖ್ಯವಾಗಿವೆ.

ಈ ನಿಗಮದ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ೨೦೧೩-೧೪ನೇ ಸಾಲಿನಲ್ಲಿಫೆಬ್ರವರಿ ೨೦೧೪ರ ಅಂತ್ಯಕ್ಕೆ ರೂ. ೭,೪೬೩.೩೮ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಸ್ವಯಂ ಉದ್ಯೋಗ ಯೋಜನೆಯ ಅಡಿ ರೂ. ೫೦೨.೭೧ ಲಕ್ಷಗಳನ್ನು, ಭೂ ಒಡೆತನ ಯೋಜನೆಯ ಅಡಿ ರೂ. ೭೮೪.೮೪ ಲಕ್ಷಗಳನ್ನು, ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ರೂ. ೩೮೨೯.೬೫ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ರಾಜ್ಯದ ಶೇ.೫೫ ರಷ್ಟು ಜನಸಂಖ್ಯೆಯನ್ನು ಹೊಂದಿರುವ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರದ ಹಂತದಲ್ಲಿ ಒಂದು ಪ್ರತ್ಯೇಕ ಹಿಂದುಳಿದ ವರ್ಗಗಳ ಸಚಿವಾಲಯವನ್ನು ಸೃಜಿಸುವಂತೆ ಮತ್ತು ಪ್ರತ್ಯೇಕ ಸಚಿವರನ್ನು ನೇಮಿಸುವಂತೆ ಕರ್ನಾಟಕ ರಾಜ್ಯ ಹಿಂದುಳಿದ ಆಯೋಗವು ಸರ್ಕಾರಕ್ಕೆ ಸಲಹೆ ನೀಡಿದ ಹಿನ್ನೆಲೆಯಲ್ಲಿ ದಿ: ೦೪.೦೮.೨೦೧೨ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಂಬ ಪ್ರತ್ಯೇಕ ಸಚಿವಾಲಯವನ್ನು ಸೃಜಿಸಲಾಗಿದೆ. ಈ ಸಚಿವಾಲಯದ ಮುಖ್ಯಸ್ಥರಾಗಿ ಭಾರತೀಯ ಆಡಳಿತ ಸೇವೆಯ ಅಧಿಕಾರಿಯೊಬ್ಬರು ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವರು. ಇವರ ಅಧೀನದಲ್ಲಿ ಓರ್ವ ಉಪ ಕಾರ್ಯದರ್ಶಿ, ಇಬ್ಬರು ಅಧೀನ ಕಾರ್ಯದರ್ಶಿಗಳು ಹಾಗೂ ಮೂವರು ಶಾಖಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯವರು ಕಛೇರಿ ಕಾರ್ಯದಲ್ಲಿ ನೆರವಾಗುವರು.

ಈ ಸಚಿವಾಲಯದ ಅಧೀನದಲ್ಲಿ ಈ ಕೆಳಕಂಡ ಇಲಾಖೆಗಳು ಕಾರ್ಯನಿರ್ವಹಿಸುತ್ತವೆ.

೧. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
೨. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ
೩. ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ
೪. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ
೫. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು:** ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕರ್ನಾಟಕ ಸರ್ಕಾರವು ಭಾರತ ಸಂವಿಧಾನದ ಅನುಚ್ಛೇದ ಕಲಂ ೧೫(೪) ಮತ್ತು ೧೬(೪)ರ ಪ್ರಕಾರ ವಿವಿಧ ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕೊಂಡಿದೆ. ರಾಜ್ಯ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮುಖ್ಯಸ್ಥರಾಗಿ ಭಾರತೀಯ ಆಡಳಿತ ಸೇವೆಯ ಅಧಿಕಾರಿಯೊಬ್ಬರು ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಕೇಂದ್ರ ಕಛೇರಿಯಲ್ಲಿ ಮೂವರು ಜಂಟಿ ನಿರ್ದೇಶಕರು, ನಾಲ್ವರು ಉಪ

ನಿರ್ದೇಶಕರು, ಆರು ಸಹಾಯಕ ನಿರ್ದೇಶಕರು, ಒಬ್ಬ ಲೆಕ್ಕಾಧಿಕಾರಿ ಹಾಗೂ ಒಬ್ಬ ಗೆಜೆಟೆಡ್ ವ್ಯವಸ್ಥಾಪಕ ಇದ್ದು, ಇತರೆ ಸಿಬ್ಬಂದಿ ವರ್ಗದವರು ಕಚೇರಿ ಕಾರ್ಯದಲ್ಲಿ ನೆರವಾಗುವರು.

ಸರ್ಕಾರವು ಅಲೆಮಾರಿ ಮತ್ತು ಅರೆ ಅಲೆಮಾರಿ ವಿಶೇಷ ಕೋಶವನ್ನು ಸೃಜಿಸಿದ್ದು, ಸದರಿ ಕೋಶಕ್ಕೆ ಒಂದು ಜಂಟಿ ನಿರ್ದೇಶಕರು, ಒಂದು ಉಪ ನಿರ್ದೇಶಕರು, ಒಂದು ಸಹಾಯಕ ನಿರ್ದೇಶಕರು ಹಾಗೂ ಇತರೆ ಸಿಬ್ಬಂದಿ ವರ್ಗದವರ ಹುದ್ದೆಗಳನ್ನು ಸೃಜಿಸಿದ್ದು, ಹಾಲಿ ಒಬ್ಬರು ಜಂಟಿ ನಿರ್ದೇಶಕರು, ಒಬ್ಬರು ಉಪ ನಿರ್ದೇಶಕರು ಹಾಗೂ ಅಗತ್ಯ ಸಿಬ್ಬಂದಿಯೊಂದಿಗೆ ಕೋಶದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಮಟ್ಟದ ಯೋಜನೆಗಳನ್ನು ಆಯಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ/ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೆರವು ನೀಡಲು ಒಬ್ಬ ಗ್ರೂಪ್ ಎ ಕಿರಿಯ ಶ್ರೇಣಿಗೆ ಸೇರಿದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿರುತ್ತಾರೆ. ಇಲಾಖೆಯ ರಾಜ್ಯ ವಲಯದ ಕಾರ್ಯಕ್ರಮಗಳನ್ನು ಜಿಲ್ಲೆಗಳ ಜಿಲ್ಲಾಧಿಕಾರಿಗಳು/ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ತಾಲೂಕು ಮಟ್ಟದಲ್ಲಿ ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ಹಿಂದುಳಿದ ವರ್ಗಗಳ ಇಲಾಖಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ. ಇವರಿಗೆ ಸಹಾಯಕರಾಗಿ ಪ್ರತಿ ತಾಲೂಕಿನಲ್ಲಿ ಇಲಾಖೆಯ ಒಬ್ಬ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಇಲಾಖೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ನೆರವು ನೀಡುವರು.

### ರಾಜ್ಯ ವಲಯ ಕಾರ್ಯಕ್ರಮಗಳು

೧. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ಹಾಗೂ ದೇವರಾಜ ಅರಸು ಸಂಶೋಧನಾ ಸಂಸ್ಥೆ: ಕೇಂದ್ರ ಲೋಕಸೇವಾ/ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಐ.ಎ.ಎಸ್.,/ ಐ.ಪಿ.ಎಸ್./ ಕೆ.ಎ.ಎಸ್./ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಗಾಗಿ ೨೦೧೩-೧೪ನೇ ಸಾಲಿನಲ್ಲಿ ೨೦೧೪ರ ಮಾರ್ಚ್ ಅಂತ್ಯದ ವೇಳೆಗೆ ರೂ.೩೧೭.೬೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೨. ೨೦೧೫-೧೬ನೇ ಸಾಲಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ, ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಕಾರ್ಯಕ್ರಮ ಹಾಗೂ ದೇವರಾಜ ಅರಸು ಜನ್ಮ ದಿನಾಚರಣೆ ಮತ್ತು ಪುಣ್ಯತಿಥಿಯ ಅಂಗವಾಗಿ ರೂ.೧,೧೦೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೩. ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ): ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ೨೦೧೫-೧೬ನೇ ಸಾಲಿನಲ್ಲಿ ರಾಜ್ಯ ವಲಯದಲ್ಲಿ ಕೇಂದ್ರ ಸರ್ಕಾರದಿಂದ ಶೇ.೫೦:೫೦ರ ಅನುಪಾತದಂತೆ ರೂ. ೪೦೦.೦೦ ಲಕ್ಷಗಳನ್ನು ಒದಗಿಸಲಾಗಿದ್ದು, ೨೦೧೬ರ ಮಾರ್ಚ್ ಅಂತ್ಯಕ್ಕೆ ರೂ.೪೦೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೪. ಹುಡ್ಕೋ ಸಾಲದ ಮರುಪಾವತಿ ಹಾಗೂ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ೨೦೧೫-೧೬ನೇ ಸಾಲಿನಲ್ಲಿ ರೂ. ೩೩೦೦.೦೦ ಲಕ್ಷಗಳ ಅನುದಾನವನ್ನು ಒದಗಿಸಿ ವಿನಿಯೋಗಿಸಲಾಗಿದೆ.

೫. ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ೨೦೧೫-೧೬ನೇ ಸಾಲಿನಲ್ಲಿ ನಿವೇಶನ ಲಭ್ಯವಿರುವ ೧೩ ತಾಲೂಕುಗಳಿಗೆ ಭವನ ನಿರ್ಮಾಣಕ್ಕಾಗಿ ರೂ.೧,೦೦೦.೦೦ ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ.

೬. ಕೇಂದ್ರ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ರೂ. ೮೭೦೦.೦೦ ಲಕ್ಷಗಳನ್ನು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ೨೦೧೫-೧೬ನೇ ಸಾಲಿನಲ್ಲಿ ರೂ. ೧೬,೬೯೫.೬೩ ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

೮. ಹಿಂದುಳಿದ ವರ್ಗಗಳ ಪುರುಷ/ಮಹಿಳಾ ಅಭ್ಯರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಗಾಗಿ ೨೦೧೫-೧೬ನೇ ಸಾಲಿನಲ್ಲಿ ರೂ. ೩,೦೦೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೯. ಹೊಸ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆಗಾಗಿ ರೂ. ೪,೬೮೩.೨೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

೧೦. ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯ ಅಡಿಯಲ್ಲಿ ಹಿಂದುಳಿದ ವರ್ಗಗಳ ಪ್ರತಿಭಾವಂತ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರಕದ ವಿದ್ಯಾರ್ಥಿಗಳಿಗೆ ಮಾಸಿಕ ತಲಾ ರೂ.೧೫೦೦/-ರಂತೆ ಹತ್ತು ತಿಂಗಳ ಅವಧಿಗಾಗಿ ೨೦೧೫-೧೬ನೇ ಸಾಲಿನಲ್ಲಿ ರೂ ೧೧,೨೫೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೧೧. ವಿವಿಧ ಸಮುದಾಯಗಳ ಅಭಿವೃದ್ಧಿಗಾಗಿ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣ, ಖಾಸಗಿ ಅನುದಾನರಹಿತ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಗರಿಷ್ಠ ರೂ. ೫.೦೦ ಲಕ್ಷಗಳನ್ನು ಮೀರದಂತೆ ೨೦೧೫-೧೬ನೇ ಸಾಲಿನಲ್ಲಿ ರೂ. ೫೦೦೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

೧೨. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ೨೦೧೫-೧೬ನೇ ಸಾಲಿನಲ್ಲಿ ರೂ.೫೦೦೦.೦೦ ಲಕ್ಷಗಳನ್ನು ವಿನಿಯೋಗಿಸಲಾಗಿದೆ.

**ಜಿಲ್ಲಾ ವಲಯ ಕಾರ್ಯಕ್ರಮಗಳು:** ೧) ಅ) ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳು ಆ) ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳು ೨) ಆಶ್ರಮ ಶಾಲೆಗಳ ನಿರ್ವಹಣೆ ೩) ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಮತ್ತು ದುರಸ್ತಿ ೪) ಅ) ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ನಿಲಯಗಳಿಗೆ ಅನುದಾನ ಆ) ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ನಿಲಯಗಳಿಗೆ

ಅನುದಾನ ೫) ಖಾಸಗಿ ಅನಾಥಾಲಯಗಳಿಗೆ ಸಹಾಯಧನ ೬) ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ/ಹೆಚ್ಚುವರಿ ಭೋಜನಾ ವೆಚ್ಚ ಕಾರ್ಯಕ್ರಮ ೭) ವಿದ್ಯಾರ್ಥಿನಿಲಯಗಳ ಸುಧಾರಣೆ ೮) ಸಾರ್ವಜನಿಕ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನ ಮಂಜೂರಾತಿ ೯) ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ೧೦) ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಮಂಜೂರಾತಿ (ಪ್ರವರ್ಗ-೧) ೧೧) ಶುಲ್ಕ ವಿನಾಯಿತಿ ೧೨) ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ೧೩) ಹೊರಗೆ ತರಬೇತಿ ಕೇಂದ್ರಗಳು ೧೪) ದೇವರಾಜ ಅರಸುರವರ ಜನ್ಮ ದಿನಾಚರಣೆ ಮತ್ತು ೧೫ ಅಂಶಗಳ ಕಾರ್ಯಕ್ರಮಗಳ ವಿಚಾರಗೋಷ್ಠಿ ೧೫) ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳ ನಿರ್ವಹಣೆ ಇತ್ಯಾದಿ.

### ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ೧೯೫೬ರ ಕಂಪನಿ ಕಾಯ್ದೆ ಅನ್ವಯ ೧೯೭೭ರಂದು ಸ್ಥಾಪಿಸಲಾಗಿದೆ. ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಕೊಡುವುದು ಹಾಗೂ ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವ ಜನರು ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಅಗತ್ಯವಿರುವ ತರಬೇತಿ ನೀಡುವುದು ನಿಗಮದ ಉದ್ದೇಶವಾಗಿರುತ್ತದೆ. ನಿಗಮವು ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಂಡು ಅವರ ಆರ್ಥಿಕಾಭಿವೃದ್ಧಿ ಸಾಧಿಸಲು ನಿಗಮವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಸುತ್ತದೆ.

**ರಾಜ್ಯ ಯೋಜನೆಗಳು:** ೧) ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ ೨) ಚೈತನ್ಯ ಸ್ವಯಂ ಉದ್ಯೋಗ ನೇರಸಾಲ ಯೋಜನೆ ೩) ಕಿರುಸಾಲ ಯೋಜನೆ, ೪) ಅರಿವು-ಶೈಕ್ಷಣಿಕ ಸಾಲ ಯೋಜನೆ, ೫) ಗಂಗಾ ಕಲ್ಯಾಣ ನೀರಾವರಿ ಯೋಜನೆ, ೬) ಸಂಪ್ರದಾಯಿಕ ವೃತ್ತಿದಾರರಿಗೆ ಆರ್ಥಿಕ ನೆರವು, ೭) ಕುಂಬಾರಿಕೆ ಅಭಿವೃದ್ಧಿ ಯೋಜನೆ, ೮) ಅತಿ ಹಿಂದುಳಿದ ಮತ್ತು ಅರೆ ಅಲೆಮಾರಿ ಜನಾಂಗಗಳಿಗೆ ವಿಶೇಷ ಯೋಜನೆ ೯) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು.

### ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ

ಸರ್ಕಾರದ ಆದೇಶ ಸಂಖ್ಯೆ:ಹಿಂವಕ/೨೩೩/ಬಿಸಿಎ/೦೧೩ ದಿ:೦೩.೦೨.೨೦೧೪ ರನ್ವಯ ಶಿಲ್ಪಕಲೆ, ಲೋಹ ಮತ್ತು ಮರಗೆಲಸಗಳಲ್ಲಿ ತೊಡಗಿರುವ ವಿಶ್ವಕರ್ಮ ಸಮುದಾಯಗಳ ಕುಶಲಕರ್ಮಿಗಳಿಗೆ ಹಣಕಾಸಿನ ಸಹಾಯ ಮತ್ತು ವೃತ್ತಿ ಕೌಶಲ್ಯತೆಯನ್ನು ಹೆಚ್ಚಿಸುವ ಸಲುವಾಗಿ ಉನ್ನತ ಮಟ್ಟದ ತರಬೇತಿ ಯೋಜನೆಗಳು ಮತ್ತು ಈ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುವ ಸಲುವಾಗಿ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ದಿ:೨೮.೦೨.೨೦೧೪ರಲ್ಲಿ ಸ್ಥಾಪಿಸಲಾಗಿದೆ. ಈ ನಿಗಮ ನಿರ್ದೇಶಕ ಮಂಡಳಿಯು ಅಧ್ಯಕ್ಷರು ಮತ್ತು ನಾಲ್ಕು ಜನ ನಿರ್ದೇಶಕರನ್ನು ಒಳಗೊಂಡಿದೆ.

**ಈ ನಿಗಮವು ಅನುಷ್ಠಾನಗೊಳಸುತ್ತಿರುವ ಯೋಜನೆಗಳು:** ೧. ಪಂಚವೃತ್ತಿಗಳ ಅಭಿವೃದ್ಧಿಗಾಗಿ ಆರ್ಥಿಕ ನೆರವು, ೨. ಸ್ವಯಂ ಉದ್ಯೋಗ ನೇರಸಾಲ ಯೋಜನೆ, ೩. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ, ೪. ಅರಿವು-ಶೈಕ್ಷಣಿಕ ಸಾಲ ಯೋಜನೆ, ೫. ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆಗಳಾಗಿವೆ. ಈ ನಿಗಮಕ್ಕೆ ೨೦೧೫-೧೬ನೇ ಸಾಲಿನ ಆಯವ್ಯಯದಲ್ಲಿ ರೂ.೧೦೦೦.೦೦ ಲಕ್ಷಗಳನ್ನು ಒದಗಿಸಲಾಗಿದೆ.

### ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ: ಸಕಿ/೨೮/ಬಿಸಿಎ/೯೦ ದಿ:೩೧-೦೮-೧೯೯೨ ರಂತೆ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ಸಂಸ್ಥೆಯು ದಿ:೨೦-೦೮-೧೯೯೩ರಿಂದ ಕಾರ್ಯನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳ ಅಧ್ಯಯನ, ಈ ವರ್ಗಗಳಿಗೆ ಕೈಗೊಂಡಿರುವ ಯೋಜನೆಗಳ ಬಗ್ಗೆ ಪ್ಲಾನ್ ಮಾನಿಟರಿಂಗ್, ಸಿಂಪೋಸಿಯಂ, ವರ್ಕ್‌ಷಾಪ್, ಸಮೀಕ್ಷೆ ಹಾಗೂ ಮೌಲ್ಯಮಾಪನ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು ಈ ಸಂಸ್ಥೆಯ ಧ್ಯೇಯೋದ್ದೇಶವಾಗಿದೆ. ಈ ಕಾರ್ಯಕ್ರಮಗಳನ್ನು ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಸಲಹೆಗಳನ್ನು ಪಡೆದು ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ/೨೦/ಬಿಸಿಎ/೯೦ ದಿ:೪-೮-೧೯೯೩ರ ಪ್ರಕಾರ ಹಮ್ಮಿಕೊಂಡು ಆಚರಣೆಗೆ ತರುತ್ತಿದೆ. ದೇವರಾಜ್ ಅರಸು ಸಂಶೋಧನಾ ಸಂಸ್ಥೆಯು ರಾಜ್ಯ ವಲಯ ಯೋಜನೆಗೆ ಸೇರ್ಪಡೆಯಾಗಿದ್ದು, ಪ್ರತಿ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯವ್ಯಯದಡಿಯಲ್ಲಿ ಹಣಕಾಸಿನ ವ್ಯವಸ್ಥೆ ಒದಗಿಸಲಾಗುತ್ತಿದೆ.

ನಿರ್ದೇಶಕರು ಇದರ ಮುಖ್ಯಸ್ಥರಾಗಿದ್ದು, ಇವರ ಅಧೀನದಲ್ಲಿ ಉಪನಿರ್ದೇಶಕರು, ಆಡಳಿತಾಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುವರು. ಜಿಲ್ಲೆ ಮತ್ತು ತಾಲೂಕು ಮಟ್ಟಗಳಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತದೆ.

### ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ರಾಜ್ಯದಲ್ಲಿ ವಿವಿಧ ವರ್ಗಗಳ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಎಲ್ಲಾ ವರ್ಗದ ವಸತಿ ಶಾಲೆಗಳನ್ನು ಒಂದು ಸಂಸ್ಥೆಯ ಕಾರ್ಯವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ

ಕರ್ನಾಟಕ ಸರ್ಕಾರ 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ' ಪ್ರಾರಂಭಿಸಲು ಆದೇಶಿಸಲಾಯಿತು. ಅದರಂತೆ ಈ ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ರ ಅಡಿಯಲ್ಲಿ ದಿ:೨೨-೧೧-೧೯೯೯ ರಂದು ನೋಂದಣಿ ಮಾಡಿಕೊಂಡು ದಿ ೨-೨-೨೦೦೦ ರಂದು ಕಾರ್ಯಾಚರಣೆ ಪ್ರಾರಂಭಿಸಿದೆ.

**ಸಂಘದ ಧ್ಯೇಯೋದ್ದೇಶಗಳು:** ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡಲು ಶಿಕ್ಷಕರುಗಳಿಗೆ ಅಧ್ಯಯನ ಕೋರ್ಸುಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ಕಾರ್ಯಾಗಾರಗಳನ್ನು ಮತ್ತು ಇತರೆ ಚಟುವಟಿಕೆಗಳನ್ನು ನಡೆಸುವುದು. ವಸತಿ ಶಾಲೆಗಳ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಿರುವ ಶೈಕ್ಷಣಿಕ ಮತ್ತು ಇತರೆ ಹುದ್ದೆಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಸೃಜಿಸುವುದು. ಸಂಘದ ಮತ್ತು ವಸತಿ ಶಾಲೆಗಳ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಿರುವ ಸಮಿತಿ ರಚಿಸುವುದು. ಸಂಘದ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ ಅಗತ್ಯವಿರುವ ನಿಧಿಯನ್ನು ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಮತ್ತು ಇತರ ಮೂಲಗಳಿಂದ ಸ್ವೀಕರಿಸುವುದು. ವಸತಿ ಶಾಲೆಗಳಿಗೆ ಅಗತ್ಯವಿರುವ ಶಾಲಾ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ಅವುಗಳ ನಿರ್ವಹಣೆ.

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ:**

೧. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಜಿಲ್ಲೆ ಮತ್ತು ರಾಜ್ಯ ಸರ್ಕಾರದ ನಡುವೆ ಸಂಘವು ಸಮನ್ವಯ ಕಾರ್ಯನಿರ್ವಹಿಸುತ್ತಿದೆ.

೨. ಕೇಂದ್ರ ಸರ್ಕಾರದ ಅನುದಾನದಡಿ ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಮಂಜೂರಾದ ಆರು ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ವಹಣೆ.

೩. ಸರ್ಕಾರವು ಮಂಜೂರು ಮಾಡುವ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವಲ್ಲಿ ಮಾರ್ಗದರ್ಶನ ನೀಡುವುದು.

೪. ವಸತಿ ಶಾಲಾ ಸಂಕೀರ್ಣಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು.

೨೦೧೩-೧೪ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ನೆರವಿನಿಂದ ಯೋಜನೆಗಾಗಿ ರೂ. ೫೩,೦೯೩.೫೮ ಹಾಗೂ ಯೋಜನೇತರ ರೂ. ೪೦೬೪.೫೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ರೂ. ೩,೨೩೬೦.೦೦ ಲಕ್ಷಗಳನ್ನು ಯೋಜನೆ ಮತ್ತು ಯೋಜನೇತರ ವೆಚ್ಚಗಳಿಗಾಗಿ ಒದಗಿಸಲಾಗಿದೆ.

## ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ ೧೯೯೫ರಲ್ಲಿ ಪರಿಚ್ಛೇದ ೯(೧)ರಂತೆ ಆಯೋಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ. ೧. ನಾಗರೀಕರ ಯಾವುದೇ ವರ್ಗವನ್ನು ಹಿಂದುಳಿದ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳ ಪರಿಶೀಲನೆ, ವಿಚಾರಣೆ ಮತ್ತು ಸರ್ಕಾರಕ್ಕೆ ಸೂಕ್ತವಾದ ಸಲಹೆಗಳನ್ನು ನೀಡುವುದು. ೨. ರಾಜ್ಯದ ನಾಗರೀಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸುವುದು. ವರ್ಗಗಳನ್ನು ಗುರುತಿಸುವುದು, ಸರ್ಕಾರಕ್ಕೆ ಸೂಕ್ತವೆಂದು ತೋರುವ ಸಲಹೆಗಳನ್ನು ನೀಡುವುದು. ೩. ಹಿಂದುಳಿದ ವರ್ಗಗಳಿಗಾಗಿ ಇರುವ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದಾಗಿದೆ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ತ್ವರಿತವಾಗಿ ಜಾರಿಗೆ ತರುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯಿಂದ ದಿ ೩೦-೭-೨೦೦೪ರಂದು ಪ್ರತ್ಯೇಕಿಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯೆಂದು ಸೃಜಿಸಲಾಗಿದೆ. ಈ ಇಲಾಖೆಯ ಮುಖ್ಯ ಉದ್ದೇಶವು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು. ಈ ಇಲಾಖೆಯು ರಾಜ್ಯ ಸರ್ಕಾರದ ಇತರ ಇಲಾಖೆಗಳಾದ ಆರ್ಥಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಹಾಗೂ ನಿಗಮಗಳಾದ ಡಿ.ದೇವರಾಜು ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ನಿವಾಸಿ ಶೈಕ್ಷಣಿಕ ಸಂಸ್ಥೆಗಳ ಸಂಘ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳಾದ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ, ಕೇಂದ್ರ ವಕ್ಫ್ ಪರಿಷತ್ ಹಾಗೂ ಭಾರತ ಸರ್ಕಾರದ ಹಜ್ ಸಮಿತಿ ಇತ್ಯಾದಿ ಸಂಸ್ಥೆಗಳೊಡನೆ ನಿಕಟ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು:** ೧) ಅಲ್ಪಸಂಖ್ಯಾತರಿಗೆ ಸಮುದಾಯ ಭವನ ೨) ಅಲ್ಪಸಂಖ್ಯಾತರಿಗಾಗಿ ವಸತಿನಿಲಯ ಕಟ್ಟಡಗಳ ನಿರ್ಮಾಣ ೩) ಅಲ್ಪಸಂಖ್ಯಾತರಿಗೆ ಹುಡ್ಕೋ ಸಾಲಗಳು ೪) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ಕಟ್ಟುವ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣ ೫) ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ೬) ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ ೭) ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು ೮) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ ೯) ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ ೧೦) ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ (ಐಎಎಸ್- ಕೆಎಎಸ್) ೧೧) ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪರಿಹಾರಕ ಬೋಧನೆ ನೀಡುವ ಯೋಜನೆ ೧೨) ಕಾರ್ಯನಿರತ ಅಲ್ಪಸಂಖ್ಯಾತರ ಮಹಿಳೆಯರಿಗೆ ವಸತಿ ನಿಲಯ ೧೩) ಅಲ್ಪಸಂಖ್ಯಾತರಿಗೆ ತರಬೇತಿ (ಕಾನೂನು ಪದವೀಧರರಿಗೆ

ಶಿಷ್ಯವೇತನ) ೧೪) ಅಲ್ಪ ಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು ೧೫) ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ೧೬) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯಗಳು ೧೭) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ೧೮)ಅಲ್ಪಸಂಖ್ಯಾತರಿಗೆ ವೃತ್ತಿಪರ ತರಬೇತಿ ೧೯) ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು ೨೦) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳ ಕಾರ್ಯಕ್ರಮ ೨೧) ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ೨೨) ಮೆರಿಟ್-ಕಮ್-ಮೀನ್ಸ್ ಆಧಾರಿತ ವಿದ್ಯಾರ್ಥಿ ವೇತನ ೨೩) ಅಲ್ಪಸಂಖ್ಯಾತರಿಗಾಗಿ ಬಹುವಲಯವಾರು ಅಭಿವೃದ್ಧಿ ಯೋಜನೆ.

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

ರಾಜ್ಯ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು, ೨೦೧೧ರ ಜನಗಣತಿ ಪ್ರಕಾರ ಸುಮಾರು ೮೨,೯೩,೫೭೬ ಆಗಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ.೧೫.೬೯ರಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸಿರುತ್ತದೆ. ರಾಜ್ಯದಲ್ಲಿ ನೆಲೆಸಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧ ಧರ್ಮೀಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತರ ಗುಂಪಿಗೆ ಒಳಪಟ್ಟಿರುತ್ತಾರೆ. ಅಲ್ಪಸಂಖ್ಯಾತರ ಪೈಕಿ ಬಹಳಷ್ಟು ಜನರು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯು ಚಿಂತಾಜನಕವಾಗಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ೦೭.೦೨.೧೯೮೬ರಲ್ಲಿ ಸ್ಥಾಪನೆಯಾಗಿದ್ದು, ಈ ನಿಗಮದಿಂದ ಮತೀಯ ಅಲ್ಪಸಂಖ್ಯಾತರ ಏಳಿಗೆಗಾಗಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ.

**ನಿಗಮದ ಯೋಜನೆಗಳು ಹೀಗಿವೆ:** ೧) 'ಸ್ವಾವಲಂಬನ' ಮಾರ್ಜಿನ್ ಹಣ ಸಾಲ ಯೋಜನೆ ೨) ಸಹಾಯಧನ ಯೋಜನೆ ೩) 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ೪)ಗಂಗಾ ಕಲ್ಯಾಣ ಯೋಜನೆ ೫) 'ಶ್ರಮಶಕ್ತಿ' ಯೋಜನೆ ೬) ಭೂಮಿ ಖರೀದಿ ಯೋಜನೆ ೭) ಸಣ್ಣ (ಮೈಕ್ರೋ) ಸಾಲ ಯೋಜನೆ: ಗಂಗಾ ಕಲ್ಯಾಣ ಯೋಜನೆ: ಅ) ಸಾಮೂಹಿಕ ನೀರಾವರಿ ಯೋಜನೆ ಆ) ವೈಯಕ್ತಿಕ ಕೊಳವೆಬಾವಿ ಯೋಜನೆ ಮತ್ತು ಭೂ ಖರೀದಿ ಯೋಜನೆ ೮) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಸಾಲದ ಯೋಜನೆಗಳು.

## ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಶಾಸನ ಬದ್ಧ ಸಂಸ್ಥೆಯಾಗಿದ್ದು ಅದನ್ನು ೧೯೫೪ ಕೇಂದ್ರ ವಕ್ಫ್ ಕಾಯ್ದೆ ಪ್ರಕಾರ ಸ್ಥಾಪಿಸಲಾಗಿರುತ್ತದೆ. ವಕ್ಫ್ ಆಸ್ತಿಗಳ ಭದ್ರತೆ, ನಿರ್ವಹಣೆ, ನಿಯಂತ್ರಣ ಇತ್ಯಾದಿ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಹೊಂದಿರುತ್ತದೆ. ಮಂಡಳಿಯಲ್ಲಿ ಅಲ್ಪ ಸಂಪನ್ಮೂಲಗಳು ಇರುವುದರಿಂದ ಅದರ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರದಿಂದ ಆರ್ಥಿಕ ನೆರವನ್ನು ಆಶಿಸುತ್ತದೆ. ಕರ್ನಾಟಕ ಸರ್ಕಾರವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಒಟ್ಟಾರೆ ಆಯವ್ಯಯವನ್ನು ನಿಗದಿಪಡಿಸಿದ್ದು, ಅದರ ಅಧೀನದಲ್ಲಿ ಬರುವ ವಿವಿಧ ಯೋಜನೆಯಡಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ವಕ್ಫ್ ಸಂಸ್ಥೆಗಳ ನಿಯಂತ್ರಣವನ್ನು ಮಂಡಲಿಯು ಹೊಂದಿದ್ದು, ಅದರ ವ್ಯವಸ್ಥಾಪಕ ಸಮಿತಿ, ಮುತವಲ್ಲಿ, ಚುನಾವಣೆ ಇತ್ಯಾದಿ ಕುರಿತು ಮಂಡಳಿಯು ಅಧಿಕಾರವನ್ನು ಹೊಂದಿರುತ್ತದೆ. ವಕ್ಫ್ ಆಸ್ತಿಗಳ ಸಂರಕ್ಷಣೆಯ ಜವಾಬ್ದಾರಿಯನ್ನು ಮಂಡಳಿಯು ಹೊಂದಿದ್ದು, ಒತ್ತುವರಿ ಹಾಗೂ ವಕ್ಫ್ ಆಸ್ತಿಗಳನ್ನು ಅನಧಿಕೃತ ಕಬ್ಜೆದಾರರಿಂದ ತೆರವುಗೊಳಿಸಿ ಆಯಾ ಸಂಸ್ಥೆಗಳಿಗೆ ಒಪ್ಪಿಸುವ ಜವಾಬ್ದಾರಿಯನ್ನು ಸಹ ವಕ್ಫ್ ಮಂಡಳಿಯು ಹೊಂದಿರುತ್ತದೆ.

**ಮಂಡಳಿಯ ಕಾರ್ಯಕ್ರಮಗಳು ಹಾಗೂ ಕರ್ತವ್ಯಗಳು:** ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಣಿಯಾದ ಎಲ್ಲಾ ವಕ್ಫ್ ಸಂಸ್ಥೆಗಳ ನಿರ್ವಹಣೆ, ನಿಯಂತ್ರಣ, ಆಡಳಿತಾತ್ಮಕ ವಿಷಯಗಳು ಹಾಗೂ ಇತ್ಯಾದಿ ಮೇಲ್ವಿಚಾರಣೆಗಳ ಅಧಿಕಾರವನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಹೊಂದಿರುತ್ತದೆ. ವಕ್ಫ್ ಸಂಸ್ಥೆಗಳ ಮೂಲ, ಆದಾಯ ಉದ್ದೇಶ ಮತ್ತು ಫಲಾನುಭವಿಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನಿರ್ವಹಿಸಲಾಗುತ್ತಿದೆ. ವಕ್ಫ್ ಸಂಸ್ಥೆಗಳ ಆಡಳಿತ ಕುರಿತು ಸೂಕ್ತ ಮಾರ್ಗದರ್ಶನವನ್ನು ಆಗಿಂದಾಗ್ಗೆ ಮತ್ತು ಆಡಳಿತ ವರ್ಗದ ಕಾರ್ಯಯೋಜನೆ/ಉಪ ಕಾನೂನುಗಳನ್ನು ಹಾಗೂ ಆಯವ್ಯಯ ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಪರಿಶೀಲಿಸಿ ಮಂಜೂರಾತಿ ನೀಡುತ್ತದೆ.

ವಕ್ಫ್ ಕಾಯ್ದೆ ೧೯೯೫ರ ಪ್ರಕಾರ ವಕ್ಫ್ ಸಂಸ್ಥೆಗಳ ಮುತವಲ್ಲಿಗಳು/ವ್ಯವಸ್ಥಾಪಕ ಸಮಿತಿಗಳನ್ನು ನೇಮಿಸಲು ಅಥವಾ ರದ್ದುಪಡಿಸುವ ಅಧಿಕಾರವನ್ನು ಮಂಡಳಿಯು ಹೊಂದಿರುತ್ತದೆ. ವಕ್ಫ್ ಆಸ್ತಿಗಳಿಗೆ ನಷ್ಟ ಉಂಟಾಗಿದ್ದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಸೂಕ್ತ ಕಾರ್ಯವನ್ನು ಕೈಗೊಂಡು ಅದರ ನಡವಳಿಯನ್ನು ಹೊರಡಿಸಲಾಗುವುದು.

ವಕ್ಫ್ ಸ್ಥಿರಾಸ್ತಿಗಳ ಮಾರಾಟ, ಉಡುಗೊರೆ, ಅಡಮಾನ, ಗುತ್ತಿಗೆ ಇವುಗಳನ್ನು ವರ್ಗಾಯಿಸಲು ಮಂಜೂರಾತಿ ನೀಡಲು ವಕ್ಫ್ ಕಾಯ್ದೆ ಪ್ರಕಾರ ಕನಿಷ್ಠ ೨/೩ನೇ ಭಾಗದಷ್ಟು ಮಂಡಲಿಯ ಸದಸ್ಯರುಗಳನ್ನು ಹೊಂದಿರತಕ್ಕದ್ದು. ವಕ್ಫ್ ಸಂಸ್ಥೆ ಹಾಗೂ ವಕ್ಫ್ ಆಸ್ತಿಗಳ ನೈಸರ್ಗಿಕ ಹಾಗೂ ವಿಸ್ತೀರ್ಣ ಕುರಿತು ತನಿಖೆ ನಡೆಸಲು ಹಾಗೂ ನಿರ್ಧರಿಸಲು ವಕ್ಫ್ ಮಂಡಳಿಯು ಅಧಿಕಾರವನ್ನು ಹೊಂದಿರುತ್ತದೆ ಮತ್ತು ಅಗತ್ಯವಿದ್ದಾಗ ವಕ್ಫ್ ಆಸ್ತಿಗಳ ಸಮೀಕ್ಷೆಯನ್ನು ಸಹ ಮಾಡುವುದು.

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (KRIDL)

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆಆರ್‌ಐಡಿಎಲ್)ಯು ಕರ್ನಾಟಕ ಸರ್ಕಾರ ಆರಂಭಿಸಿದ ಒಂದು ಸಂಸ್ಥೆಯಾಗಿದೆ. ೧೯೭೧ರಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಡಿ 'ಭೂ ಸೇನಾ ನಿರ್ದೇಶನಾಲಯ' ಎಂಬುದಾಗಿ ಪ್ರಾರಂಭವಾದ ಇದು ಕರ್ನಾಟಕ ಸರ್ಕಾರದ ಪೂರ್ಣ ಮಾಲಿಕತ್ವದಲ್ಲಿ ೯-೮-೧೯೭೪ರಲ್ಲಿ 'ಕರ್ನಾಟಕ ಭೂ ಸೇನಾ ನಿಗಮ' ಎಂಬ ಹೆಸರಿನ ಕಂಪನಿಯಾಗಿ, ನಂತರ ಈಗ ೬-೮-೨೦೦೮ರಿಂದ ಇದನ್ನು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್(KRIDL) ಎಂದು ಮರುನಾಮಕರಣ ಮಾಡಲಾಯಿತು.

ಇದು ಕಟ್ಟಡ ನಿರ್ಮಾಣ ಮತ್ತು ರಾಜ್ಯದಲ್ಲಿ ಆಸ್ತಿಯನ್ನು ಸೃಷ್ಟಿಸುವ ಸಿವಿಲ್ ಎಂಜಿನಿಯರಿಂಗ್‌ನ್ನು ಸಮಾವೇಶಗೊಳಿಸಿರುವ ಒಂದು ಅಸಾಧಾರಣ ಸಂಸ್ಥೆಯಾಗಿದೆ. ಬೆಂಗಳೂರಿನಲ್ಲಿ ಕೇಂದ್ರಸ್ಥಾನ ಹೊಂದಿರುವ ನಿಗಮವು ಅನೇಕ ವಲಯ, ವಿಭಾಗ ಮತ್ತು ಉಪ ವಿಭಾಗಗಳನ್ನು ಹೊಂದಿದ್ದು ರಾಜ್ಯಾದ್ಯಂತ ಕಾರ್ಯನಿರತವಾಗಿದೆ.

ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಿ, ಅವರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಉದ್ಯೋಗ ಕೇಂದ್ರಿತ ಮೂಲ ಸೌಕರ್ಯ ಕಾಮಗಾರಿಗಳಿಗೆ ಮಹತ್ವ ನೀಡುವುದು ಈ ಸಂಸ್ಥೆಯ ಧ್ಯೇಯವಾಗಿದೆ. ಗ್ರಾಮೀಣ ಬಡವರನ್ನು ಶೋಷಣೆ ಮಾಡುವುದನ್ನು ತಪ್ಪಿಸಿ (ಕಂಟ್ರಾಕ್ಟರುಗಳಂತಹ ಮಧ್ಯವರ್ತಿಗಳು) ಪೂರ್ತಿ ಹಣ ಜನರಿಗೆ ತಲುಪುವಂತೆ ಮಾಡಲು ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳನ್ನು ನೇರವಾಗಿ ಕೈಗೆತ್ತಿಕೊಳ್ಳುತ್ತದೆ.

ಕರ್ನಾಟಕದಲ್ಲಿಯೇ ಶ್ರೇಷ್ಠ ಹಾಗೂ ಸಮರ್ಥ ಸಾರ್ವಜನಿಕ ವಲಯದ ಕಂಪನಿಯಾಗಿ ಹೊರಹೊಮ್ಮುವುದು. ನಿರ್ಮಾಣ ವ್ಯವಸ್ಥೆಯಲ್ಲಿಯೇ ಮುಂಚೂಣಿ ಸ್ಥಾನ ಪಡೆಯುವುದು. ಗುಣಮಟ್ಟದ ಮತ್ತು ಮಿತವ್ಯಯದ ಸೇವೆ ಒದಗಿಸುವುದು. ಒಟ್ಟಾರೆಯಾಗಿ ಅತ್ಯುತ್ತಮ ಸೇವೆಯೇ ಗುರಿ ಎಂಬ ಧ್ಯೇಯವನ್ನು ಈ ಸಂಸ್ಥೆಯು ಹೊಂದಿರುತ್ತದೆ. ಬೆಲೆ ಮತ್ತು ಸಮಯ ವಿಳಂಬವಾಗುವುದನ್ನು ತಪ್ಪಿಸುವುದು, ಗ್ರಾಹಕರ ಅಗತ್ಯಗಳಿಗೆ ತಕ್ಷಣ ಸ್ಪಂದನೆ, ಕೆಆರ್‌ಐಡಿಎಲ್ ಮಾಡಬಹುದಾದ ಎಲ್ಲಾ ಕಾರ್ಯಗಳಲ್ಲಿ ವಿಶ್ವಾಸಾರ್ಹತೆ ಗಳಿಸುವುದು ಮತ್ತು ಈ ಕ್ಷೇತ್ರದಲ್ಲಿಯೇ ಗೆಲುವು ಸಾಧಿಸುವ ಬದ್ಧತೆಯುಳ್ಳ ಸಿಬ್ಬಂದಿವರ್ಗವನ್ನು ಹೊಂದಿರುತ್ತದೆ.

ಗ್ರಾಮೀಣ ಅಭಿವೃದ್ಧಿ ಕಾರ್ಯಗಳು, ಗ್ರಾಮೀಣ ಸಂಪರ್ಕ, ಸೇತುವೆ, ಶಾಲೆಗಳು, ಆಸ್ಪತ್ರೆಗಳು, ವಿದ್ಯಾರ್ಥಿ ನಿಲಯಗಳು, ಮನೆಗಳು, ಗ್ರಾಹಕರ ಪರಿಹಾರ ವೇದಿಕೆ, ಯುವಜನ ಸೇವೆ, ನವೋದಯ ವಿದ್ಯಾಲಯ ಸಂಘಟನೆ, ಕೇಂದ್ರೀಯ ವಿದ್ಯಾಲಯ ಸಂಘಟನೆ, ಸಂಯೋಜಿತ ಕ್ಷೇತ್ರಾಭಿವೃದ್ಧಿ, ಜಲಸಂಪನ್ಮೂಲ ಅಭಿವೃದ್ಧಿ, ಡೈರಿ, ಮೀನುಗಾರಿಕೆ, ಸಣ್ಣ ನೀರಾವರಿ, ಗ್ರಾಮೀಣ ಸಂಪರ್ಕ ಸೇವೆಗಳು, ಇತರೆ ಅಭಿವೃದ್ಧಿ ಯೋಜನೆಗಳು, ಮುಂತಾದ ೩,೫೦೦ ಹೊಸ ಯೋಜನೆಗಳನ್ನು ಇದು ರಾಜ್ಯಾದ್ಯಂತ ಕಾರ್ಯಗತಗೊಳಸುತ್ತಿದೆ.

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರ ಅವಲಂಬಿತರಿಗೆ, ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರ ಕಲ್ಯಾಣ ಹಾಗೂ ಪುನರ್ವಸತಿಯ ನಿರ್ವಹಣೆಯನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. ವಿವಿಧ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ರೂಪಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ನೆರವಾಗಲು ಕರ್ನಾಟಕ ರಾಜ್ಯ ಸೈನಿಕ ಮಂಡಳಿ ಎಂಬ ಒಂದು ಸಲಹಾ ಸಮಿತಿ/ಮಂಡಳಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ/ಲ೫/ಕಸೈಸೇ/೨೦೦೮ ದಿ ೨೨-೧೦-೨೦೦೮ರಲ್ಲಿ ಸರ್ಕಾರ ರಚಿಸಿದೆ. ಈ ಮಂಡಳಿಗೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ ಹಾಗೂ ಅಧಿಕಾರ/ಅಧಿಕಾರೇತರ ಸದಸ್ಯರುಗಳಾಗಿರುತ್ತಾರೆ. ಸದರಿ ಮಂಡಳಿಯನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಪುನರ್ ರಚಿಸಲಾಗುತ್ತದೆ.

**ಇಲಾಖೆಯ ಕಾರ್ಯಕ್ರಮಗಳು:** ೧) ಉದ್ಯೋಗ ಮೀಸಲಾತಿ ಮತ್ತು ಸ್ವಯಂ ಉದ್ಯೋಗ ೨)ವಯೋಮಿತಿ ಸಡಿಲಿಕೆ ಹಾಗೂ ಶುಲ್ಕ ವಿನಾಯಿತಿ ೩) ವೇತನ ನಿಗದಿ ೪) ತಾಂತ್ರಿಕ ಶಿಕ್ಷಣದಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಸೀಟುಗಳನ್ನು ಕಾಯ್ದಿರಿಸಲಾಗಿದೆ ೫) ವೈದ್ಯಕೀಯ ಸವಲತ್ತು ೬) ಭೂ ಮಂಜೂರಾತಿ ೭) ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರಿಗೆ ಅನುಗ್ರಹ ಪೂರ್ವಕ ಅನುದಾನ, ಜಮೀನು ಅಥವಾ ಅದರ ಬದಲಾಗಿ ನಗದು ಅನುದಾನ ಮತ್ತು ಉಚಿತ ಗೃಹ ನಿರ್ಮಾಣ ೮) ಭೂ ಸುಧಾರಣೆ ಮತ್ತು ಬಾಡಿಗೆ ನಿಯಂತ್ರಣ ಕಾಯ್ದೆಯಲ್ಲಿ ವಿಶೇಷ ಆದ್ಯತೆ ೯) ಶೌರ್ಯ ಹಾಗೂ ಶೌರ್ಯೇತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನ ೧೦) ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿ ನಿವೃತ್ತಿ ವೇತನ ಪಡೆಯದೆ ಬಿಡುಗಡೆಯಾದ ಯೋಧರಿಗೆ ಮತ್ತು ಅವರ ವಿಧವೆಯರಿಗೆ ಮಾಸಿಕ ರೂ. ೧೫೦೦ ಗೌರವಧನ ೧೧) ೧೯೬೭ರ ಮುಂಚಿನ ಸಮರಗಳಲ್ಲಿ ಹುತಾತ್ಮರಾದ ಯೋಧರ ಪತ್ನಿಯರಿಗೆ ರೂ. ೫೦೦ ಮಾಸಿಕ ಗೌರವಧನ ಹಾಗೂ ಯುದ್ಧ ಪ್ರಶಸ್ತಿ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ರಾಜ್ಯದ ಮಹಿಳೆಯರು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಬಲಿಷ್ಠರಾಗಲು ಮತ್ತು ರಾಜ್ಯ ಮಕ್ಕಳ ಭವಿಷ್ಯವು ಬಾಲ್ಯಾವಸ್ಥೆಯಿಂದಲೇ ಆಶಾದಾಯಕವಾಗಿರಲು ಭದ್ರ ಬುನಾದಿ ಹಾಕುವ ಉದ್ದೇಶವನ್ನು ಈ ಇಲಾಖೆಯು ಹೊಂದಿದೆ. ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಲು ಬೇಕಾದ ಸಾಂಸ್ಥಿಕ ಮತ್ತು ಆರ್ಥಿಕ ನೆರವನ್ನು ಒದಗಿಸುವುದು. ಮಹಿಳೆಯರ ಮತ್ತು ಮಕ್ಕಳ ಆರೋಗ್ಯ, ಪೌಷ್ಠಿಕತೆ ಹಾಗೂ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲು ಇತರೆ ಸಹ ಇಲಾಖೆಗಳ ಸಹಯೋಗದೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸುವುದು. ಮಹಿಳೆಯರಲ್ಲಿ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಲು ಶಿಕ್ಷಣ, ಸಾಮಾಜಿಕ ಶಾಸನಗಳು, ಕೌಶಲ್ಯ ಅಭಿವೃದ್ಧಿ, ಸಾಮರ್ಥ್ಯ ಅಭಿವೃದ್ಧಿ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳ ಬಗ್ಗೆ ಅರಿವನ್ನು ಮೂಡಿಸುವುದು. ಈ ಮೂಲಕ ಮಹಿಳೆಯರನ್ನು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಸಬಲೀಕರಣಗೊಳಸುವುದು. ಮಕ್ಕಳ ಶಿಕ್ಷಣ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವುದು ಸೇರಿದಂತೆ ಅವರ ಹಕ್ಕುಗಳನ್ನು ಸಂರಕ್ಷಿಸಿ ಅವರು ಬದುಕುಳಿದು ಅಭಿವೃದ್ಧಿ ಹೊಂದಲು ಪೂರಕವಾಗಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಅನುಷ್ಠಾನಗೊಳಸುವುದು. ಮಹಿಳೆಯರು ಮತ್ತು ಮಕ್ಕಳು ಸಮಾಜದಲ್ಲಿ ನ್ಯಾಯಬದ್ಧವಾಗಿ ಸಮಾನತೆಯನ್ನು ಹೊಂದಲು, ಕೇಂದ್ರ ಹಾಗೂ ರಾಜ್ಯ ಸರ್ಕಾರವು ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸಲು ರೂಪಿಸಿರುವ ಕಾಯ್ದೆಗಳು ಮತ್ತು ಅಧಿನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ವಿವಿಧ ಶೋಷಣೆಗಳಿಂದ ರಕ್ಷಿಸಿ ಸಂಕಷ್ಟ ಪರಿಸ್ಥಿತಿಯಿಂದ ಹೊರತರುವುದು. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ

ಇರುವ ಕಾಯ್ದೆಗಳನ್ನು, ಕಾರ್ಯನೀತಿಗಳನ್ನು, ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಹಾಗೂ ನಿರ್ದಿಷ್ಟ ಗುರಿಗಳನ್ನು ತಲುಪಲು ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಹಾಗೂ ಕಾರ್ಪೋರೇಟ್ ವಲಯಗಳ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.

ಭಾರತ ಸಂವಿಧಾನವು ಮಹಿಳೆಯರ ಮತ್ತು ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಿರುತ್ತದೆ. ಇದು ಮಹಿಳೆಯರಿಗೆ ಸಮಾನತೆ ನೀಡಿರುವುದಲ್ಲದೆ ಮಹಿಳೆಯರಿಗೆ ಸಹಾಯಕವಾಗುವಂತೆ ಸಕಾರಾತ್ಮಕವಾದ ಹೆಜ್ಜೆಗಳನ್ನು ರಾಜ್ಯ ಅಳವಡಿಸಿಕೊಳ್ಳಲು ಒತ್ತುಕೊಟ್ಟಿದೆ. ಮಹಿಳೆ ಮತ್ತು ಮಕ್ಕಳಿಗೆ ಉತ್ತಮ ಜೀವನ ನೀಡುವ ದೃಷ್ಟಿಯೊಂದಿಗೆ ಸಂವಿಧಾನ ನೀಡಿರುವ ಅವಕಾಶಗಳನ್ನು ಬಳಸಿಕೊಂಡು ರಾಜ್ಯ ಸರ್ಕಾರವು ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ. ಮಹಿಳೆ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಅಭಿವೃದ್ಧಿ ಯೋಜನೆಗಳನ್ನು ಒದಗಿಸುವ ಉದ್ದೇಶದಿಂದ ೧೯೭೫ರಲ್ಲಿ ಮಹಿಳೆ ಮತ್ತು ಮಕ್ಕಳಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಲಾಯಿತು.

## ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು

**ಸ್ತ್ರೀಶಕ್ತಿ ಯೋಜನೆ:**ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ಸಾಲಿನಿಂದ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಸ್ತ್ರೀಶಕ್ತಿ ಯೋಜನೆಯಡಿ ಸ್ವ-ಸಹಾಯ ಗುಂಪುಗಳನ್ನು ರಚಿಸುವುದರ ಮೂಲಕ ಮಹಿಳೆಯರನ್ನು ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪ್ರಸಕ್ತ ರಾಜ್ಯದಲ್ಲಿ ಒಟ್ಟು ೧.೪೦,೦೦೦ ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಮಾರ್ಚ್ ೨೦೧೫ರ ಅಂತ್ಯದವರೆಗೆ ೨೧.೬೫ ಲಕ್ಷ ಮಹಿಳೆಯನ್ನು ಒಗ್ಗೂಡಿಸಲಾಗಿದೆ. ಪ್ರಾರಂಭದಿಂದ ಇಲ್ಲಿಯವರೆಗೂ ಸ್ತ್ರೀಶಕ್ತಿ ಗುಂಪಿನ ಸದಸ್ಯರ ಉಳಿತಾಯ ರೂ. ೧೭೫೨.೮೫ ಕೋಟಿಯಾಗಿರುತ್ತದೆ. ಒಟ್ಟು ೧೨೯೮೯ ಗುಂಪುಗಳು ರೂ. ೨೭೫೨.೬೨ ಕೋಟಿ ಬ್ಯಾಂಕ್ ಸಾಲ ಮತ್ತು ರೂ. ೪೯೦೪.೦೮ ಕೋಟಿ ಆಂತರಿಕ ಸಾಲ ಪಡೆದುಕೊಂಡು ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಸ್ತ್ರೀಶಕ್ತಿ ಗುಂಪುಗಳಿಗೆ ಬ್ಯಾಂಕುಗಳಿಂದ ಸಾಲವನ್ನು ಒದಗಿಸಲಾಗುತ್ತಿದ್ದು, ಈ ಸಾಲಕ್ಕೆ ಶೇಕಡ ೬ರ ಬಡ್ಡಿ ಸಹಾಯಧನವನ್ನು ನೀಡಲಾಗಿದೆ. ಕೌಶಲ್ಯ ಅಭಿವೃದ್ಧಿ, ಕಾನೂನು ಮತ್ತು ಆರ್ಥಿಕ ವಿಚಾರವಾಗಿ ತರಬೇತಿ ಒದಗಿಸಲಾಗಿದೆ. ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ ನೀಡಲಾಗಿದೆ. ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿಸುವ ಸಲುವಾಗಿ ಗುಂಪುಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗಿದೆ. ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ರಮವಾಗಿ ರೂ.೫೦,೦೦೦, ರೂ.೩೦,೦೦೦, ರೂ.೨೦,೦೦೦ಗಳನ್ನು ಅತ್ಯುತ್ತಮ ಸ್ತ್ರೀ ಶಕ್ತಿ ಗುಂಪುಗಳಿಗೆ ಪ್ರಶಸ್ತಿ ನೀಡಲಾಗಿದೆ. ಹಾಗೆಯೇ ಒಂದೊಂದು ಕಂದಾಯ ವಿಭಾಗಕ್ಕೆ ಒಂದೊಂದರಂತೆರೂ.೨೫,೦೦೦ಗಳನ್ನು ಶ್ರೀಮತಿ ಯಶೋದಮ್ಮ ದಾಸಪ್ಪ ಅವರ ಹೆಸರಿನಲ್ಲಿ ನೀಡಲಾಗುತ್ತಿದೆ. ರಾಜ್ಯ ಮಟ್ಟದಲ್ಲಿ ಮೂರು ಅತ್ಯುತ್ತಮ ಬ್ಲಾಕ್ ಸೊಸೈಟಿಗಳನ್ನು ಆಯ್ಕೆ ಮಾಡಿ ಅವುಗಳಿಗೆ ಮೂರು ಉತ್ತಮ ಸೊಸೈಟಿಗಳೆಂದು ಗುರುತಿಸಿ ಕ್ರಮವಾಗಿ ರೂ. ೮೦,೦೦೦, ರೂ. ೭೦,೦೦೦, ರೂ. ೬೦,೦೦೦ಗಳನ್ನು ನೀಡಿ ಗೌರವಿಸುತ್ತದೆ.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ೨೦೦೫ ನಿಯಮ ೨೦೦೬: ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾದಾಗ, ನ್ಯಾಯಾಲಯದ ಮುಖಾಂತರ ಮಹಿಳೆಯರಿಗೆ ಆರ್ಥಿಕ ಪರಿಹಾರ, ರಕ್ಷಣಾ ಆದೇಶ, ವಾಸದ ಆದೇಶ, ಮಕ್ಕಳ ವಶ, ತಾತ್ಕಾಲಿಕ ಆಶ್ರಯ, ವೈದ್ಯಕೀಯ ಹಾಗೂ ಕಾನೂನು ನೆರವನ್ನು ಒದಗಿಸಲು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ೨೦೦೫ ಹಾಗೂ ನಿಯಮ ೨೦೦೬ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ೫,೬೩೦, ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ ೧,೧೮೮.

**ಸಾಂತ್ವನ:** ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯ, ಆರ್ಥಿಕ ಪರಿಹಾರ ಹಾಗೂ ತರಬೇತಿ ಮುಖಾಂತರ ಸ್ವಾವಲಂಬಿಗಳಾಗುವಂತೆ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿ ಹೊಂದಿದೆ. ಪ್ರಸ್ತುತ ೧೮೭ ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ:** ಲಿಂಗತ್ವ ಸಮಾನತೆಯನ್ನು ಖಚಿತಪಡಿಸಲು ಮತ್ತು ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತರಲು ನಿಧಿಯನ್ನು ಅಂತರವಲಯ ಹಂಚಿಕೆ ಮಾಡುವ ಯೋಜನೆಯನ್ನು ಮೇಲ್ವಿಚಾರಣೆ ಮಾಡುವ ದೃಷ್ಟಿಯಿಂದ ನಿರ್ದೇಶನಾಲಯದಲ್ಲಿ ದಿ: ೩-೫-೨೦೦೩ರಿಂದ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನಾ ಘಟಕವನ್ನು ಪ್ರಾರಂಭಿಸಲಾಗಿದೆ. ಲಿಂಗತ್ವಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಗೆಹರಿಸಲು ಮೊದಲ ಬಾರಿಗೆ ಸರ್ಕಾರವು ಜಾಗೃತವಾದ ಮತ್ತು ಸಕಾರಾತ್ಮಕವಾದ ಪ್ರಯತ್ನ ಮಾಡಿದ್ದರಿಂದ ಈ ಆದೇಶವು ಹೆಗ್ಗುರುತಿನ ಆದೇಶವಾಗಿರುತ್ತದೆ. ಸರ್ಕಾರದಲ್ಲಿ ವಿವಿಧ ಇಲಾಖೆಗಳ ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಹಾಗೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕಾರ್ಯಕ್ರಮಗಳಿಗೆ ಒದಗಿಸುವ ಸಂಪನ್ಮೂಲಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ.

೨೦೧೫-೧೬ನೇ ಸಾಲಿನಲ್ಲಿ ಒಟ್ಟು ಆಯವ್ಯಯ ರೂ. ೧೭,೯೬೬.೧೮ ಕೋಟಿಗಳಲ್ಲಿ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಗಾಗಿ ರೂ.೬,೩೨೫.೪೧ ಕೋಟಿಗಳನ್ನು ನಿಗದಿಪಡಿಸಿದ್ದು, ಮಾರ್ಚ್ ೨೦೧೬ರ ವೇಳೆಗೆ ರೂ.೪,೭೯೪.೪೪ ಕೋಟಿಗಳನ್ನು ಈ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿರುತ್ತದೆ.

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ:** ಪ್ರತಿ ವರ್ಷ ಮಾರ್ಚ್ ಎಂಟರಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಆಚರಿಸಲಾಗುತ್ತಿದೆ. ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ಹಾಗೂ ಸಬಲೀಕರಣಗೊಳಿಸುವ

ವಿಷಯಗಳ ಬಗ್ಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಕಾರ್ಯೋನ್ಮುಖವಾಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ಪ್ರಕಟಿಸಿರುತ್ತದೆ. ಸ್ವಯಂ ಸೇವಾ ಸಂಸ್ಥೆಗೆ ನೀಡುವ ಪ್ರಶಸ್ತಿಯು ರೂ. ೫೦,೦೦೦ಗಳ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ವೈಯಕ್ತಿಕ ಪ್ರಶಸ್ತಿಯನ್ನು ಮಹಿಳಾ ಅಭಿವೃದ್ಧಿ, ಕ್ರೀಡೆ, ಸಾಹಿತ್ಯ, ಕಲೆ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಸೇವೆಸಲ್ಲಿಸಿದ ಮಹಿಳೆಯರಿಗೆ ಪ್ರಕಟಿಸಿದ್ದು, ಅದು ತಲಾ ರೂ ೨೫,೦೦೦ಗಳ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ವರದಕ್ಷಿಣೆ ನಿಷೇಧ ಕಾಯ್ದೆ ೧೯೬೧:** ವರದಕ್ಷಿಣೆಯ ವ್ಯವಸ್ಥೆಯು ಒಂದು ಸಾಮಾಜಿಕ ಪಿಡುಗಾಗಿದ್ದು, ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳುವುದು ವರದಕ್ಷಿಣೆ ನಿಷೇಧ ಕಾಯ್ದೆ ೧೯೬೧ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಈ ಕಾಯ್ದೆಗೆ ೧೯೮೪ ಹಾಗೂ ೧೯೮೬ರಲ್ಲಿ ತಿದ್ದುಪಡಿಯನ್ನು ಮಾಡಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ಒಟ್ಟು ೨೨೬ ಪ್ರಕರಣಗಳು ಮಾರ್ಚ್ ೨೦೧೬ರ ಅಂತ್ಯಕ್ಕೆ ಈ ಕಾಯ್ದೆಯಡಿ ನೋಂದಣಿಯಾಗಿರುತ್ತವೆ.

**ಸ್ವಾಧಾರ:** ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ನೋಂದಣಿಯಾಗಿ ಮೂರು ವರ್ಷವಾಗಿದ್ದು, ಆರ್ಥಿಕವಾಗಿ ಸದೃಢವಾದ ಎಲ್ಲಾ ಮೂಲಭೂತ ಅನುಕೂಲತೆಗಳನ್ನು ಹೊಂದಿದ, ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಅನುಭವವಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರಗಳಲ್ಲಿ ಮಹಿಳಾ ಸಹಾಯವಾಣಿ, ಸಲಹಾ ಕೇಂದ್ರ, ತರಬೇತಿ ಕೇಂದ್ರ ಹಾಗೂ ವೈದ್ಯಕೀಯ ಕೇಂದ್ರಗಳನ್ನು ನಡೆಸಲು ಅವಕಾಶವಿದೆ. ರಾಜ್ಯದಲ್ಲಿ ಪ್ರಸ್ತುತ ೩೧ ಸ್ವಾಧಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಮದ್ಯ ಮತ್ತು ಮಾದಕ ವಸ್ತುಗಳ ದುರುಪಯೋಗವನ್ನು ತಡೆಗಟ್ಟುವ ಯೋಜನೆ (೨೦೦೩-೦೪):** ಈ ಯೋಜನೆಯಡಿಯಲ್ಲಿ ವ್ಯಸನಿಗಳ ಗುರುತಿಸುವಿಕೆ, ಸಮಾಲೋಚನೆ, ಮದ್ಯ/ಮಾದಕ ವಸ್ತು ಸೇವಿಸುವ ವ್ಯಸನಿಗಳ ಚಿಕಿತ್ಸೆ ಹಾಗೂ ಪುನರ್ವಸತಿ ಮಾಡುವ ಮದ್ಯ ವರ್ಜನಾ ಕೇಂದ್ರಗಳಿಗೆ, ಡಿ-ಅಡಿಕ್ಷನ್ ಶಿಬಿರಗಳಿಗೆ, ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಜಾಗೃತಿ ಶಿಬಿರಗಳು ಹಾಗೂ ಶಿಕ್ಷಣಕ್ಕೆ ಧನಸಹಾಯ ನೀಡಲಾಗುವುದು. ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ನೋಂದಾಯಿತವಾಗಿ ಮೂರು ವರ್ಷವಾದ, ಆರ್ಥಿಕವಾಗಿ ಸದೃಢವಾದ ಎಲ್ಲಾ ಮೂಲಭೂತ ಅನುಕೂಲತೆಗಳನ್ನು ಹೊಂದಿದ ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನ ನೀಡಲಾಗುವುದು. ಶೇ.೯೦ ರಷ್ಟು ಅನುದಾನವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುವುದು ಹಾಗೂ ಶೇ.೧೦ ರಷ್ಟು ಅನುದಾನವನ್ನು ಸ್ವಯಂಸೇವಾ ಸಂಸ್ಥೆಗಳೇ ಭರಿಸಬೇಕಾಗಿರುತ್ತದೆ.

**ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು:** ೧) ಸಮಗ್ರ ಶಿಶು ಅಭಿವೃದ್ಧಿ ಯೋಜನೆ ೨) ಪೌಷ್ಟಿಕ ಆಹಾರ ಹಾಗೂ ಆರೋಗ್ಯ ಶಿಕ್ಷಣ ಕೃಪಿಡಿ ೩) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ ೪) ಪೂರಕ ಪೌಷ್ಟಿಕ ಆಹಾರ ೫) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮ ೬) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಮರಣ ಪರಿಹಾರ ನಿಧಿ ೭) ಅಂಗನವಾಡಿ ಕಟ್ಟಡಗಳ ನಿರ್ಮಾಣ ೮) ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ ೯) ಕಿಶೋರಿ ಶಕ್ತಿ ಯೋಜನೆ ೧೦) ರಾಜೀವ ಗಾಂಧಿ ಪ್ರಾಯಪೂರ್ವ ಬಾಲಕಿಯರ ಸಬಲೀಕರಣ ಯೋಜನೆ – ಸಬಲಾ ೧೧) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವಂತಿಕೆ ಆಧಾರಿತ ಪಿಂಚಣಿ ಯೋಜನೆ ೧೨)ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ ೧೩) ಭಾಗ್ಯಲಕ್ಷ್ಮಿ ೧೪) ಚೈಲ್ಡ್ ಟ್ರ್ಯಾಕಿಂಗ್ ಪದ್ಧತಿ ೧೫) ಬಾಲಕಿಯರ ವಸತಿ ನಿಲಯ ೧೬) ಮಕ್ಕಳ ಪಾಲನೆ ಪೋಷಣೆ ಅಗತ್ಯವಿರುವ ಮಕ್ಕಳ ಕಲ್ಯಾಣ ಯೋಜನೆ (ನಿರ್ಗತಿಕ ಮಕ್ಕಳ ಕುಟೀರ) ೧೭) ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಹಾಜರಾತಿ ಶಿಷ್ಯವೇತನ(ಜಿಲ್ಲಾ ಪಂಚಾಯತ್ ಯೋಜನೆ) ೧೮) ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ(ಜಿಲ್ಲಾ ಪಂಚಾಯತ್ ಯೋಜನೆ) ೧೯) ಬಾಲ್ಯ ವಿವಾಹ ನಿಷೇಧ ಕಾಯ್ದೆ – ೨೦೦೬ (೨೦) ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ(೨೦೦೬-೦೭) ೨೧) ಧೈರ್ಯ ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮ ೨೨) ಮಹಿಳೆಯರ ಮತ್ತು ಮಕ್ಕಳ ಸಾಗಾಟ ನಿರ್ಮೂಲನೆ ೨೩) ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿ ೨೪) ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿ ೨೫)ರಾಜೀವಗಾಂಧಿ ಮಾನವಸೇವಾ ಪ್ರಶಸ್ತಿ ೨೬) ಬೀದಿ ಮಕ್ಕಳ ಸಮಗ್ರ ಕಾರ್ಯಕ್ರಮ ೨೭) ದುಡಿಯುವ ಮಕ್ಕಳ ಕಲ್ಯಾಣಕ್ಕಾಗಿ ಪಾಲನೆ ಮತ್ತು ರಕ್ಷಣೆಗಾಗಿ ಯೋಜನೆ ೨೮) ಉಜ್ವಲ ೨೯) ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆಗಳು.

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ:** ೧) ಬಾಲನ್ಯಾಯ ೨) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ ೧೯೫೮ ೩) ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ ೧೯೫೬ ಮತ್ತು ಸಾಮಾಜಿಕ ಹಾಗೂ ನೈತಿಕ ಆರೋಗ್ಯ ಕಾರ್ಯಕ್ರಮಗಳು ೪) ಅನುಪಾಲನಾ ಸೇವೆಗಳು ೫) ಕೌಶಲ್ಯಾಭಿವೃದ್ಧಿ ಯೋಜನೆ ೬) ಹೆಚ್ಐವಿ/ಏಡ್ಸ್ ಸೋಂಕಿತ ಮಕ್ಕಳ ವಿಶೇಷ ಪಾಲನಾ ಕೇಂದ್ರ (೨೦೦೯-೧೦)

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:** ಮಕ್ಕಳಿಗೆ ಉತ್ತಮ ಭವಿಷ್ಯವೇ ಭಾರತದ ಭವಿಷ್ಯ ಎಂಬ ದೂರದೃಷ್ಟಿಯ ಪ್ರಕಾರ, ಇಲಾಖೆಯು ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಜಾರಿಯಲ್ಲಿರುವ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಿ ಶ್ರಮಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕವಾಗಿ ೨ನೇ ಅಕ್ಟೋಬರ್ ೧೯೭೫ರಂದು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ೧೦೦ ಅಂಗನವಾಡಿ ಕೇಂದ್ರಗಳೊಂದಿಗೆ ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ. ಗರ್ಭಿಣಿ, ಬಾಣಂತಿ, ಕಿಶೋರಿಯರು ಮತ್ತು ಆರು ವರ್ಷದ ಒಳಗಿನ ಮಕ್ಕಳ ಕಲ್ಯಾಣವು ಈ ಯೋಜನೆಯ

ಮುಖ್ಯ ಗುರಿಯಾಗಿರುತ್ತದೆ. ೦-೬ ವರ್ಷದ ಮಕ್ಕಳ ಆರೋಗ್ಯ, ಪೌಷ್ಟಿಕ ಮಟ್ಟವನ್ನು ವೃದ್ಧಿಸುವುದು. ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು.

ಮಕ್ಕಳ ಸಾವು ಅನಾರೋಗ್ಯ ಅಪೌಷ್ಟಿಕತೆ ಮತ್ತು ಶಾಲಾ ಬಿಡುವಿಕೆಯನ್ನು ಕಡಿಮೆಗೊಳಸುವುದು. ಶಿಶು ಅಭಿವೃದ್ಧಿ ಕಾರ್ಯಕ್ರಮವನ್ನು ಉತ್ತಮಗೊಳಸುವ ಕಾರ್ಯನೀತಿ ಮತ್ತು ಅನುಷ್ಠಾನಗೊಳಸುವ ದಿಸೆಯಲ್ಲಿ ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವುದು. ಆರೋಗ್ಯ ಮತ್ತು ಪೌಷ್ಟಿಕತೆಯ ಶಿಕ್ಷಣವನ್ನು ನೀಡುವುದರ ಮೂಲಕ ತಾಯಂದಿರಲ್ಲಿ ತಮ್ಮ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ಅಗತ್ಯಗಳನ್ನು ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು. ರಾಜ್ಯದ ಎಲ್ಲಾ ೧೭೫ ತಾಲ್ಲೂಕುಗಳಲ್ಲೂ ೧೮೧ ಗ್ರಾಮಾಂತರ ೧೨ ಗುಡ್ಡಗಾಡು ಯೋಜನೆ ಹಾಗೂ ೧೧ ನಗರ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳ ಮುಖಾಂತರ ಅನುಷ್ಠಾನಗೊಳ್ಳುತ್ತಿದೆ. ರಾಜ್ಯದಲ್ಲಿ ಒಟ್ಟು ೬೧,೧೮೭ ಅಂಗನವಾಡಿ ಕೇಂದ್ರಗಳು ಹಾಗೂ ೩,೩೩೧ ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಭಾಗ್ಯಲಕ್ಷ್ಮಿ ಯೋಜನೆ:** ಈ ಯೋಜನೆಯನ್ನು ಆಗಸ್ಟ್ ೨೦೦೮ರಲ್ಲಿ ಭಾಗಶಃ ಮಾರ್ಪಡಿಸಲಾಗಿರುತ್ತದೆ. ಪರಿಷ್ಕರಿಸಲಾದ ಯೋಜನೆಯು ದಿ ೦೧-೦೮-೦೮ರಂದು ಹಾಗೂ ನಂತರ ಜನಿಸಿದ ಮಕ್ಕಳಗೆ ಅನ್ವಯಿಸುತ್ತದೆ. ಹಾಲಿ ಜಾರಿಯಲ್ಲಿರುವ ಯೋಜನೆಯನ್ನು ಈ ರೀತಿ ಪರಿಷ್ಕರಿಸಲಾಗಿದೆ. ರೂ.೧೦,೦೦೦ ಗಳ ಬದಲಾಗಿ ಯೋಜನೆಯಡಿ ನೋಂದಣಿಯಾದ ಕುಟುಂಬದ ಮೊದಲನೆಯ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.೧೯,೩೦೦ ಹಾಗೂ ಎರಡನೇ ಹೆಣ್ಣು ಮಗುವಿನ ಹೆಸರಿನಲ್ಲಿ '೧೮,೩೫೦ ಗಳ ಮೊತ್ತವನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿಯಲ್ಲಿರಿಸಿ, ೧೮ ವರ್ಷ ಪೂರ್ಣಗೊಂಡಾಗ ಕುಟುಂಬದ ಮೊದಲನೇಯ ಫಲಾನುಭವಿಗೆ ರೂ. ೧,೦೦,೦೦೦ ಪರಿಪಕ್ವ ಮೊತ್ತ ದೊರೆಯುತ್ತದೆ.

ವಿದ್ಯಾಭ್ಯಾಸವನ್ನು ಕೈಗೊಳ್ಳಲು ಆಸಕ್ತಿ ಇದ್ದಲ್ಲಿ, ಬಾಂಡ್‌ನ್ನು ಅಂಗೀಕೃತ ಬ್ಯಾಂಕ್‌ಗಳಲ್ಲಿ ಅಡಮಾನವಿರಿಸಿ ಗರಿಷ್ಟ ರೂ. ೫೦,೦೦೦ ಗಳವರೆಗೆ ಸಾಲವನ್ನು ಪಡೆಯಬಹುದಾಗಿರುತ್ತದೆ. ಈ ಯೋಜನೆಯಡಿ ೨೦೧೪-೧೫ನೇ ಸಾಲಿನಲ್ಲಿ ಭಾರತೀಯ ಜೀವ ವಿಮಾ ನಿಗಮದಿಂದ ಫಲಾನುಭವಿಗಳಗೆ ವಿತರಿಸಿರುವ ಬಾಂಡ್‌ಗಳ ಸಂಖ್ಯೆ ೧೭,೧೭೭೦. ಇಲ್ಲಿಯವರೆಗೆ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ೨೦,೨೮,೦೯೨ ಆಗಿದೆ.

**ಮಕ್ಕಳ ಪಾಲನೆ ಪೋಷಣೆ ಅಗತ್ಯವಿರುವ ಮಕ್ಕಳ ಕಲ್ಯಾಣ ಯೋಜನೆ (ನಿರ್ಗತಿಕ ಮಕ್ಕಳ ಕುಟೀರ):** ಸದರಿ ಯೋಜನೆಯಡಿ ಕನಿಷ್ಟ ಮೂರು ವರ್ಷ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಗೆ ೨೫ ಮಕ್ಕಳ ಒಂದು ಘಟಕದಂತೆ ಪಾಲನೆ ಹಾಗೂ ಪೋಷಣೆಗೆ ನಿರ್ಗತಿಕ ಮಕ್ಕಳ ಕುಟೀರವನ್ನು ತೆರೆಯಲು ಅನುಮತಿಯೊಂದಿಗೆ ಧನ ಸಹಾಯವನ್ನೂ ನೀಡಲಾಗುತ್ತದೆ. ಈ ಯೋಜನೆಯ ರೂಪುರೇಷೆಗಳ ಪ್ರಕಾರ ಅನುಮೋದಿತ ವೆಚ್ಚದ ಶೇ.೯೦ರಷ್ಟನ್ನು ರಾಜ್ಯ ಸರ್ಕಾರದಿಂದ ಅನುದಾನದ ರೂಪದಲ್ಲಿ ನೀಡಲಾಗುತ್ತಿದೆ. ಉಳದ ಶೇ.೧೦ರಷ್ಟನ್ನು ಸಂಸ್ಥೆಯು ಭರಿಸಬೇಕಾಗುವುದು. ಈ ಯೋಜನೆಯಡಿ ಪ್ರತಿ ಮಗುವಿನ ನಿರ್ವಹಣೆಗಾಗಿ ಮಾಸಿಕ ೪೦೦ ರೂಪಾಯಿಗಳ (ಅನುಮೋದಿತ ಸಿಬ್ಬಂದಿಯ ವೇತನ ಸೇರಿ) ಅನುದಾನವನ್ನು ಮತ್ತು ಪ್ರತಿ ಮಗುವಿಗೆ ಮಾಸಿಕ ರೂ.೫೦ ರಂತೆ ಬಾಡಿಗೆಯನ್ನು ಕೊಡಲಾಗುತ್ತದೆ. ಈ ಕಾರ್ಯಕ್ರಮದಡಿ ೭೨ ಕುಟೀರಗಳು ಯೋಜನೆಯಡಿ ಹಾಗೂ ೨೫೭ ಕುಟೀರಗಳು ಯೋಜನೇತರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಹಾಜರಾತಿ ಶಿಷ್ಯ ವೇತನ:** ಗ್ರಾಮೀಣ ಹೆಣ್ಣು ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರೆಸಲು ಉತ್ತೇಜಿಸಲು ಹಾಗೂ ಅವರ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಲು ಅವರಿಗೆ ಶಿಷ್ಯವೇತನ ನೀಡಲಾಗುತ್ತಿದೆ. ಐದನೇ ತರಗತಿಯಿಂದ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಹೆಣ್ಣುಮಕ್ಕಳಗೆ ತಿಂಗಳಗೆ ರೂ. ೨೫ ಹಾಗೂ ಎಂಟನೇ ತರಗತಿಯಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಹೆಣ್ಣುಮಕ್ಕಳಗೆ ತಿಂಗಳಗೆ ರೂ. ೫೦ ರಂತೆ ವರ್ಷದಲ್ಲಿ ೧೦ ತಿಂಗಳು ಶಿಷ್ಯವೇತನವನ್ನು ನೀಡಲಾಗುತ್ತಿದೆ.

ಶಿಷ್ಯವೇತನವನ್ನು ಹಿಂದಿನ ವರ್ಷದ ತರಗತಿಯಲ್ಲಿ ಕನಿಷ್ಠ ಶೇಕಡಾ ೮೦ರಷ್ಟು ಹಾಜರಾತಿ ಇದ್ದು, ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದವರಿಗೆ ನೀಡುವಂತೆ ಯೋಜಿಸಲಾಗಿದೆ. ಸದರಿ ಯೋಜನೆಯಡಿ ಸೌಲಭ್ಯ ಪಡೆಯುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನ ರೂ. ೧೦,೦೦೦ಗಳಗೆ ಮೀರಬಾರದು ಮತ್ತು ಬಾಲಕಿಯು ೨೦,೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮದ ವಾಸಿಯಾಗಿರಬೇಕು. ಈ ಯೋಜನೆಯನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಸಲಾಗುತ್ತಿದೆ.

**ಉದ್ಯೋಗಸ್ಥ ಮಹಿಳೆಯರ ಮಕ್ಕಳಗೆ ಶಿಶುಪಾಲನಾ ಕೇಂದ್ರಗಳು:** ಈ ಯೋಜನೆಯಡಿ ಇಲಾಖೆಯು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಹಾಗೂ ಇನ್ನಿತರ ವೃತ್ತಿನಿರತ ಮಹಿಳೆಯರ ಮಕ್ಕಳಗಾಗಿ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಜಿಲ್ಲಾ ಪಂಚಾಯತ್‌ಗಳಿಂದ ಮಹಿಳಾ ಮಂಡಳಗಳಗೆ ಮತ್ತು ಸ್ವಯಂಸೇವಾ ಸಂಸ್ಥೆಗಳಗೆ ಅನುದಾನವನ್ನು ನೀಡಲಾಗುತ್ತಿದೆ. ಈ ಯೋಜನೆಯು ಮೂರು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಕ್ಕಳಗೆ ದಿನದ ವೇಳೆಯಲ್ಲಿ ಸೇವೆಯನ್ನು ಒದಗಿಸುತ್ತದೆ. ಈ ಸೇವೆಗಳಲ್ಲಿ ಆರೋಗ್ಯ ಸೇವೆ, ಪೂರಕ ಪೌಷ್ಟಿಕ ಆಹಾರ, ಮಕ್ಕಳಗೆ ಮಲಗಲು ವ್ಯವಸ್ಥೆ, ಚುಚ್ಚುಮದ್ದು, ಆಟಿಕೆಗಳು ಹಾಗೂ ಮನರಂಜನೆ ಮುಂತಾದವುಗಳನ್ನು ಒಳಗೊಂಡಿರುತ್ತದೆ.

**ಬಾಲ್ಯ ವಿವಾಹ ನಿಷೇಧ ಕಾಯ್ದೆ, ೨೦೦೬ (ಕೇಂದ್ರ ಕಾಯ್ದೆ) ೨೦೦೬:** ಈ ಕಾಯ್ದೆಯನ್ನು ಕರ್ನಾಟಕದಲ್ಲಿ ದಿ ೦೧-೧೦-೨೦೦೭ರಂದು ಜಾರಿಗೆ ತರಲಾಗಿದೆ. ರಾಜ್ಯ ಸರ್ಕಾರದ ನಿಯಮಗಳನ್ನು ದಿ:೦೬-೦೨-೨೦೦೮ರ ಸರ್ಕಾರದ ಅಧಿಸೂಚನೆಯನ್ವಯ ಹೊರಡಿಸಲಾಗಿದೆ. ಈ ಕಾಯ್ದೆಯ ಬಗ್ಗೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಹಾಗೂ ಉಪಗ್ರಹ ಆಧಾರಿತ ಕಾರ್ಯಕ್ರಮದ ಮೂಲಕ ಜನಸಾಮಾನ್ಯರಿಗೆ ಅರಿವನ್ನು ಮೂಡಿಸಲಾಗಿದೆ. ಈ ಕಾರ್ಯಕ್ರಮದಡಿ ೨೦೧೬ ಮಾರ್ಚ್ ವೇಳೆಗೆ ೬೩೫ ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. ಈ ಸಾಲಿನಲ್ಲಿ ರೂ.೯೯.೯೮ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯಪ್ರಶಸ್ತಿಗಳು:** ಕರ್ನಾಟಕ ಸರ್ಕಾರವು ೨೦೦೬-೦೭ನೇ ಸಾಲಿನಿಂದ ೬ರಿಂದ ೧೫ ವರ್ಷದ ವಯೋಮಿತಿಯೊಳಗಿನ ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿ ಇತರರ ಪ್ರಾಣ ರಕ್ಷಣೆ ಮಾಡಿದ ಪ್ರಸಂಗಗಳಲ್ಲಿ ನೆರವಾದ ಪ್ರತಿ ಜಿಲ್ಲೆಯ ಇಬ್ಬರು ಬಾಲಕರಿಗೆ ಹೊಯ್ಸಳ ಹಾಗೂ ಇಬ್ಬರು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡುವ ಹೊಸ ಯೋಜನೆಗೆ ಮಂಜೂರಾತಿ ನೀಡಿರುತ್ತದೆ. ಈ ಪ್ರಶಸ್ತಿಯು ರೂ.೧೦,೦೦೦ಗಳ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಈ ಪ್ರಶಸ್ತಿಗಾಗಿ ಆಯ್ಕೆಯಾದ ಮಕ್ಕಳಿಗೆ ಶಾಲಾ ಶಿಕ್ಷಣ ಪೂರೈಸುವವರೆಗೂ ವಿದ್ಯಾಭ್ಯಾಸಕ್ಕಾಗಿ ಪ್ರತಿ ವರ್ಷ ರೂ.೨,೦೦೦ ಶಿಷ್ಯ ವೇತನವನ್ನು ನೀಡಲಾಗುವುದು.

**ಧೈರ್ಯ, ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮ:** ಅಂತರ ರಾಷ್ಟ್ರೀಯ ಮಕ್ಕಳ ವರ್ಷದ ಅಂಗವಾಗಿ ಭಾರತ ಸರ್ಕಾರವು ೧೯೭೯ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಪ್ರಶಸ್ತಿಗೆ ಅನುಗುಣವಾಗಿ ರಾಜ್ಯ ಸರ್ಕಾರವು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತವಾಗಿರುವ ಕನಿಷ್ಠ ಐದು ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದ ಎರಡು ಸಂಸ್ಥೆಗಳನ್ನು ಹಾಗೂ ಇಬ್ಬರು ವ್ಯಕ್ತಿಗಳನ್ನು ಸನ್ಮಾನಿಸಲು ರಾಜ್ಯ ಪ್ರಶಸ್ತಿಯನ್ನು ಜಾರಿಗೆ ತಂದಿರುತ್ತದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ನವೆಂಬರ್-೧೪ ರಂದು ಆಚರಿಸಲಾಗುವ ವಿಶ್ವ ಮಕ್ಕಳ ದಿನಾಚರಣೆಯಂದು ನೀಡಲಾಗುವುದು. ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿದ ಎರಡು ಸಂಸ್ಥೆಗಳಿಗೆ ಪ್ರತಿ ಸಂಸ್ಥೆಗೆ ರೂ. ಒಂದು ಲಕ್ಷ ನಗದು ಹಾಗೂ ಇಬ್ಬರು ವ್ಯಕ್ತಿಗಳಿಗೆ ಪ್ರತಿ ವ್ಯಕ್ತಿಗೆ ರೂ.೨೫,೦೦೦ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ೨೦೧೫-೧೬ನೇ ಸಾಲಿನಿಂದ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಪ್ರಶಸ್ತಿಗಳ ಸಂಖ್ಯೆಯನ್ನು ೨ ರಿಂದ ೪ ಕ್ಕೆ ಹೆಚ್ಚಿಸಲಾಗಿದೆ.

**ಬೇಟಿ ಬಚಾವೊ, ಬೇಟಿ ಪಡಾವೊ:** ಈ ಕಾರ್ಯಕ್ರಮವನ್ನು ಜನವರಿ ೨೨, ೨೦೧೫ರಂದು ರಾಷ್ಟ್ರಮಟ್ಟದಲ್ಲಿ ಜಾರಿಗೆ ತರಲಾಯಿತು. ಇದರ ಉದ್ದೇಶ ಮಕ್ಕಳ ಲಿಂಗ ಅನುಪಾತವನ್ನು ಉತ್ತಮೀಕರಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದರಲ್ಲಿ ಲಿಂಗಾನುಪಾತವನ್ನು ಸಮತೋಲನದಲ್ಲಿರುವಂತೆ ನೋಡಿಕೊಳ್ಳುವುದು, ಹೆಣ್ಣು ಶಿಶುವನ್ನು ರಕ್ಷಿಸುವುದು, ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದಾಗಿದೆ.

**ಮಕ್ಕಳ ಸಹಾಯವಾಣಿ ಸೇವೆ:** ಇದು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ಪ್ರಾರಂಭಿಸಿದ ಯೋಜನೆಯಾಗಿದೆ. ಈ ಸೇವೆಯಡಿ ಯಾವುದೇ ತೊಂದರೆಗೊಳಗಾದ ಮಕ್ಕಳು ತಮ್ಮ ಸಮಸ್ಯೆಯನ್ನು ಉಚಿತ ದೂರವಾಣಿ ಸಂಖ್ಯೆ: ೧೦೯೮ಕ್ಕೆ ಕರೆಮಾಡಿ ನೆರವು ಪಡೆಯಬಹುದಾಗಿದೆ. ರಾಜ್ಯದಲ್ಲಿ ೨೪ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿಗಳು ಕಾರ್ಯನಿರ್ವಹಿಸುತ್ತಿವೆ.

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ೧೯೮೭ರಲ್ಲಿ ಕಂಪನಿಯ ಅಧಿನಿಯಮ ೧೯೫೬ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಸಮಾಜದ ದುರ್ಬಲ ಹಾಗೂ ಶೋಷಿತ ಮತ್ತು ಅಸಹಾಯಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಸ್ಥಾಪಿಸಲ್ಪಟ್ಟಿರುವ ರಾಜ್ಯದ ಮಹಿಳೆಯರಿಗೆ ನೆರವು ನೀಡುವ ಏಕೈಕ ಸಂಸ್ಥೆಯಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಹಾಗೂ ನಗರದ ಕೆಲವು ಪ್ರದೇಶಗಳಲ್ಲಿ ದುರ್ಬಲ ವರ್ಗದ ಮಹಿಳೆಯರು ಅನಕ್ಷರಸ್ಥರು, ಹಿಂದುಳಿದ ಮಹಿಳೆಯರು ವಾಸಿಸುತ್ತಿದ್ದು, ಇವರುಗಳ ಆರ್ಥಿಕ ಸಬಲೀಕರಣಕ್ಕೆ ನಿಗಮವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಹಿಳೆಯರ ಸಬಲೀಕರಣದಿಂದಲೇ ರಾಜ್ಯದ ಹಾಗೂ ರಾಷ್ಟ್ರದ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

**ನಿಗಮದ ಮುಖ್ಯ ಉದ್ದೇಶಗಳು:** ಮಹಿಳಾ ಗುಂಪುಗಳು ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಮಹಿಳೆಯರಿಗೆ ಸ್ಥಿರವಾದ ಆದಾಯ ತರುವ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಒಂಟಿ ಮಹಿಳೆಯರಿಗೆ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ನೆರವು ಪಡೆಯಲು ಅರ್ಹರಾದ ಕುಟುಂಬದಲ್ಲಿನ ಮಹಿಳೆಯರಿಗೆ ಆದ್ಯತೆ ನೀಡುವುದು. ಮಹಿಳಾ ಉದ್ಯಮಿಗಳನ್ನು ಗುರುತಿಸುವುದು. ಕಾರ್ಯಸಾಧ್ಯವಾದ ಯೋಜನೆಗಳ ಪಟ್ಟಿ ತಯಾರಿಸುವುದು ಮತ್ತು ತಾಂತ್ರಿಕ ಸಲಹಾ ಸೇವೆಯನ್ನು ಒದಗಿಸುವುದು. ಮೂಲ ಬಂಡವಾಳ ಧನದ ನೆರವು ಯೋಜನೆ ಮೂಲಕ ಬ್ಯಾಂಕುಗಳು ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ದೊರಕಿಸಿಕೊಳ್ಳಲು ಅನುಕೂಲ ಕಲ್ಪಿಸುವುದು. ರಾಜ್ಯ ಮಟ್ಟದ ಮಾರಾಟ ಸಂಸ್ಥೆಗಳೊಂದಿಗೆ ಒಪ್ಪಂದ ವ್ಯವಸ್ಥೆ ಮಾಡಿಕೊಳ್ಳುವ ಮೂಲಕ ಮಾರಾಟವನ್ನು ಅಭಿವೃದ್ಧಿಪಡಿಸುವುದು. ಮಹಿಳಾ ಸಹಕಾರ ಸಂಘಗಳು ಮತ್ತು ಇತರ ಸಂಘ ಸಂಸ್ಥೆಗಳಿಗೆ ಉತ್ತೇಜನ ನೀಡುವುದು ಮತ್ತು ಅವುಗಳನ್ನು ಬಲಪಡಿಸುವುದು.

**ನಿಗಮವು ಅನುಷ್ಠಾನಗೊಳಸುತ್ತಿರುವ ಯೋಜನೆಗಳು:** ೧) ದೇವದಾಸಿ ಪುನರ್ವಸತಿ ಯೋಜನೆ ೨)ಉದ್ಯೋಗಿನಿ ಯೋಜನೆ ೩)ಮಹಿಳೆಯರಿಗಾಗಿ ತರಬೇತಿ ಯೋಜನೆ ೪)ಮಾರುಕಟ್ಟೆ ನೆರವು ಯೋಜನೆ ೫)ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ ೬)ದೇವದಾಸಿಯರಿಗೆ ಮಾಸಾಶನ ೭)ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ ಯೋಜನೆ ೮) ಕಿರುಸಾಲದ ಯೋಜನೆ ೯) ಲೈಂಗಿಕ ಕಾರ್ಯಕರ್ತೆಯರಿಗೆ ಪುನರ್ವಸತಿ ಯೋಜನೆಗಳಾಗಿವೆ.

ಮಹಿಳಾ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳನ್ನು ಮೇಲಿನಂತೆ ಅನುಷ್ಠಾನಗೊಳಸುತ್ತಿದ್ದು ೨೦೧೪-೧೫ನೇ ಸಾಲಿನಲ್ಲಿ ರೂ.೬೨೮೩ ಲಕ್ಷಗಳನ್ನು ಖರ್ಚು ಮಾಡಿ ೬೧,೯೨೨ ಮಹಿಳೆ ಮತ್ತು ದುರ್ಬಲ ವರ್ಗದವರಿಗೆ ವಿವಿಧ ಸೇವಾ ಸೌಲಭ್ಯಗಳನ್ನು ಒದಗಿಸಿದೆ.

## ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸುವ ಮತ್ತು ಅವರ ಪ್ರಗತಿ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸುವ ಸಂವಿಧಾನಿಕ ಗುರಿಗೆ ಅನುಗುಣವಾಗಿ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ ೧೯೯೫ರ ಅಡಿಯಲ್ಲಿ ದಿ ೨೬/೫/೧೯೯೫ರಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗವನ್ನು

ರಚಿಸಿತು. ಇದು ಶಾಸನಬದ್ಧ ಆಯೋಗವಾಗಿದ್ದು ಇದು ದಿ ೬/೮/೧೯೯೬ರಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.

**ಆಯೋಗದ ಅಧಿಕಾರಗಳು:** ಆಯೋಗವು ಈ ಅಧಿನಿಯಮದ ಉದ್ದೇಶಗಳಿಗೆ ಯಾವುದೇ ವಿಷಯವನ್ನು ತನಿಖೆ ಮಾಡುವಾಗ ಮತ್ತು ನಿರ್ದಿಷ್ಟವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯವು ೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ (೧೯೦೮ರ ಕೇಂದ್ರ ಅಧಿನಿಯಮ ೫) ಹೊಂದಿರುವ ಈ ಕೆಳಗಿನ ಎಲ್ಲ ಅಧಿಕಾರಗಳನ್ನು ಹೊಂದಿದೆ.

೧. ಕರ್ನಾಟಕದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು.

೨. ಯಾವುದೇ ದಾಸ್ತಾವೇಜನ್ನು ಕಂಡುಹಿಡಿಯುವಂತೆ ಮತ್ತು ಹಾಜರುಪಡಿಸುವಂತೆ ಅವಶ್ಯಪಡಿಸುವುದು.

೩. ಅಫಿಡವಿಟ್‌ನ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು.

೪. ಯಾವುದೇ ನ್ಯಾಯಾಲಯ ಅಥವಾ ಸರ್ಕಾರಿ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಒದಗಿಸುವಂತೆ ಅಗತ್ಯಪಡಿಸುವುದು.

೫. ಸಾಕ್ಷಿಗಳು ಮತ್ತು ದಾಸ್ತಾವೇಜುಗಳ ವಿಚಾರಣೆಗಾಗಿ ಕಮೀಷನ್‌ಗಳನ್ನು ಹೊರಡಿಸುವುದು ಮತ್ತು ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

**ಕಾರ್ಯ ಚಟುವಟಿಕೆಗಳು:** ೧) ಕೌಟುಂಬಿಕ ನ್ಯಾಯಾಲಯ ಗಳಲ್ಲಿ ಮಹಿಳಾ ಸಹಾಯ ವೇದಿಕೆ ೨) ಪಾರಿವಾರಿಕ್ ಲೋಕ್ ಅದಾಲತ್ ೩) ಕಾನೂನು ಅರಿವು ಕಾರ್ಯಕ್ರಮಗಳು ೪) ಸುರಕ್ಷಾ ಯೋಜನೆಯಡಿ ಆಸಿಡ್ ಹಾಗೂ ದೌರ್ಜನ್ಯದಿಂದ ಸುಟ್ಟಗಾಯಕ್ಕೆ ಒಳಗಾದ ಬಡ ಮಹಿಳೆಯರಿಗೆ ಧನ ಸಹಾಯ ೫)ಮಾನ್ಯ ಸರ್ವೋಚ್ಛ ನ್ಯಾಯಾಲಯದ ವಿಶಾಖಾ ತೀರ್ಪಿನ ಅನುಸಾರ ಲೈಂಗಿಕ ಕಿರುಕುಳ ನಿವಾರಣೆಗಾಗಿ ದೂರು ಸಮಿತಿಗಳ ರಚನೆ ಹಾಗೂ ಮೇಲ್ವಿಚಾರಣೆ ೬) ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆ ತಂತ್ರಜ್ಞಾನ (ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಅಧಿನಿಯಮ, ೧೯೯೪ರ ಅನುಷ್ಠಾನದಲ್ಲಿ ಸಕ್ಷಮ ಪ್ರಾಧಿಕಾರದ ಪಾತ್ರ ೭) ಕೌಟುಂಬಿಕ ಸಲಹಾ ಕೇಂದ್ರ ೮)ಕರ್ನಾಟಕ ರಾಜ್ಯ ಮಹಿಳಾ ಆಯೋಗವು ವಿವಿಧ ಸಮಸ್ಯೆಗಳ ದೂರುಗಳನ್ನು ಸ್ವೀಕರಿಸಲಾಗುತ್ತಿದೆ. ಅವುಗಳು: ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು, ರಕ್ಷಣೆ, ಆಸ್ತಿ ವಿವಾದ, ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ಕೆಲಸದ ಸ್ಥಳದಲ್ಲಿ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಮನೆ ಬಾಡಿಗೆ ಸಮಸ್ಯೆ, ಮಕ್ಕಳ ಅಭಿರಕ್ಷೆ ಮುಂತಾದವು.

## ಬಾಲ ಭವನ ಸೊಸೈಟಿ

ಜವಾಹರ ಬಾಲ ಭವನವು ೧೯೬೭ರಿಂದ ಕಬ್ಬನ್ ಉದ್ಯಾನವನದ ಒಂದು ಭಾಗದಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಾಲ ಭವನ ಸೊಸೈಟಿ ಕಾರ್ಯ ವ್ಯಾಪ್ತಿಯು ರಾಜ್ಯಾದ್ಯಂತ ಇರುತ್ತದೆ. ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲೂಕು ಬಾಲ ಭವನಗಳಿದ್ದು, ಇವುಗಳ ಅಭಿವೃದ್ಧಿ ಹಾಗೂ ಮಕ್ಕಳ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಬಾಲ ಭವನ ಸೊಸೈಟಿ ಆಡಳಿತ ನಿರ್ವಹಣೆಗಾಗಿ ವ್ಯವಸ್ಥಾಪಕ ಮಂಡಳಿಯು ಅಧ್ಯಕ್ಷರು ಹಾಗೂ ಅಧಿಕಾರೇತರ ಆರು ಸದಸ್ಯರು, ಗ್ರೂಪ್–ಎ ದರ್ಜೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಈ ಸೊಸೈಟಿಯ ಕಾರ್ಯಕ್ರಮಗಳು:** ೧)ಮಕ್ಕಳ ಬೇಸಿಗೆ ಶಿಬಿರ ೨)ಮಕ್ಕಳ ಕಲಾಶ್ರೀ ಆಯ್ಕೆ ಶಿಬಿರ ೩)ರಾಷ್ಟ್ರೀಯ ಹಬ್ಬಗಳ ಆಚರಣೆ ೪) ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮ ಯೋಜನೆ ೫)ಮಕ್ಕಳ ಹುಟ್ಟು ಹಬ್ಬದ ಆಚರಣೆ ೬)ಮಕ್ಕಳ ಗ್ರಂಥಾಲಯ ೭)ವಿಜಯರಂಗ ಮಂದಿರ ೮)ಬಾಲ ವೇದಿಕೆ ೯)ಚಟುವಟಿಕೆ ಕುಟೀರ ೧೦)ಮಕ್ಕಳ ಚಲನಚಿತ್ರ ೧೧)ಸರ್ವ ಶಿಕ್ಷಣ ಅಭಿಯಾನ ೧೨) ಸೈನ್ಸ್ ಪಾರ್ಕ್ ೧೩)ಸಾಂಪ್ರದಾಯಕ ಕಲೆ ೧೪)ದಸರಾ ಹಾಗೂ ಬೆಳ್ಳಿಹಬ್ಬ ೧೫)ಪರಿಸರ ದಿನಾಚರಣೆ ೧೬)ಮನೋರಂಜನೆಗಾಗಿ ಆಟಿಕೆಗಳ ಸೌಲಭ್ಯ.

## ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು

ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ೧೯೫೩ರಲ್ಲಿ ಸ್ಥಾಪನೆಯಾಯಿತು. ಇದರ ಮೂಲ ಉದ್ದೇಶ ಮಹಿಳೆಯರು, ಮಕ್ಕಳು ಮತ್ತು ದುರ್ಬಲ ವರ್ಗದವರಿಗಾಗಿ ಶ್ರಮಿಸುವುದು.

ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೊಂದು ರಾಜ್ಯದಲ್ಲೂ ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳನ್ನು ಸ್ಥಾಪಿಸಲ್ಪಟ್ಟಿತು. ಅದರಂತೆ ಅಕ್ಟೋಬರ್ ೧೯೫೪ರಲ್ಲಿ ಕರ್ನಾಟಕ ರಾಜ್ಯ ಸಮಾಜ ಮಂಡಳಿಯು ಸ್ಥಾಪಿಸಲ್ಪಟ್ಟಿತು.

**ಮಂಡಳಿಯ ಕಾರ್ಯಕ್ರಮಗಳು:** ೧)ಶ್ರೀ. ರಾಜೀವ ಗಾಂಧಿ ರಾಷ್ಟ್ರೀಯ ಶಿಶು ಪಾಲನಾ ಕೇಂದ್ರ ೨)ವಯಸ್ಕ ಮಹಿಳೆಯರಿಗೆ ಸಂಕ್ಷಿಪ್ತ ಶಿಕ್ಷಣ ೩)ಗ್ರಾಮೀಣ ಮಹಿಳೆಯರಿಗಾಗಿ ಜಾಗೃತಿ ಮೂಡಿಸುವ ಶಿಬಿರ ೪)ಕೌಟುಂಬಿಕ ಸಲಹಾ ಕೇಂದ್ರಗಳು ೫) ಅಲ್ಪಾವಧಿ ವಸತಿ ಗೃಹ ೬)ಮಹಿಳಾ ಮಂಡಳಿ, ೭)ಪೂರ್ವಭಾವಿ ತರಬೇತಿ ಕಾರ್ಯಕ್ರಮ, ೮)ಕೌಟುಂಬಿಕ ಸಲಹಾ ಕೇಂದ್ರದ ಸಲಹೆಗಾರರಿಗೆ ಪೂರ್ವಭಾವಿ ತರಬೇತಿ ಕಾರ್ಯಕ್ರಮ, ೯)ಸಿಬ್ಬಂದಿ ವರ್ಗಕ್ಕೆ ಕಂಪ್ಯೂಟರ್ ತರಬೇತಿ ನೀಡುವುದಾಗಿದೆ.

## ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಕರ್ನಾಟಕ ಸರ್ಕಾರವು ಜುಲೈ ೨೦೦೯ರಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸಿತು(KSCPCR). ಇದನ್ನು ಭಾರತ ಸಂವಿಧಾನ ಮತ್ತು ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ೧೯೮೯ರಲ್ಲಿ ಸ್ಪಷ್ಟಪಡಿಸಿರುವ ಮಕ್ಕಳ

ಹಕ್ಕುಗಳನ್ನು ರಕ್ಷಿಸಿ ಬೆಂಬಲ ನೀಡುವ ಉದ್ದೇಶದಿಂದ ರಚಿಸಲಾಗಿದೆ. ಇದೊಂದು ಸ್ವತಂತ್ರ್ಯ ಶಾಸನಬದ್ಧ ಅಂಗಸಂಸ್ಥೆಯಾಗಿದೆ. ಭಾರತದ ಸಂವಿಧಾನ ದೇಶದ ಎಲ್ಲ ನಾಗರಿಕರ ಹಕ್ಕುಗಳನ್ನು ಎತ್ತಿ ಹಿಡಿಯುವಂತೆಯೇ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿದಿದೆ. ಅವುಗಳಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಘನತೆಯ ನಿಯಮದಂತೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ಚಿಂತನೆ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಮತ್ತು ಧಾರ್ಮಿಕ ಸ್ವಾತಂತ್ರ್ಯ, ಪ್ರತಿ ವ್ಯಕ್ತಿಗೂ ಗೌರವ ಮತ್ತು ದೇಶದ ಏಕತೆ ಹಾಗೂ ಸಮಗ್ರತೆ ಭರವಸೆ ನೀಡುವ ಭ್ರಾತೃತ್ವ, ಸಮಾನತೆ ಹಕ್ಕು, ತಾರತಮ್ಯಕ್ಕೆ ನಿಷೇಧ, ಜೀವನ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ, ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು, ಬಾಲ ಕಾರ್ಮಿಕ ಪದ್ಧತಿ ನಿಷೇಧ, ಆರಂಭಿಕ ಬಾಲ್ಯದಲ್ಲಿ ಕಾಳಜಿ ಮತ್ತು ಶೈಕ್ಷಣಿಕ ಅವಕಾಶ ಒದಗಿಸುವುದು ಮುಂತಾದವುಗಳು.

**ಮಕ್ಕಳು ಬದುಕುವ ಹಕ್ಕುಗಳು –** ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪಡೆಯುವ ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.

**ಮಕ್ಕಳ ರಕ್ಷಣೆ ಹಕ್ಕುಗಳು –** ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ, ತುರ್ತು ಸಂದರ್ಭಗಳಲ್ಲಿ ಮತ್ತು ಸಶಸ್ತ್ರ ಸಂಘರ್ಷಗಳಾದಾಗ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ಒದಗಿಸುವುದು.

**ಮಕ್ಕಳ ವಿಕಾಸ ಹೊಂದುವ ಹಕ್ಕುಗಳು –** ಎಲ್ಲಾ ಮಕ್ಕಳಿಗೆ ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣ, ಶೈಶವದಲ್ಲಿ ಬೆಳೆಯಲು ಅವಕಾಶ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ನೀಡುವುದು.

**ಮಕ್ಕಳ ಭಾಗವಹಿಸುವ ಹಕ್ಕುಗಳು –**ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ ಮಾಹಿತಿ ಲಭ್ಯತೆ, ಚಿಂತನೆ ಹಾಗೂ ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವ ಮತ್ತು ಧಾರ್ಮಿಕ ನಂಬುಗೆಯ ಹಕ್ಕುಗಳು, ಮುಖ್ಯವಾಗಿ ಗುರುತಿಸಲಾಗುವ ಮಕ್ಕಳ ಹಕ್ಕುಗಳು.

**ಆಯೋಗದ ಪ್ರಕಾರ್ಯಗಳು:** ಈ ಆಯೋಗವು ಕರ್ನಾಟಕ ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುತ್ತದೆ. ಇದರಲ್ಲಿ ಒಬ್ಬ ಅಧ್ಯಕ್ಷರು, ಆರು ಸದಸ್ಯರಿರುತ್ತಾರೆ. ಇಬ್ಬರಾದರೂ ಮಹಿಳೆಯರಿರುವುದು ಕಡ್ಡಾಯ. ಮಕ್ಕಳ ಕಲ್ಯಾಣಕ್ಕಾಗಿ ಅಭೂತಪೂರ್ವ ಕೆಲಸ ಮಾಡಿದವರು, ಮಕ್ಕಳ ಹಿತಾಸಕ್ತಿಗಾಗಿ ಕೆಲಸ ಮಾಡುವ ಹಂಬಲ ಉಳ್ಳವರಾಗಿರಬೇಕು. ಅಧಿಕಾರ ಸ್ವೀಕರಿಸಿದ ದಿನದಿಂದ ಮೂರು ವರ್ಷ ಅವಧಿ ಹೊಂದಿದೆ.

೧) ಮಕ್ಕಳ ರಕ್ಷಣೆಗಾಗಿ ಇರುವ ಕಾಯಿದೆ, ಕಾರ್ಯಕ್ರಮಗಳನ್ನು ಪರಿಶೀಲಿಸಿ ಸಮರ್ಪಕ ಜಾರಿಗಾಗಿ ಶಿಫಾರಸ್ಸು ಮಾಡುವುದು.

೨) ಮಕ್ಕಳ ಹಕ್ಕು ಉಲ್ಲಂಘನೆ ಪ್ರಕರಣಗಳನ್ನು ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುವುದು.

೩) ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ, ಅಸಭ್ಯವರ್ತನೆ, ದುರ್ನಡತೆ ತೋರುವವರ ವಿರುದ್ಧ ವಿಚಾರಣೆ ಮಾಡಿ ಸೂಕ್ತ ಪರಿಹಾರ ಕ್ರಮಕ್ಕಾಗಿ ಸರ್ಕಾರಕ್ಕೆ ವರದಿ ಮಾಡುವುದು.

೪) ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಂಡು ಅವುಗಳ ಫಲಶ್ರುತಿಯನ್ನು ಅಳವಡಿಸುವುದು. ಯಾವುದೇ ರೀತಿಯಲ್ಲಿಯೂ ಮಕ್ಕಳ ಹಕ್ಕು ಉಲ್ಲಂಘನೆಯಾಗದಂತೆ ಎಲ್ಲರಲ್ಲಿಯೂ ಅರಿವು ಮೂಡಿಸುವುದು.

೫) ಮಕ್ಕಳ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಕ್ಕು ಕಾಯಿದೆ ೨೦೦೯ನ್ನು ಜಾರಿಗೊಳಿಸಲು ಕ್ರಮವಹಿಸುವುದು. ಇವೇ ಮೊದಲಾದ ಕರ್ತವ್ಯಗಳನ್ನು ಈ ಆಯೋಗ ಹೊಂದಿದೆ.

೬) ರಾಜ್ಯದಲ್ಲಿ ಎಲ್ಲೇ ಆಗಲಿ ಯಾವುದೇ ರೀತಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾದರೆ, ಅವರ ವಿರುದ್ಧ ಮಕ್ಕಳು ಅಥವಾ ಆ ಮಕ್ಕಳ ಪರವಾಗಿ ಯಾರೇ ಆದರೂ ಯಾವುದೇ ಜಾತಿ, ಮತ, ಧರ್ಮ, ಲಿಂಗ, ಆರ್ಥಿಕ ಸ್ಥಾನಮಾನ ಇತ್ಯಾದಿಗಳ ಬೇಧಭಾವವಿಲ್ಲದೇ ಈ ಆಯೋಗಕ್ಕೆ ದೂರನ್ನು ಸಲ್ಲಿಸಬಹುದು.

ಈ ಆಯೋಗದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ೨೦೧೫ರ ಮಾರ್ಚ್ ಅಂತ್ಯಕ್ಕೆ ಒಟ್ಟು ರೂ. ೧೭೫.೨೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

### ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ವಿಕಲಚೇತನ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯು ೧೯೮೮ರಿಂದ ಪ್ರತ್ಯೇಕ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇಲಾಖೆಯ ಮುಖ್ಯಸ್ಥರಾಗಿ ನಿರ್ದೇಶಕರಿದ್ದು, ಅವರಿಗೆ ಸಹಾಯಕರಾಗಿ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಪತ್ರಾಂಕಿತ ಕಚೇರಿ ವ್ಯವಸ್ಥಾಪಕರು ಇರುತ್ತಾರೆ. ದಿ: ೦೧-೦೪-೨೦೦೬ರಿಂದ ಜಿಲ್ಲಾ ಪುನರ್‌ವಸತಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ೨೧ ಸಿಬ್ಬಂದಿಗಳು ಹಾಗೂ ದಿ: ೦೧-೦೧-೦೮ರಿಂದ ಇಲಾಖೆಗೆ ೭೨ ಸಿಬ್ಬಂದಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಶಾಶ್ವತ ವರ್ಗಾವಣೆಯಾಗಿ ವಿಲೀನಗೊಂಡಿರುತ್ತಾರೆ.

**ಇಲಾಖೆಯ ಮುಖ್ಯ ಉದ್ದೇಶಗಳು:**

೧. ವಿಕಲಚೇತನ ವಿದ್ಯಾರ್ಥಿಗಳಿಗೆ ಅವಶ್ಯಕತೆಯಿರುವ ಶಿಕ್ಷಣವನ್ನು ನೀಡುವುದು.

೨. ವಿಕಲಚೇತನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಹಾಗೂ ಸ್ವಯಂ ಉದ್ಯೋಗಗಳಿಗೆ ನೆರವಾಗಲು ಸರ್ಕಾರದಿಂದ ಹಾಗೂ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ಸಹಾಯ ನೀಡುವುದು.

೩. ವಿಕಲಚೇತನರು ಎಲ್ಲರಂತೆ ಓಡಾಡಲು ಅಡೆತಡೆ ರಹಿತ ವಾತಾವರಣ ಕಲ್ಪಿಸುವುದು. ಅಂಗವಿಕಲರ ಕುಂದು ಕೊರತೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವುದು.

೪. ವಿಕಲಚೇತನರ ಕುಂದುಕೊರತೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವುದು

೫. ವಿಕಲಚೇತನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು.

೭. ವಿಕಲಚೇತನರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳನ್ನು ಕಲ್ಪಿಸುವುದು.

೮. ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶೈಕ್ಷಣಿಕ ತರಬೇತಿ ಮತ್ತು ಉದ್ಯೋಗ ಸಾಮಾಜಿಕ ಭದ್ರತೆ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

೯. ವಿಕಲಚೇತನರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಳಿಸಿ ಮುಖ್ಯವಾಹಿನಿಗೆ ತರುವುದು.

೧೦. ಹಿರಿಯ ನಾಗರಿಕರ ಕೇಮಾಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

**ವಿಕಲಚೇತನ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳು:**

**ಎ) ಶೈಕ್ಷಣಿಕ**

**೧. ಶ್ರವಣ ದೋಷವುಳ್ಳ ಮಕ್ಕಳಗಾಗಿ ವಿಶೇಷ ವಸತಿಯುತ ಶಾಲೆಗಳು:** ಇಲಾಖೆಯಿಂದ ಶ್ರವಣದೋಷವುಳ್ಳ ಮಕ್ಕಳಗಾಗಿ ಮೈಸೂರು, ಕಲಬುರಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ ನಾಲ್ಕು ಕಿವುಡು ಮಕ್ಕಳ ಶಾಲೆಗಳು ನಡೆಯುತ್ತಿವೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾಗಿ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಬೆಳಗಾವಿಯಲ್ಲಿರುವ ಕಿವುಡ ಮಕ್ಕಳ ಶಾಲೆಯು ಹೆಣ್ಣು ಮಕ್ಕಳಿಗೆ ಇರುವ ಪ್ರತ್ಯೇಕ ಶಾಲೆಯಾಗಿರುತ್ತದೆ.

**೨. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:** ಇಲಾಖೆಯಿಂದ ನಾಲ್ಕು ಅಂಧ ಮಕ್ಕಳ ಶಾಲೆಗಳು ಕ್ರಮವಾಗಿ ಕಲಬುರಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಗಳಲ್ಲಿ ನಡೆಯುತ್ತಿವೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ದಾವಣಗೆರೆ ಯಲ್ಲಿರುವ ಶಾಲೆಯು ಹೆಣ್ಣು ಮಕ್ಕಳಿಗೆ ಇರುವ ಪ್ರತ್ಯೇಕ ಶಾಲೆಯಾಗಿರುತ್ತದೆ.

**೩. ಸರ್ಕಾರಿ ಅನುದಾನಿತ ವಿಶೇಷ ಶಾಲೆಗಳು:** ಅ) ರಾಜ್ಯದಲ್ಲಿ ಸುಮಾರು ೧೪೮ ಸ್ವಯಂ ಸೇವಾ ಸಂಸ್ಥೆಗಳು ಅಂಗವಿಕಲರಿಗಾಗಿ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಕೇಂದ್ರಗಳನ್ನು ನಡೆಸುತ್ತಿವೆ. ಆ) ಅಂಗವಿಕಲ ಮಕ್ಕಳ ವಿಶೇಷ ಕೇಂದ್ರೀಕೃತ ಶೈಕ್ಷಣಿಕ ಯೋಜನೆಯನ್ವಯ ವಸತಿಸಹಿತ ಪ್ರತಿ ಮಗುವಿಗೆ ಮಾಹೆಯಾನ ರೂ. ೫೦೦೦/– ರಂತೆ ಹಾಗೂ ವಸತಿರಹಿತ ಮಗುವಿಗೆ ಮಾಹೆಯಾನ ರೂ. ೪೦೦೦/– ರಂತೆ ವರ್ಷದಲ್ಲಿ ೧೦ ತಿಂಗಳ ಅವಧಿಗೆ ಅನ್ನದಾನವನ್ನು ನೀಡಲಾಗುತ್ತದೆ. ಮಾರ್ಚ್ ೨೦೧೫ರ ಅಂತ್ಯಕ್ಕೆ ರೂ. ೩೧೭೪.೧೧ ಲಕ್ಷ ವೆಚ್ಚ ಮಾಡಿದ್ದು, ಈ ಯೋಜನೆಯಡಿಯಲ್ಲಿ ೭೪೮೭ ಫಲಾನುಭವಿಗಳು ಪ್ರಯೋಜನವನ್ನು ಪಡೆದಿದ್ದಾರೆ.

**೪. ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:** ಈ ಕಾರ್ಯಕ್ರಮದಡಿ ಒಂದನೇ ತರಗತಿಯಿಂದ ವಿಶ್ವವಿದ್ಯಾಲಯದ ಮಟ್ಟದವರೆಗೆ ಓದುತ್ತಿರುವ ಅರ್ಹ ಅಂಗವಿಕಲರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ೨೦೧೫ರ ಮಾರ್ಚ್ ಅಂತ್ಯದ ವೇಳೆಗೆ ರೂ. ೫೦೬.೯೬ ಲಕ್ಷಗಳನ್ನು ವೆಚ್ಚಮಾಡಿದ್ದು, ಇದರ ಪ್ರಯೋಜನವನ್ನು ೨೫,೭೫೭ ವಿದ್ಯಾರ್ಥಿಗಳು ಪಡೆದಿರುತ್ತಾರೆ.

**೫. ಬ್ರೈಲ್ ಮುದ್ರಣಾಲಯ:** ಅಂಧ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಸರಬರಾಜು ಮಾಡಲಾಗುತ್ತಿದೆ. ಬ್ರೈಲ್ ಮುದ್ರಣಾಲಯವನ್ನು ೧೯೯೯–೨೦೦೦ನೇ ಸಾಲಿನಲ್ಲಿ ಗಣಕೀಕರಣಗೊಳಿಸಲಾಗಿದೆ. ೨೦೧೪–೧೫ನೇ ಸಾಲಿನಲ್ಲಿ ೧೮,೦೦೦ ಪುಸ್ತಕಗಳನ್ನು ಮುದ್ರಿಸಿ ಅಂಧ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.

**೬.ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:** ಎಸ್.ಎಸ್.ಎಲ್.ಸಿ. ನಂತರದ ಉನ್ನತ ಶಿಕ್ಷಣಗಳಿಗೆ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು ೨೦೧೩–೧೪ನೇ ಸಾಲಿನಿಂದ ಜಾರಿಗೆ ತಂದಿದೆ.ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ೨೦೧೪–೧೫ನೇ ಸಾಲಿನಲ್ಲಿ ರೂ. ೧೧೧.೭೮ ಲಕ್ಷಗಳನ್ನು ವೆಚ್ಚ ಮಾಡಿದ್ದು, ಇದರ ಲಾಭವನ್ನು ೧೭೦೩ ಫಲಾನುಭವಿಗಳು ಪಡೆದಿದ್ದಾರೆ.

**೭. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ:** ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ ೬೦ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ಯೋಜನೆ ಇದಾಗಿದೆ. ಯೋಜನೆಯನ್ನು ಬಿ.ಎಡ್, ಎಂ.ಎಡ್, ಮತ್ತು ಟಿ.ಸಿ.ಹೆಚ್ (ಡಿ.ಇ.ಡಿ) ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ಈ ಯೋಜನೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ರೂ. ೩೦೦೦/– ಪದವಿಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ರೂ.೫೦೦೦/– ಪದವಿ, ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೆ ರೂ.೮೦೦೦/– ಪದವಿ ನಂತರದ ಕೋರ್ಸ್ ವಿದ್ಯಾರ್ಥಿಗಳಿಗೆ ರೂ. ೧೦೦೦೦/– ಹಾಗೂ ಕೃಷಿ ಪದವಿ, ಎಂಜಿನಿರಿಂಗ್, ಎಂ.ಇಡಿ, ವೈದ್ಯಕೀಯ ಪದವಿ ವಿದ್ಯಾರ್ಥಿಗಳಿಗೆ ರೂ ೧೨೦೦೦/–ವನ್ನು ನಿಗದಿಪಡಿಸಿ ೦೮.೦೫.೨೦೧೪ರಲ್ಲಿ ಆದೇಶ ಹೊರಡಿಸಲಾಗಿದೆ.

**೮. ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:** ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಅಂಗವಿಕಲ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ಎರಡು ವಿಶೇಷ ಶಿಕ್ಷಕರ ತರಬೇತಿ ಕೇಂದ್ರಗಳನ್ನು ೨೦೦೦–೦೧ನೇ ಸಾಲಿನಿಂದ ಮೈಸೂರಿನಲ್ಲಿ ಪ್ರಾರಂಭಿಸಲಾಗಿದೆ. ಅದರನ್ವಯ ೨೦೧೪–೧೫ನೇ ಸಾಲಿನಲ್ಲಿ ೫೦ ಪ್ರಶಿಕ್ಷಣಾರ್ಥಿಗಳು ತರಬೇತಿಯು ಪಡೆದಿದ್ದಾರೆ.

**೯. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಮ್ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:** ನಗರ ಪ್ರದೇಶದಲ್ಲಿನ ಮೂರು ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಮ್ ಮತ್ತು ತೀವ್ರತರದ ವಿಕಲಚೇತನ ಮಕ್ಕಳಿಗಾಗಿ ೦೨ ಹಗಲು ಯೋಗಕ್ಷೇಮ ಕೇಂದ್ರಗಳಿವೆ. ಇಲ್ಲಿನ ಪ್ರತಿ ಮಗುವಿಗೆ ಮಾಹೆಯಲ್ಲಿ ರೂ. ೧೦,೦೦೦/- ಗಳನ್ನು ನೀಡುವ ಯೋಜನೆಗೆ ೨೮.೦೮.೨೦೧೮ರಂದು ಅನುಮೋದನೆ ದೊರೆತಿದ್ದು, ೨೦೧೮-೧೯ನೇ ಸಾಲಿನಲ್ಲಿ ರೂ. ೫೦.೦೦ ಲಕ್ಷಗಳ ಅನುದಾನವು ನಿಗದಿಯಾಗಿದ್ದು, ೨.೦೭ ಲಕ್ಷ ಅನುದಾನ ನೀಡಲಾಗಿದೆ.

### ಬಿ) ಉದ್ಯೋಗ ಮತ್ತು ತರಬೇತಿ

**೧. ಸರ್ಕಾರಿ ಹುದ್ದೆಗಳಲ್ಲಿ ಐದು ಪ್ರತಿಶತ ಮೀಸಲಾತಿ:** ಎ ಮತ್ತು ಬಿ ಹುದ್ದೆಗಳಲ್ಲಿ ಮೂರು ಪ್ರತಿಶತ ಮತ್ತು ಸಿ ಮತ್ತು ಡಿ ಹುದ್ದೆಗಳಲ್ಲಿ ಐದು ಪ್ರತಿಶತ ಹುದ್ದೆಗಳನ್ನು ಅಂಗವಿಕಲರಿಗಾಗಿ ರಾಜ್ಯ ಸರ್ಕಾರದ ನೇಮಕಾತಿಗಳಲ್ಲಿ ಮೀಸಲಿರಿಸಲಾಗಿದೆ. ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಿ (ಸರ್ಕಾರದ ರಾಜ್ಯ ಪತ್ರದಲ್ಲಿ) ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ

**೨.ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:** ಈ ಯೋಜನೆಯ ಉದ್ದೇಶವು ಅಂಧರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ. ರಾಜ್ಯದಲ್ಲಿ ಆರು ವೃತ್ತಿ ತರಬೇತಿ ಕೇಂದ್ರಗಳನ್ನು ಬೆಂಗಳೂರುಮತ್ತು ಮೈಸೂರುಗಳಲ್ಲಿ ನಡೆಸಲಾಗುತ್ತಿದೆ. ಈ ಕೇಂದ್ರದಲ್ಲಿ ೨೫ ಜನ ಫಲಾನುಭವಿಗಳು ಸರಳ ಎಂಜಿನಿಯರಿಂಗ್, ಬೆತ್ತ ಹೆಣೆಯುವ, ಹಗ್ಗ ಹೆಣೆಯುವ, ಚಾಪೆ ಹೆಣೆಯುವ ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ಪಡೆಯುತ್ತಿದ್ದಾರೆ.

**೩. ಉದ್ಯೋಗ ಕೋಶ:** ವಿವಿಧ ರೀತಿಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸುವ ಸಲುವಾಗಿ ಉದ್ಯೋಗ ಕೋಶವನ್ನು ಪ್ರಾರಂಭಿಸಲಾಗಿದೆ. ೨೦೧೮-೧೯ನೇ ಸಾಲಿನಲ್ಲಿ ೪೬.೯೦ ಲಕ್ಷ ಖರ್ಚಾಗಿದ್ದು, ೬೩೮ ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**೪. ವಿಕಲಚೇತನ ನೌಕರರಿಗೆ ಮತ್ತು ತರಬೇತಿದಾರರಿಗೆ ವಸತಿನಿಲಯ:** ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರ ಮತ್ತು ಪ್ರೌಢ ಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಈ ವಸತಿ ನಿಲಯದಲ್ಲಿ ಪ್ರವೇಶ ಪಡೆಯಲು ಅರ್ಜಿದಾರರ ವಾರ್ಷಿಕ ಆದಾಯ ರೂ. ೬೦,೦೦೦ ಗಳಿಗಿಂತ ಕಡಿಮೆ ಇರಬೇಕು. ಪುರುಷರ ವಸತಿ ನಿಲಯದಲ್ಲಿ ೫೦ ನಿವಾಸಿಗಳು ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ ೫೦ ವಿದ್ಯಾರ್ಥಿನಿಯರನ್ನು ದಾಖಲೆ ಮಾಡಿಕೊಳ್ಳಲು ಅವಕಾಶವಿದೆ. ೨೦೧೮-೧೯ನೇ ಸಾಲಿನಲ್ಲಿ ಪುರುಷರ ವಸತಿ ನಿಲಯದಲ್ಲಿ ೪೦ ನಿವಾಸಿಗಳು, ಮಹಿಳೆಯರ ವಸತಿ ನಿಲಯದಲ್ಲಿ ೨೮ ನಿವಾಸಿಗಳು ಸೌಲಭ್ಯವನ್ನು ಪಡೆಯುತ್ತಿದ್ದಾರೆ.

**೫. ಆಧಾರ ಯೋಜನೆ:** ವಿಕಲರಚೇತನರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಯೋಜನೆಯನ್ನು ಕಾರ್ಯ ರೂಪಕ್ಕೆ ತಂದಿದೆ. ಈ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತದೆ. ಈ ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ರೂ. ೧೫,೦೦೦ ಗಳ ಉಚಿತ ಪೆಟ್ಟಿಗೆ ಅಂಗಡಿ ಹಾಗೂ ರೂ.೨೦,೦೦೦ಗಳ ನಿರ್ವಹಣಾ ಬಂಡವಾಳವನ್ನು ಬಡ್ಡಿರಹಿತ ಸಾಲದ ರೂಪದಲ್ಲಿ ನೀಡಲಾಗುತ್ತಿದೆ. ೨೦೧೮-೧೯ನೇ ಸಾಲಿನಲ್ಲಿ ರೂ. ೯೩.೮೦ ಲಕ್ಷಗಳ ವೆಚ್ಚದಲ್ಲಿ ೨೭೩ ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

**೬. ಗ್ರಾಮೀಣ ಪುನರ್‌ವಸತಿ ಯೋಜನೆ:** ಈ ಯೋಜನೆಯನ್ನು ರಾಜ್ಯದ ಎಲ್ಲಾ ३೦ ಜಿಲ್ಲೆಗಳ ೧೭೬ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿಯಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಮರ್ಥ ಅಂಗವಿಕಲರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ಅಂಗವಿಕಲರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಈ ಕಾರ್ಯಕರ್ತರ ಮೂಲಕ ಅಂಗವಿಕಲರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ಅಂಗವಿಕಲರ ಮೂಲಕವೇ ನೀಡಲು ಅವಕಾಶ ಕಲ್ಪಿಸಲಾಗಿದೆ. ಒಟ್ಟು ೫೩೫೦ ಸಮರ್ಥ ವಿಕಲಚೇತನರಿಗೆ ಗೌರವಧನ ಆಧಾರದ ತಾತ್ಕಾಲಿಕ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದ್ದು, ೨೦೧೮-೧೯ನೇ ಸಾಲಿನಲ್ಲಿ ರೂ. ೮೧೨.೦೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**೭.ಉದ್ಯೋಗಸ್ಥ ಅಂಗವಿಕಲ ಮಹಿಳೆಯರಿಗೆ ವಸತಿ ನಿಲಯಗಳು:** ಗ್ರಾಮೀಣ ಅಂಗವಿಕಲ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ೨೭ ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ೨೦೧೮-೧೯ನೇ ಸಾಲಿನಲ್ಲಿ ರೂ.೨೯೮.೮೪ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ೯೭೫ ಫಲಾನುಭವಿಗಳು ಇದರ ಪ್ರಯೋಜನವನ್ನು ಪಡೆದಿದ್ದಾರೆ.

### ಸಿ) ಸಾಮಾಜಿಕ ಭದ್ರತಾ ಯೋಜನೆಗಳು

**೧.ಪೋಷಣಾ ಭತ್ಯೆ:** ದಿ:೨೩-೦೮-೨೦೦೮ರ ಸರ್ಕಾರಿ ಆದೇಶದಂತೆ ಗ್ರಾಮೀಣ ಪ್ರದೇಶದಲ್ಲಿ ರೂ.೧೨೦೦೦/- ಹಾಗೂ ನಗರ ಪ್ರದೇಶದಲ್ಲಿ ರೂ. ೧೭೦೦೦/- ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬದಲ್ಲಿರುವ ಶೇ. ೪೦ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ. ೫೦೦/-ಗಳನ್ನು, ಶೇ. ೭೫ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ. ೧೨೦೦/- ಪೋಷಣಾ ಭತ್ಯೆಗಳನ್ನು ನೀಡಲಾಗುತ್ತಿದೆ. ಆಯಾ ತಾಲೂಕಿನ ತಹಸೀಲ್ದಾರ್ ಇದನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಈ ಯೋಜನೆಯಡಿ ೨೦೧೮-೧೯ರಲ್ಲಿ

ರೂ. ೬೮,೬೯೨.೮೨ ಲಕ್ಷಗಳು ವೆಚ್ಚವಾಗಿದ್ದು, ೭,೫೧,೩೨೪ ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ.

**೨.ಸಮಾಜ ಸೇವಾ ಸಂಕೀರ್ಣ:** ನಿರ್ಗತಿಕ ವೃದ್ಧರಿಗೆ ಹಾಗೂ ಅಂಗವಿಕಲರಿಗೆ ಊಟ, ವಸತಿ, ವೈದ್ಯಕೀಯ ಸೌಲಭ್ಯ, ರಕ್ಷಣೆ ಒದಗಿಸುವ ಉದ್ದೇಶದಿಂದ ಸಮಾಜ ಸೇವಾ ಸಂಕೀರ್ಣವು ಬೆಂಗಳೂರಿನಲ್ಲಿ ಸ್ಥಾಪಿತವಾಗಿದೆ. ಈ ಸಂಕೀರ್ಣದಲ್ಲಿ ಸುಮಾರು ೧೦೦ ಫಲಾನುಭವಿಗಳು ಊಟ, ವಸತಿ, ರಕ್ಷಣೆ, ವೈದ್ಯಕೀಯ ಸೌಲಭ್ಯ ಪಡೆಯುತ್ತಿದ್ದಾರೆ. ೨೦೧೪-೧೫ನೇ ಸಾಲಿನಲ್ಲಿ ರೂ.೫೧.೧೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**೩.ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:** ೨೦೦೭-೦೮ನೇ ಸಾಲಿನಿಂದ ಐದು ಮಾನಸ ಕೇಂದ್ರಗಳನ್ನು ಬೆಂಗಳೂರು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಶಿವಮೊಗ್ಗಗಳಲ್ಲಿ ಪ್ರಾರಂಭಿಸಲು ಸರ್ಕಾರ ಮಂಜೂರಾತಿಯನ್ನು ನೀಡಿರುತ್ತದೆ. ನಿರ್ಗತಿಕ ಮತ್ತು ರಸ್ತೆಯಲ್ಲಿ ತಿರುಗಾಡುವ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ಸೇರಿಸಿಕೊಳ್ಳಲಾಗುವುದು. ಈ ಕೇಂದ್ರಗಳಲ್ಲಿ ಆರೋಗ್ಯ ಸಲಹೆ ಮತ್ತು ವಸತಿ ಸೌಲಭ್ಯವನ್ನು ನೀಡಲಾಗುವುದು. ಪ್ರಸ್ತುತ ಬೆಂಗಳೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿದ್ದು, ತಲಾ ೨೫ ಫಲಾನುಭವಿಗಳು ಸೌಲಭ್ಯವನ್ನು ಪಡೆಯುತ್ತಿದ್ದಾರೆ. ೨೦೧೪-೧೫ನೇ ಸಾಲಿನಲ್ಲಿ ರೂ. ೩೧.೭೬ ಲಕ್ಷ ವೆಚ್ಚವಾಗಿದೆ.

**೪.ವೃದ್ಧಾಶ್ರಮಗಳಿಗೆ ಅನುದಾನ ನೀಡುವ ಯೋಜನೆ:** ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವೃದ್ದಾಶ್ರಮಗಳಿಗೆ ಅನುದಾನ ನೀಡುವ ಯೋಜನೆ ಜಾರಿಯಲ್ಲಿದೆ. ಈ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಯವರು ನಡೆಸುತ್ತಿದ್ದು. ಅವರಿಗೆ ರಾಜ್ಯ ಸರ್ಕಾರ ಜಿಲ್ಲಾ ಪಂಚಾಯತ್ ಮುಖಾಂತರ ಅನುದಾನ ನೀಡುತ್ತಿದೆ. ರಾಜ್ಯದಲ್ಲಿ ೨೭ ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿವೆ.

**೫.ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:** ಬುದ್ಧಿಮಾಂದ್ಯ ಮಕ್ಕಳ ತಂದೆ/ತಾಯಿ/ಪೋಷಕರಿಗೆ ಈ ಯೋಜನೆಯಡಿಯಲ್ಲಿ ಎಲ್.ಐ.ಸಿ. ಮೂಲಕ ಜೀವವಿಮೆ ಮಾಡಲಾಗುತ್ತಿದೆ. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ. ೨೦,೦೦೦ಗಳ ಪರಿಹಾರ ಧನವನ್ನು ನಿಧನ ಹೊಂದಿದ ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಭಾರತೀಯ ಜೀವ ವಿಮಾ ನಿಗಮದವರ ಮುಖಾಂತರ ನೀಡಲಾಗುತ್ತಿದೆ. ೨೦೧೪-೧೫ನೇ ಸಾಲಿನಲ್ಲಿ ರೂ.೭.೦೦ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು ೨೪೮೪ ಬುದ್ಧಿಮಾಂದ್ಯ ವ್ಯಕ್ತಿಗಳಿಗೆ ಪಾವತಿಸಲಾಗಿದೆ.

**೬ ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹಧನ ನೀಡುವ ಯೋಜನೆ:** ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ಹೆಸರಿನಲ್ಲಿ ರೂ. ೫೦,೦೦೦/-ಗಳನ್ನು ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ವಿಕಲಚೇತನರನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನ ವ್ಯಕ್ತಿಗಳು ಜಂಟಿಯಾಗಿ ೦೫ ವರ್ಷಗಳ ಅವಧಿಗೆ ಭದ್ರತಾ ಠೇವಣಿಯಲ್ಲಿಟ್ಟು ಅದರಿಂದ ಬರುವ ಬಡ್ಡಿಯನ್ನು ಉಪಯೋಗಿಸುವುದು ಹಾಗೂ ೦೫ ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು. ಈ ಯೋಜನೆಯನ್ನು ದಿ:೨೯.೦೮.೨೦೧೩ರಿಂದ ಜಾರಿಗೊಳಿಸಲಾಗಿದೆ. ೨೦೧೪-೧೫ನೇ ಸಾಲಿನಲ್ಲಿ ೭೧.೦೦ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಇದರ ಪ್ರಯೋಜನವನ್ನು ೧೪೨ ಫಲಾನುಭವಿಗಳು ಪಡೆದಿದ್ದಾರೆ.

**೭. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ:** ಬಡ ಕುಟುಂಬದ ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟವಾಗಿರುತ್ತದೆ. ಇಂತಹ ಅಂಧ ಮಹಿಳೆಯರು ಹಾಗೂ ಅವರಿಗೆ ಜನಿಸುವ ಕನಿಷ್ಠ ೨ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಟಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ. ೨೦೦೦/-ದಂತೆ ೨ ವರ್ಷಗಳ ಅವಧಿಗೆ ಸಹಾಯಧನವನ್ನು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ೨೦೧೪-೧೫ನೇ ಸಾಲಿನಲ್ಲಿ ರೂ. ೬.೧೯ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಇದರ ಪ್ರಯೋಜನವನ್ನು ೨೭ ಫಲಾನುಭವಿಗಳು ಪಡೆದಿದ್ದಾರೆ.

### ಡಿ) ಪುನರ್ವಸತಿ ಯೋಜನೆ

**೧. ವಿಕಲಚೇತನರಿಗೆ ಸಾಧನ ಸಲಕರಣೆಗಳ ಪೂರೈಕೆ:** ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯದ ಮಿತಿಯನ್ನು ರೂ. ೧೧,೫೦೦ ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ಮತ್ತು ರೂ.೨೪,೦೦೦ ನಗರ ಪ್ರದೇಶದ ಫಲಾನುಭವಿಗಳಿಗೆ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ೨೦೧೪-೧೫ ನೇ ಸಾಲಿನಲ್ಲಿ ರೂ ೯೪.೬೪ ಲಕ್ಷಗಳನ್ನು ವೆಚ್ಚ ಮಾಡಿದ್ದು, ೨೨,೨೭೪ ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**೨. ಅಂಗವಿಕಲತೆಯನ್ನು ಶಸ್ತ್ರಚಿಕಿತ್ಸೆಯಿಂದ ನಿವಾರಣೆಗೊಳಿಸಲು ಹಾಗೂ ಅಂಗವಿಕಲತೆಯ ಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:** ಈ ಯೋಜನೆಯಡಿಯಲ್ಲಿ ಅರ್ಹ ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರಚಿಕಿತ್ಸೆಗಾಗಿ ಮತ್ತು ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಗರಿಷ್ಟ ಮೊತ್ತ ರೂ.೩೫,೦೦೦ ಆರ್ಥಿಕ ನೆರವು ನೀಡಲಾಗುತ್ತಿದೆ. ೨೦೧೪-೧೫ನೇ ಸಾಲಿನಲ್ಲಿ ೨೭.೪೧ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಇದರ ಪ್ರಯೋಜನವನ್ನು ೪೭ ಫಲಾನುಭವಿಗಳು ಪಡೆದಿದ್ದಾರೆ.

**೩. ಸಾಧನೆ ಮತ್ತು ಪ್ರತಿಭೆ ಯೋಜನೆ:** ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ

ನೀಡುವ ಸಲುವಾಗಿ **ಪ್ರತಿಭೆ** ಎಂಬ ಯೋಜನೆಯನ್ನು ಹಾಗೂ ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು **ಸಾಧನೆ** ಎಂಬ ಯೋಜನೆಗಳು ಜಾರಿಯಲ್ಲಿವೆ. ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ಗರಿಷ್ಠ ರೂ. ೩೦,೦೦೦ ಗಳ ಧನ ಸಹಾಯವನ್ನು ಮಾಡಲಾಗುತ್ತದೆ. ೨೦೧೮-೧೯ನೇ ಸಾಲಿಗೆ ರೂ.೨.೮೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ಇ) ಸಾರ್ವಜನಿಕರಿಗೆ ಅರಿವು ಮೂಡಿಸುವ ಯೋಜನೆ**

**೧. ಸಾರ್ವಜನಿಕ ಅರಿವು ಮೂಡಿಸುವ ಯೋಜನೆ:** ಈ ಯೋಜನೆಯಡಿಯಲ್ಲಿ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಾಮಾನ್ಯರಿಗೆ ತಿಳುವಳಿಕೆ ನೀಡಲಾಗುವುದು. ಭಿತ್ತಿಚಿತ್ರ ನಿಯತಕಾಲಿಕೆಗಳನ್ನು ಮುದ್ರಿಸಿ ರಾಜ್ಯಾದ್ಯಂತ ಪ್ರಚಾರ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

**೨. ಅಂಗವಿಕಲತೆಯುಳ್ಳ ವ್ಯಕ್ತಿಗಾಗಿ ಸಾಂಸ್ಕೃತಿಕ ಚಟುವಟಿಕೆ ಹಾಗೂ ಕ್ರೀಡೆಗಳ ಪ್ರೋತ್ಸಾಹ ಧನ ಯೋಜನೆ:** ಅಂಗವಿಕಲರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ 'ಪ್ರತಿಭೆ' ಎಂಬ ಯೋಜನೆಯನ್ನು ಹಾಗೂ ಅಂಗವಿಕಲ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು 'ಸಾಧನೆ' ಎಂಬ ಯೋಜನೆಯಡಿಯಲ್ಲಿ ಫಲಾನುಭವಿಗಳು ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಲಾಗಿದೆ..

**೩. ಸಲಹಾ ಹಾಗೂ ಮಾಹಿತಿ ಕೇಂದ್ರದ ಸ್ಥಾಪನೆ:** ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿಯನ್ನು ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲಾಗುವುದು. ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿ ಈ ಕೇಂದ್ರದಲ್ಲಿ ನೀಡಲಾಗುವುದು.

**ಎಫ್)ಇತರೆ ಯೋಜನೆಗಳು**

1. **ರಾಷ್ಟ್ರ ಪ್ರಶಸ್ತಿ ಯೋಜನೆ:** ಅಂಗವಿಕಲರ ಕಲ್ಯಾಣಕ್ಕಾಗಿ ಶ್ರಮಿಸಿದ ವ್ಯಕ್ತಿ, ಸಂಸ್ಥೆಗಳಿಗೆ ಭಾರತ ಸರ್ಕಾರವು ಈ ಕೆಳಗಿನ ರಾಷ್ಟ್ರ ಪ್ರಶಸ್ತಿಗಳನ್ನು ಕೊಡುತ್ತಿದೆ. (೧) ಅಂಗವಿಕಲರಿಗಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿಗೆ, ಪ್ಲೇಸ್‌ಮೆಂಟ್ ಅಧಿಕಾರಿಗೆ ಹಾಗೂ ಸ್ವಯಂ ಉದ್ಯೋಗಿಗಳಿಗೆ. ಉದ್ಯೋಗದಾತರಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರಶಸ್ತಿಗೆ ಶಿಫಾರಸ್ಸು ಮಾಡಲಾಗುವುದು. (೨) ಅಂಗವಿಕಲರ ಕಲ್ಯಾಣಕ್ಕಾಗಿ ಹೊಸ ತಂತ್ರಜ್ಞಾನ ಸೃಜಿಸಿರುವ, ಕ್ರಿಯಾತ್ಮಕ ಅಂಗವಿಕಲ ವ್ಯಕ್ತಿಗೆ ಹಾಗೂ ಕ್ರಿಯಾತ್ಮಕ ಅಂಗವಿಕಲರ ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿಗೆ ಶಿಫಾರಸ್ಸು ಮಾಡಲಾಗುವುದು. ಕರ್ನಾಟಕ ರಾಜ್ಯದ ಏಳು ಮಂದಿಗೆ ೨೦೧೮ನೇ ಸಾಲಿನಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಭಾರತ ಸರ್ಕಾರವು ನೀಡಿ ಗೌರವಿಸಿದೆ.
2. **ರಾಜ್ಯ ಪ್ರಶಸ್ತಿ:** ರಾಜ್ಯ ಸರ್ಕಾರವು ಅಂಗವಿಕಲರ ಅಭಿವೃದ್ಧಿಗಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ಐದು ಸ್ವಯಂ ಸೇವಾ ಸಂಸ್ಥೆ ಮತ್ತು ಎಂಟು ವ್ಯಕ್ತಿಗಳಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು ಪ್ರತಿ ವರ್ಷವು ಕೈಗೊಳ್ಳುತ್ತಿದೆ. ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ಬಂದ ಅರ್ಜಿಗಳನ್ನು ಪರಿಶೀಲಿಸಿ ಆಯ್ಕೆ ಮಾಡುತ್ತದೆ. ಈ ರೀತಿ ಆಯ್ಕೆಗೊಂಡವರಿಗೆ ವಿಶ್ವ ಅಂಗವಿಕಲರ ದಿನಾಚರಣೆಯಂದು ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗುತ್ತದೆ. ಇದರ ಜೊತೆಗೆ ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಸಲ್ಲಿಸಿದ ಐದು ಜನ ವಿಶೇಷ ಶಿಕ್ಷಕರಿಗೂ ರಾಜ್ಯ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.೨೦೧೮ನೇ ಸಾಲಿನಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ೧೫ ವ್ಯಕ್ತಿಗಳಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹಾಗೆಯೇ ವಿಕಲಚೇತನ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸಾಧನೆಗೈದ ೨ ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ವಿಕಲಚೇತನ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ನೀಡುವ ಪ್ರಶಸ್ತಿಯನ್ನು ೪ ಶಿಕ್ಷಕರಿಗೆ ನೀಡಲಾಗಿದೆ.
3. **ಅಂಗವಿಕಲರಿಗೆ ಗುರುತಿನ ಚೀಟಿ ನೀಡುವ ಯೋಜನೆ:** ಈ ಯೋಜನೆಯಡಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ. ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿ ಕೊಳ್ಳಬಹುದಾಗಿದೆ.
4. **ವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ಬಸ್‌ಪಾಸ್:** ಈ ಯೋಜನೆಯಡಿ ಸರ್ಕಾರವು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ಬಸ್ ಪಾಸ್‌ಗಳನ್ನು ನೀಡುತ್ತಿದ್ದು ಆಯಾ ವರ್ಷದಲ್ಲಿ ನವೀಕರಿಸಲಾಗುತ್ತಿದೆ.

**ಸರ್ಕಾರವು ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸಿರುವ ಯೋಜನೆಗಳು**

ಕರ್ನಾಟಕದಲ್ಲಿ ಒಟ್ಟು ಜನಸಂಖ್ಯೆಯ ಶೇ.8ರಷ್ಟು ಜನ ೬೦ ವರ್ಷ ಮೀರಿದವರಾಗಿರುತ್ತಾರೆ. ಜನ ಸಾಮಾನ್ಯರಿಗೆ ಕರ್ನಾಟಕ ಸರ್ಕಾರವು ಆರೋಗ್ಯ ಪಾಲನೆ ಹಾಗೂ ಇನ್ನಿತರ ಸಂಬಂಧಿತ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ಜೀವಿತಾವಧಿಯು ಉತ್ತಮಗೊಂಡಿರುತ್ತದೆ. ಭಾರತ ಸಂವಿಧಾನದ ಅನುಚ್ಛೇದ ೪೧ರ ಅಡಿಯಲ್ಲಿ ಪ್ರಬಲಪಡಿಸಿದಂತೆ ತನ್ನ ಹಿರಿಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸಿ ಕೊಡುವುದನ್ನು ಖಚಿತಪಡಿಸಿಕೊಳ್ಳುವ ಧ್ಯೇಯದಿಂದ ಕರ್ನಾಟಕ ರಾಜ್ಯವು ಹಿರಿಯ ನಾಗರಿಕರಿಗಾಗಿ ಕಾರ್ಯನೀತಿಯನ್ನು ರೂಪಿಸಿದೆ. ವಯಸ್ಸಾದವರ ಒಳಿತನ್ನು ಕಾಪಾಡುವುದೇ ರಾಜ್ಯ ನೀತಿಯ ಗುರಿಯಾಗಿರುತ್ತದೆ. ರಾಜ್ಯವು ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಆಶ್ರಯ ಹಾಗೂ ಅವರನ್ನು ನಿಂದಿಸುವ ಮತ್ತು ಅನುಚಿತ ಉಪಯೋಗ ಪಡೆದುಕೊಳ್ಳುವವರಿಂದ ರಕ್ಷಣೆ ಒದಗಿಸುವುದು, ಇನ್ನಿತರ ಅವಶ್ಯಕತೆಗಳನ್ನು ಪೂರೈಸಲು ಬೆಂಬಲವನ್ನು

ನೀಡುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ವೃದ್ಧರಿಗೆ ನಗರ ಪ್ರದೇಶಗಳಲ್ಲಿರುವಂತೆ ಸಮಾನ ಅವಕಾಶಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸುವುದು. ಹಿರಿಯ ನಾಗರಿಕರು ರಚನಾತ್ಮಕ, ಸುಭಿಕ್ಷ ಮತ್ತು ತೃಪ್ತಿಕರ ಜೀವನವನ್ನು ನಡೆಸಲು ಅವಕಾಶಗಳನ್ನು ನೀಡುವುದು. ಈ ಕಾರ್ಯನೀತಿಯು ವಯೋಮಾನ ಸಂಘಟಿತ ಸಮಾಜವನ್ನು ಹೊಂದುವ ಗುರಿಯನ್ನು ಇಟ್ಟುಕೊಂಡಿದೆ. ವಯಸ್ಸಾದ ವ್ಯಕ್ತಿಗಳೂ ಸಹ ಸಂಪನ್ಮೂಲ ವ್ಯಕ್ತಿಗಳಾಗಿದ್ದು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತ ಸೇವೆಯನ್ನು ಸಲ್ಲಿಸುತ್ತಾರೆ ಎಂಬುದನ್ನು ರಾಜ್ಯವು ಗುರುತಿಸುತ್ತದೆ. ಈ ನೀತಿಯು ವಯಸ್ಸಾದ ಬಡ ವ್ಯಕ್ತಿಗಳ ಕಲ್ಯಾಣಕ್ಕಾಗಿ ಆಯವ್ಯಯ ಹಂಚಿಕೆಯನ್ನು ಮಾಡುವ ಪ್ರಾಮುಖ್ಯತೆಯನ್ನು ಮನಗಂಡಿದೆ.

**ವೃದ್ಧಾಶ್ರಮಗಳು:** ರಾಜ್ಯ ಸರ್ಕಾರವು ರಾಜ್ಯದ ೩೦ ಜಿಲ್ಲೆಗಳಲ್ಲಿ ೨೭ ವೃದ್ಧಾಶ್ರಮಗಳನ್ನು(ಉಡುಪಿ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಯನ್ನು ಹೊರತುಪಡಿಸಿ) ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡುತ್ತದೆ. ಈ ಯೋಜನೆಯಡಿಯಲ್ಲಿ ೨೫ ವೃದ್ಧರು ಇರುವ ಒಂದು ಘಟಕಕ್ಕೆ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಯೋಜನೆಯ ವೆಚ್ಚ ಶೇ.೯೦ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗೆ ನೀಡುತ್ತದೆ. ಉಳಿದ ಶೇ.೧೦ ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ.

**ಹಗಲು ಯೋಗಕ್ಷೇಮ ಕೇಂದ್ರಗಳು:** ರಾಜ್ಯದ ನಾಲ್ಕು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಗುಲಬರ್ಗಾಗಳಲ್ಲಿ ನಾಲ್ಕು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ಒಂದೊಂದು ಕೇಂದ್ರದಲ್ಲಿ ಸುಮಾರು ೫೦-೧೫೦ ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಯೋಜನೆಗೆ ಸರ್ಕಾರದಿಂದ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

**ಹಿರಿಯ ನಾಗರಿಕರಿಗೆ ಸಹಾಯವಾಣಿ ಕೇಂದ್ರಗಳು:** ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗುಲಬರ್ಗಾ, ದಾವಣಗೆರೆ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ಬೀದರ್, ಬಾಗಲಕೋಟೆ, ತುಮಕೂರು, ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ. ಇದನ್ನು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಮಹಿಳಾ ಸಾಂತ್ವನ ಕೇಂದ್ರ ಯೋಜನೆಯೊಂದಿಗೆ ಸೇರ್ಪಡೆ ಮಾಡಿ ಆ ಇಲಾಖೆ ಮೂಲಕ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ನಡೆಸಲು ಆದೇಶ ಹೊರಡಿಸಲಾಗಿದೆ.

**ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:** ೬೦ ವರ್ಷ ಮೇಲ್ಪಟ್ಟ ವಯೋಮಾನದ ಎಲ್ಲಾ ಹಿರಿಯ ನಾಗರಿಕರಿಗೆ ಇಲಾಖೆಯಿಂದ ಮಾನ್ಯತೆ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಗುರುತಿನ ಚೀಟಿಗಳನ್ನು ವಿತರಿಸಲಾಗುತ್ತಿದೆ.

**ವೃದ್ಧಾಪ್ಯ ವೇತನ:** ರಾಜ್ಯದಲ್ಲಿರುವ ಬಡ ಹಿರಿಯರ ಜೀವನ ನಿರ್ವಹಣೆಗಾಗಿ ಪ್ರತಿ ತಿಂಗಳೂ ರೂ.೫೦೦ ಗಳ ವೃದ್ಧಾಪ್ಯ ವೇತನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನೆರವಿನಿಂದ ನೀಡಲಾಗುತ್ತಿದೆ. ಸದರಿ ಸೌಲಭ್ಯವನ್ನು ಸಂಬಂಧಿಸಿದ ತಹಶೀಲ್ದಾರ್ ಕಚೇರಿಯಿಂದ ಪಡೆಯಬಹುದಾಗಿದೆ.

**ಸಂಧ್ಯಾ ಸುರಕ್ಷ ಯೋಜನೆ:** ಕಂದಾಯ ಇಲಾಖೆಯಿಂದ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ ೯೭ ಎಂ.ಎಸ್.ಟಿ.೨೦೦೭ ದಿ ೨-೭-೨೦೦೭ ಈ ಯೋಜನೆಯಡಿ ಸಾಮಾಜಿಕ ಭದ್ರತಾ ರೂಪದಲ್ಲಿ ೬೫ ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರೂ.೫೦೦ಗಳ ಆರ್ಥಿಕ ಸಹಾಯಧನವನ್ನು ಮಾಸಿಕವಾಗಿ ನೀಡಲಾಗುತ್ತಿದೆ.

**ಈ ಯೋಜನೆ ಸೌಲಭ್ಯ ಪಡೆಯಲು ಅರ್ಹತೆಗಳು:** ೧) ೬೫ ವರ್ಷಕ್ಕಿಂತ ಮೇಲ್ಪಟ್ಟಿರಬೇಕು ೨) ಸ್ಥಳೀಯ ಕಂದಾಯ ಅಧಿಕಾರಿಗಳ ದೃಢೀಕರಣದಂತೆ ಮನವಿದಾರರ ಮತ್ತು ಅವರ ಪತಿ ಅಥವಾ ಪತ್ನಿಯವರ ವಾರ್ಷಿಕ ಆದಾಯವು ರೂ. ೨೦,೦೦೦ಕ್ಕಿಂತ ಹೆಚ್ಚಾಗಿರಬಾರದು. ೩) ಮಕ್ಕಳ ಆದಾಯವು ತಂದೆ ತಾಯಿಯವರ ವಾರ್ಷಿಕ ಆದಾಯಕ್ಕೆ ಪರಿಗಣಿಸಲ್ಪಡುವುದಿಲ್ಲ. ೪) ಪತಿ ಅಥವಾ ಪತ್ನಿಯ ಜಂಟಿ ಖಾತೆಯಲ್ಲಿ ರೂ. ೧೦,೦೦೦ಕ್ಕಿಂತ ಹೆಚ್ಚಿನ ಠೇವಣಿ ಇರಬಾರದು. ೫) ಯಾವುದೇ ರೀತಿಯ ಇತರ ಮಾಸಾಶನ/ಪಿಂಚಣಿಯನ್ನು ಪಡೆಯುತ್ತಿರುವವರು ಈ ವೇತನಕ್ಕೆ ಅರ್ಹರಾಗಿರುವುದಿಲ್ಲ. ೬) ಅತಿ ಸಣ್ಣ ರೈತರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಮೀನುಗಾರರು, ಈ ವಲಯಗಳಲ್ಲಿ ಇರುವ ಅಭ್ಯರ್ಥಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ. ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು, ಆದರೆ ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು Regulation of Employment and conditions of services Act 1996 ಇದರ ಪ್ರಕಾರ ಅರ್ಹರಿರುವುದಿಲ್ಲ. ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಬೇಕಾಗಿದ್ದಲ್ಲಿ ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರನ್ನು ಸಂಪರ್ಕಿಸಬಹುದು.

**ಹಿರಿಯ ನಾಗರಿಕರಿಗೆ ಬಸ್ ಪ್ರಯಾಣದಲ್ಲಿ ರಿಯಾಯಿತಿ ಯೋಜನೆ:** ೬೫ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ಶೇ.೨೫ರಷ್ಟು ರಿಯಾಯಿತಿಯನ್ನು ರಾಜ್ಯ ಸರ್ಕಾರ ಘೋಷಿಸಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಹಿರಿಯ ನಾಗರಿಕರು ಇಲಾಖೆ ವತಿಯಿಂದ ನೀಡಲಾಗುವ ಗುರುತಿನ ಚೀಟಿ, ಚುನಾವಣಾ ಗುರುತಿನ ಚೀಟಿ, ಚಾಲನಾ ಪರವಾನಗಿ ಕೆ.ಎಸ್.ಆರ್.ಟಿ.ಸಿ. ಯಿಂದ ವಿತರಿಸಲಾದ ಗುರುತಿನ ಚೀಟಿ ಇವುಗಳನ್ನು ತೋರಿಸಬೇಕಾಗುತ್ತದೆ.

## ಪರಿಶಿಷ್ಟ ಜಾತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸರ್ಕಾರಿ ವಿದ್ಯಾರ್ಥಿನಿಲಯ (೩೧.೦೩.೨೦೧೫ರಲ್ಲಿದ್ದಂತೆ)

| ಜಿಲ್ಲೆ | ಸರ್ಕಾರಿ | | | | | | | |
|---|---|---|---|---|---|---|---|---|
| | ಮೆಟ್ರಿಕ್ ಪೂರ್ವ | | | | ಮೆಟ್ರಿಕ್ ನಂತರ | | | |
| | ಸಂಖ್ಯೆ | ವಿದ್ಯಾರ್ಥಿಗಳು | | | ಸಂಖ್ಯೆ | ವಿದ್ಯಾರ್ಥಿಗಳು | | |
| | | ಬಾಲಕರು | ಬಾಲಕಿಯರು | ಒಟ್ಟು | | ಬಾಲಕರು | ಬಾಲಕಿಯರು | ಒಟ್ಟು |
| ಬೆಂಗಳೂರು | ೨೯ | ೯೩೦ | ೩೭೩ | ೧೩೦೩ | ೨೩ | ೧೬೦೮ | ೫೪೫ | ೨೧೫೩ |
| ಬೆಂಗಳೂರು ಗ್ರಾಮಾಂತರ | ೨೩ | ೧೦೨೨ | ೨೯೧ | ೧೩೧೩ | ೭ | ೩೧೮ | ೧೨೭ | ೪೪೫ |
| ರಾಮನಗರ | ೩೭ | ೧೨೨೧ | ೩೨೬ | ೧೫೪೭ | ೧೦ | ೩೪೩ | ೨೦೧ | ೫೪೪ |
| ಚಿತ್ರದುರ್ಗ | ೫೪ | ೨೫೦೭ | ೧೦೨೮ | ೩೫೩೫ | ೩೧ | ೨೯೩೩ | ೧೫೬೨ | ೪೪೯೫ |
| ದಾವಣಗೆರೆ | ೪೬ | ೨೫೩೯ | ೯೪೨ | ೩೪೮೧ | ೨೨ | ೩೧೧೧ | ೧೪೪೬ | ೪೫೫೭ |
| ಕೋಲಾರ | ೫೩ | ೨೩೧೩ | ೭೮೩ | ೩೦೯೬ | ೨೪ | ೧೨೧೮ | ೬೪೮ | ೧೮೬೬ |
| ಚಿಕ್ಕಬಳ್ಳಾಪುರ | ೪೯ | ೨೩೮೪ | ೬೫೭ | ೩೦೪೧ | ೧೯ | ೧೮೪೩ | ೬೭೩ | ೨೫೧೬ |
| ಶಿವಮೊಗ್ಗ | ೪೯ | ೧೮೩೧ | ೯೭೮ | ೨೮೦೯ | ೧೮ | ೧೦೭೪ | ೨೧೯೬ | ೩೨೭೦ |
| ತುಮಕೂರು | ೬೩ | ೨೬೭೨ | ೭೯೫ | ೩೪೬೭ | ೩೦ | ೨೮೨೭ | ೧೩೯೨ | ೪೨೧೯ |
| ಚಿಕ್ಕಮಗಳೂರು | ೩೮ | ೧೬೨೧ | ೧೧೦೬ | ೨೭೨೭ | ೧೮ | ೯೮೧ | ೬೬೧ | ೧೬೪೨ |
| ದಕ್ಷಿಣ ಕನ್ನಡ | ೧೯ | ೫೬೨ | ೪೮೨ | ೧೦೪೪ | ೯ | ೪೩೨ | ೩೮೮ | ೮೨೦ |
| ಉಡುಪಿ | ೧೫ | ೩೯೭ | ೩೦೫ | ೭೦೨ | ೬ | ೧೭೮ | ೨೭೦ | ೪೪೮ |
| ಹಾಸನ | ೫೮ | ೨೦೨೫ | ೧೨೨೧ | ೩೨೪೬ | ೨೩ | ೧೨೭೪ | ೧೨೫೦ | ೨೫೨೪ |
| ಕೊಡಗು | ೧೭ | ೨೮೦ | ೨೪೬ | ೫೨೬ | ೪ | ೮೫ | ೯೭ | ೧೮೨ |
| ಮಂಡ್ಯ | ೪೬ | ೧೬೬೮ | ೭೬೫ | ೨೪೩೩ | ೧೯ | ೮೭೯ | ೬೪೯ | ೧೫೨೮ |
| ಮೈಸೂರು | ೪೯ | ೧೯೩೬ | ೮೫೦ | ೨೭೮೬ | ೨೬ | ೧೧೨೫ | ೧೫೮೩ | ೨೭೦೮ |
| ಚಾಮರಾಜನಗರ | ೪೦ | ೧೨೯೫ | ೬೩೩ | ೧೯೨೮ | ೧೬ | ೭೫೯ | ೪೮೫ | ೧೨೪೪ |
| ಬೆಳಗಾವಿ | ೬೮ | ೩೦೦೦ | ೯೨೯ | ೩೯೨೯ | ೨೩ | ೧೦೩೬ | ೩೮೪ | ೧೪೨೦ |
| ವಿಜಯಪುರ | ೫೭ | ೩೫೨೩ | ೭೭೩ | ೪೨೯೬ | ೧೨ | ೧೦೬೪ | ೪೦೨ | ೧೪೬೬ |
| ಬಾಗಲಕೋಟೆ | ೪೦ | ೨೨೪೦ | ೬೫೬ | ೨೮೯೬ | ೧೧ | ೮೦೬ | ೨೫೮ | ೧೦೬೪ |
| ಧಾರವಾಡ | ೧೫ | ೪೨೪ | ೩೪೩ | ೭೬೭ | ೧೨ | ೧೧೧೬ | ೩೩೬ | ೧೪೫೨ |
| ಗದಗ | ೨೬ | ೧೨೭೧ | ೩೨೪ | ೧೫೯೫ | ೧೩ | ೬೬೧ | ೩೧೯ | ೯೮೦ |
| ಹಾವೇರಿ | ೩೭ | ೧೮೭೦ | ೫೯೧ | ೨೪೬೧ | ೧೫ | ೮೪೪ | ೩೦೨ | ೧೧೪೬ |
| ಉತ್ತರ ಕನ್ನಡ | ೨೭ | ೮೦೪ | ೪೮೧ | ೧೨೮೫ | ೪ | ೧೫೮ | ೧೧೮ | ೨೭೬ |
| ಬಳ್ಳಾರಿ | ೫೪ | ೪೨೨೮ | ೧೨೪೨ | ೫೪೭೦ | ೧೮ | ೪೫೨೨ | ೬೬೪ | ೫೧೮೬ |
| ಬೀದರ್ | ೪೩ | ೩೦೧೨ | ೭೭೦ | ೩೭೮೨ | ೧೬ | ೮೩೫ | ೩೧೧ | ೧೧೪೬ |
| ಕಲಬುರಗಿ | ೭೨ | ೪೪೩೦ | ೭೨೦ | ೫೧೫೦ | ೨೫ | ೨೦೨೨ | ೭೮೩ | ೨೮೦೫ |
| ಯಾದಗಿರಿ | ೩೮ | ೨೦೪೦ | ೩೩೫ | ೨೩೭೫ | ೧೧ | ೭೫೭ | ೨೩೫ | ೯೯೨ |
| ರಾಯಚೂರು | ೪೬ | ೨೯೨೫ | ೮೧೮ | ೩೭೪೩ | ೧೯ | ೧೩೪೬ | ೮೬೦ | ೨೨೦೬ |
| ಕೊಪ್ಪಳ | ೩೩ | ೧೯೩೦ | ೫೨೦ | ೨೪೫೦ | ೧೨ | ೬೮೦ | ೩೮೬ | ೧೦೬೬ |
| **ಒಟ್ಟು** | **೧೨೪೧** | **೫೮೯೦೦** | **೨೦೨೮೩** | **೭೯೧೮೩** | **೪೯೬** | **೩೬೮೩೫** | **೧೯೫೩೧** | **೫೬೩೬೬** |

**ಆಧಾರ:ಕರ್ನಾಟಕ ಅಂಕಿ-ಅಂಶಗಳ ನೋಟ - ೨೦೧೪-೧೫ ಪುಟ ೧೧೨-೧೧೩**

## ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸರ್ಕಾರಿ ವಿದ್ಯಾರ್ಥಿನಿಲಯ (೩೧.೦೩.೨೦೧೫ರಲ್ಲಿದ್ದಂತೆ)

| ಜಿಲ್ಲೆ | ಸರ್ಕಾರಿ | | | | | | | |
|---|---|---|---|---|---|---|---|---|
| | ಮೆಟ್ರಿಕ್ ಪೂರ್ವ | | | | ಮೆಟ್ರಿಕ್ ನಂತರ | | | |
| | ಸಂಖ್ಯೆ | ವಿದ್ಯಾರ್ಥಿಗಳು | | | ಸಂಖ್ಯೆ | ವಿದ್ಯಾರ್ಥಿಗಳು | | |
| | | ಬಾಲಕರು | ಬಾಲಕಿಯರು | ಒಟ್ಟು | | ಬಾಲಕರು | ಬಾಲಕಿಯರು | ಒಟ್ಟು |
| ಬೆಂಗಳೂರು | ೦ | ೦ | ೦ | ೦ | ೪ | ೨೩೦ | ೭೫ | ೩೦೫ |
| ಬೆಂಗಳೂರು ಗ್ರಾಮಾಂತರ | ೧ | ೫೦ | ೦ | ೫೦ | – | – | – | – |
| ರಾಮನಗರ | ೩ | ೧೦೦ | ೧೭೫ | ೨೭೫ | – | – | – | – |
| ಚಿತ್ರದುರ್ಗ | ೭ | ೩೭೫ | ೧೫೦ | ೫೨೫ | ೧ | ೧೧೩ | – | ೧೧೩ |
| ದಾವಣಗೆರೆ | ೭ | ೩೭೫ | ೭೫ | ೪೫೦ | ೧ | – | ೫೦ | ೫೦ |
| ಕೋಲಾರ | ೫ | ೨೦೦ | ೫೦ | ೨೫೦ | – | – | – | – |
| ಚಿಕ್ಕಬಳ್ಳಾಪುರ | ೧ | ೫೦ | – | ೫೦ | ೩ | ೧೫೦ | – | ೧೫೦ |
| ಶಿವಮೊಗ್ಗ | ೨ | ೧೫೦ | – | ೧೫೦ | – | – | – | – |
| ತುಮಕೂರು | ೫ | ೩೦೦ | – | ೩೦೦ | ೩ | ೯೮ | ೧೬೩ | ೨೬೧ |
| ಚಿಕ್ಕಮಗಳೂರು | ೭ | ೧೭೫ | ೨೨೫ | ೪೦೦ | ೧ | – | ೭೫ | ೭೫ |
| ದಕ್ಷಿಣ ಕನ್ನಡ | ೯ | ೨೬೭ | ೧೨೫ | ೩೯೨ | ೨ | ೭೫ | ೫೦ | ೧೨೫ |
| ಉಡುಪಿ | ೩ | ೧೦೦ | ೫೦ | ೧೫೦ | ೧ | – | ೫೦ | ೫೦ |
| ಹಾಸನ | ೩ | ೧೫೦ | – | ೧೫೦ | – | – | – | – |
| ಕೊಡಗು | ೮ | ೨೨೩ | ೧೯೦ | ೪೧೩ | – | – | – | – |
| ಮಂಡ್ಯ | ೧ | ೬೦ | – | ೬೦ | – | – | – | – |
| ಮೈಸೂರು | ೧೨ | ೩೯೨ | ೨೫೦ | ೬೪೨ | ೧ | ೭೫ | – | ೭೫ |
| ಚಾಮರಾಜನಗರ | ೬ | ೧೫೦ | ೧೮೫ | ೩೩೫ | ೧ | – | ೫೦ | ೫೦ |
| ಬೆಳಗಾವಿ | ೮ | ೩೫೦ | ೧೫೦ | ೫೦೦ | ೩ | ೨೭೫ | – | ೨೭೫ |
| ವಿಜಯಪುರ | ೧ | – | ೭೫ | ೭೫ | – | – | – | – |
| ಬಾಗಲಕೋಟೆ | ೧ | ೫೦ | – | ೫೦ | ೧ | – | ೫೦ | ೫೦ |
| ಧಾರವಾಡ | – | – | – | – | ೩ | ೨೦೦ | ೭೫ | ೨೭೫ |
| ಗದಗ | ೨ | ೧೨೫ | – | ೧೨೫ | ೩ | ೧೫೦ | ೫೦ | ೨೦೦ |
| ಹಾವೇರಿ | ೪ | ೪೦೦ | – | ೪೦೦ | ೨ | ೭೫ | ೫೦ | ೧೨೫ |
| ಉತ್ತರ ಕನ್ನಡ | ೧ | ೫೦ | – | ೫೦ | – | – | – | – |
| ಬಳ್ಳಾರಿ | ೧೧ | ೬೦೦ | ೧೫೦ | ೭೫೦ | ೯ | ೪೭೫ | ೩೦೦ | ೭೭೫ |
| ಬೀದರ್ | ೪ | ೧೨೫ | ೧೦೦ | ೨೨೫ | ೪ | ೧೫೦ | ೫೦ | ೨೦೦ |
| ಕಲಬುರಗಿ | ೩ | ೧೫೦ | – | ೧೫೦ | ೨ | ೧೦೦ | ೫೦ | ೧೫೦ |
| ಯಾದಗಿರಿ | ೩ | ೫೦ | ೧೧೦ | ೧೬೦ | ೩ | ೧೦೦ | ೫೦ | ೧೫೦ |
| ರಾಯಚೂರು | ೯ | ೨೭೫ | ೩೫೦ | ೬೨೫ | ೭ | ೪೦೦ | ೧೭೫ | ೫೭೫ |
| ಕೊಪ್ಪಳ | ೭ | ೩೫೦ | ೧೧೦ | ೪೬೦ | ೫ | ೧೫೦ | ೧೦೦ | ೨೫೦ |
| **ಒಟ್ಟು** | **೧೩೪** | **೫೬೪೨** | **೨೪೨೦** | **೮೧೬೨** | **೬೦** | **೨೮೧೬** | **೧೪೬೩** | **೪೨೭೯** |

**ಆಧಾರ:ಕರ್ನಾಟಕ ಅಂಕಿ-ಅಂಶಗಳ ನೋಟ - ೨೦೧೪-೧೫ ಪುಟ ೧೧೮-೧೧೯**

## ರಾಜ್ಯದಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಸರ್ಕಾರಿ ವಿದ್ಯಾರ್ಥಿನಿಲಯ (೩೧.೦೩.೨೦೧೫ರಲ್ಲಿದ್ದಂತೆ)

| ಜಿಲ್ಲೆ | ಸರ್ಕಾರಿ | | | | | | | |
|---|---|---|---|---|---|---|---|---|
| | ಮೆಟ್ರಿಕ್ ಪೂರ್ವ | | | | ಮೆಟ್ರಿಕ್ ನಂತರ | | | |
| | ಸಂಖ್ಯೆ | ವಿದ್ಯಾರ್ಥಿಗಳು | | | ಸಂಖ್ಯೆ | ವಿದ್ಯಾರ್ಥಿಗಳು | | |
| | | ಬಾಲಕರು | ಬಾಲಕಿಯರು | ಒಟ್ಟು | | ಬಾಲಕರು | ಬಾಲಕಿಯರು | ಒಟ್ಟು |
| ಬೆಂಗಳೂರು | ೭ | ೧೯೬ | ೧೨೦ | ೩೧೬ | ೩೭ | ೧೮೦೦ | ೧೭೫೦ | ೩೫೫೦ |
| ಬೆಂಗಳೂರು ಗ್ರಾಮಾಂತರ | ೨೧ | ೯೭೬೦ | ೧೫೦ | ೯೯೧೦ | ೮ | ೫೦೦ | ೮೦೦ | ೧೩೦೦ |
| ರಾಮನಗರ | ೨೯ | ೯೫೮ | ೨೩೫ | ೧೧೯೩ | ೨೦ | ೧೦೨೫ | ೨೦೭೫ | ೩೧೦೦ |
| ಚಿತ್ರದುರ್ಗ | ೫೧ | ೨೪೦೫ | ೫೦೫ | ೨೯೫೦ | ೩೭ | ೨೦೦೦ | ೩೭೬೫ | ೫೭೬೫ |
| ದಾವಣಗೆರೆ | ೪೧ | ೧೫೫೦ | ೫೯೦ | ೨೧೪೦ | ೩೮ | ೨೧೧೫ | ೩೮೬೫ | ೫೯೮೦ |
| ಕೋಲಾರ | ೩೨ | ೧೨೭೧ | ೫೪೫ | ೧೮೧೬ | ೨೯ | ೧೫೫೦ | ೨೯೫೦ | ೪೫೦೦ |
| ಚಿಕ್ಕಬಳ್ಳಾಪುರ | ೩೫ | ೧೫೧೫ | ೩೦೦ | ೧೮೧೫ | ೨೨ | ೧೫೦೦ | ೨೩೦೦ | ೩೮೦೦ |
| ಶಿವಮೊಗ್ಗ | ೬೦ | ೨೧೫೦ | ೧೦೩೬ | ೩೧೮೬ | ೬೭ | ೪೦೭೦ | ೭೦೭೦ | ೧೧೧೪೦ |
| ತುಮಕೂರು | ೫೯ | ೨೧೫೫ | ೪೯೫ | ೨೬೫೦ | ೪೨ | ೨೫೧೨ | ೪೪೬೨ | ೬೯೭೪ |
| ಚಿಕ್ಕಮಗಳೂರು | ೬೦ | ೧೮೮೦ | ೧೨೫೦ | ೩೧೩೦ | ೩೮ | ೧೧೭೫ | ೨೮೬೦ | ೪೦೩೫ |
| ದಕ್ಷಿಣ ಕನ್ನಡ | ೨೬ | ೬೭೦ | ೫೯೫ | ೧೨೬೫ | ೪೪ | ೩೦೦೦ | ೪೪೭೦ | ೭೪೭೦ |
| ಉಡುಪಿ | ೧೭ | ೪೭೦ | ೨೮೦ | ೭೫೦ | ೨೪ | ೧೬೧೫ | ೨೫೧೫ | ೪೧೩೦ |
| ಹಾಸನ | ೭೨ | ೨೯೮೫ | ೫೭೫ | ೩೫೬೦ | ೩೭ | ೧೯೦೦ | ೩೯೨೫ | ೫೮೨೫ |
| ಕೊಡಗು | ೨೦ | ೫೬೦ | ೨೭೦ | ೮೩೦ | ೧೮ | ೮೦೦ | ೧೦೦೦ | ೧೮೦೦ |
| ಮಂಡ್ಯ | ೬೫ | ೨೪೨೫ | ೭೪೦ | ೩೧೬೫ | ೩೮ | ೨೧೨೫ | ೧೯೨೫ | ೪೦೫೦ |
| ಮೈಸೂರು | ೪೭ | ೧೭೫೦ | ೨೬೦ | ೨೦೧೦ | ೪೪ | ೨೦೬೦ | ೪೬೩೩ | ೬೬೯೩ |
| ಚಾಮರಾಜನಗರ | ೧೩ | ೪೮೫ | ೯೫ | ೫೮೦ | ೧೯ | ೬೧೫ | ೧೩೨೫ | ೧೯೪೦ |
| ಬೆಳಗಾವಿ | ೧೦೦ | ೪೬೪೦ | ೬೦೦ | ೫೨೪೦ | ೪೯ | ೨೫೭೫ | ೨೫೨೫ | ೫೧೦೦ |
| ವಿಜಯಪುರ | ೬೩ | ೨೯೩೫ | ೬೨೫ | ೩೫೬೦ | ೨೮ | ೧೩೦೦ | ೧೫೫೦ | ೨೮೫೦ |
| ಬಾಗಲಕೋಟೆ | ೪೩ | ೨೩೪೫ | ೩೯೫ | ೨೭೪೦ | ೩೮ | ೧೮೩೫ | ೨೨೦೦ | ೪೦೩೫ |
| ಧಾರವಾಡ | ೨೯ | ೧೦೮೦ | ೨೯೦ | ೧೩೭೦ | ೩೬ | ೧೪೨೫ | ೨೨೫೦ | ೩೬೭೫ |
| ಗದಗ | ೩೭ | ೧೬೨೩ | ೪೬೦ | ೨೦೮೩ | ೧೯ | ೮೦೦ | ೧೨೦೦ | ೨೦೦೦ |
| ಹಾವೇರಿ | ೪೭ | ೧೯೯೫ | ೪೪೫ | ೨೪೪೦ | ೨೫ | ೧೦೧೫ | ೧೭೪೦ | ೨೭೫೫ |
| ಉತ್ತರ ಕನ್ನಡ | ೬೪ | ೨೦೯೬ | ೧೧೭೦ | ೩೨೬೬ | ೨೯ | ೧೨೩೦ | ೧೭೨೫ | ೨೯೫೫ |
| ಬಳ್ಳಾರಿ | ೫೧ | ೨೭೦೫ | ೮೨೦ | ೩೫೨೫ | ೪೪ | ೩೦೦೦ | ೧೫೨೫ | ೪೫೨೫ |
| ಬೀದರ್ | ೫೧ | ೨೩೧೭ | ೪೧೫ | ೨೭೩೨ | ೨೫ | ೧೩೭೫ | ೧೩೬೫ | ೨೭೪೦ |
| ಕಲಬುರಗಿ | ೭೭ | ೩೩೧೫ | ೭೬೦ | ೪೦೭೫ | ೪೫ | ೨೧೦೦ | ೨೫೫೦ | ೪೬೫೦ |
| ಯಾದಗಿರಿ | ೪೪ | ೧೮೭೫ | ೫೧೫ | ೨೩೯೦ | ೧೯ | ೧೦೦೦ | ೧೦೦೦ | ೨೦೦೦ |
| ರಾಯಚೂರು | ೩೮ | ೧೮೨೦ | ೩೨೦ | ೨೧೪೦ | ೨೮ | ೧೩೭೫ | ೧೫೫೦ | ೨೯೨೫ |
| ಕೊಪ್ಪಳ | ೪೨ | ೨೧೩೫ | ೪೭೦ | ೨೬೦೫ | ೨೦ | ೯೮೫ | ೧೧೬೫ | ೨೪೫೦ |
| **ಒಟ್ಟು** | **೧೩೪೧** | **೬೪೦೬೬** | **೧೫೩೨೬** | **೭೯೩೯೨** | **೯೬೭** | **೫೦೩೭೭** | **೭೪೦೩೫** | **೧೨೪೪೧೨** |

**ಆಧಾರ:**ಕರ್ನಾಟಕ ಅಂಕಿ–ಅಂಶಗಳ ನೋಟ – ೨೦೧೪–೧೫ ಪುಟ ೧೨೦–೧೨೧

* * * * *

| State / District | Scheduled Caste population 2011 | | | Scheduled Tribe population 2011 | | |
|---|---|---|---|---|---|---|
| | Total | Rural | Urban | Total | Rural | Urban |
| 2 | 3 | 4 | 5 | 3 | 4 | 5 |
| **KARNATAKA** | **1,04,74,992** | **74,95,763** | **29,79,229** | **42,48,987** | **34,29,791** | **8,19,196** |
| Belgaum | 5,77,418 | 4,48,375 | 1,29,043 | 2,97,198 | 2,53,876 | 43,322 |
| Bagalkot | 3,19,149 | 2,38,014 | 81,135 | 97,203 | 80,820 | 16,383 |
| Bijapur | 4,42,773 | 3,64,088 | 78,685 | 39,314 | 31,644 | 7,670 |
| Bidar | 3,99,785 | 3,30,419 | 69,366 | 2,35,822 | 2,14,759 | 21,063 |
| Raichur | 4,00,933 | 3,13,581 | 87,352 | 3,67,071 | 3,34,023 | 33,048 |
| Koppal | 2,58,608 | 2,22,935 | 35,673 | 1,64,271 | 1,52,563 | 11,708 |
| Gadag | 1,74,196 | 1,27,515 | 46,681 | 61,654 | 50,637 | 11,017 |
| Dharwad | 1,77,855 | 71,387 | 1,06,468 | 87,548 | 50,089 | 37,459 |
| Uttara Kannada | 1,16,431 | 78,859 | 37,572 | 34,239 | 27,949 | 6,290 |
| Haveri | 2,19,976 | 1,88,161 | 31,815 | 1,41,380 | 1,26,249 | 15,131 |
| Bellary | 5,17,409 | 3,66,016 | 1,51,393 | 4,51,406 | 3,34,131 | 1,17,275 |
| Chitradurga | 3,89,117 | 3,33,571 | 55,546 | 3,02,554 | 2,66,526 | 36,028 |
| Davanagere | 3,92,595 | 3,15,926 | 76,669 | 2,33,112 | 1,91,754 | 41,358 |
| Shimoga | 3,08,158 | 2,25,316 | 82,842 | 65,412 | 49,963 | 15,449 |
| Udupi | 75,429 | 55,996 | 19,433 | 52,897 | 41,596 | 11,301 |
| Chikmagalur | 2,53,651 | 2,18,406 | 35,245 | 44,970 | 40,142 | 4,828 |
| Tumkur | 5,06,901 | 4,29,957 | 76,944 | 2,09,559 | 1,80,024 | 29,535 |
| Bangalore | 11,98,385 | 1,99,870 | 9,98,515 | 1,90,239 | 28,415 | 1,61,824 |
| Mandya | 2,65,294 | 2,21,943 | 43,351 | 22,402 | 17,361 | 5,041 |
| Hassan | 3,45,031 | 2,98,013 | 47,018 | 32,329 | 27,896 | 4,433 |
| Dakshina Kannada | 1,48,178 | 1,02,737 | 45,441 | 82,268 | 65,844 | 16,424 |
| Kodagu | 73,584 | 64,618 | 8,966 | 58,054 | 56,298 | 1,756 |
| Mysore | 5,36,643 | 3,80,388 | 1,56,255 | 3,34,547 | 2,57,081 | 77,466 |
| Chamarajanagar | 2,59,445 | 2,21,650 | 37,795 | 1,20,219 | 96,434 | 23,785 |
| Gulbarga | 6,48,782 | 4,89,697 | 1,59,085 | 65,259 | 50,074 | 15,185 |
| Yadgir | 2,73,315 | 2,41,721 | 31,594 | 1,46,849 | 1,28,724 | 18,125 |
| Kolar | 4,65,867 | 3,27,424 | 1,38,443 | 78,875 | 72,143 | 6,732 |
| Chikkaballapura | 3,12,565 | 2,72,891 | 39,674 | 1,56,487 | 1,39,201 | 17,286 |
| Bangalore Rural | 2,13,700 | 1,81,501 | 32,199 | 52,903 | 44,412 | 8,491 |
| Ramanagara | 2,03,819 | 1,64,788 | 39,031 | 22,946 | 19,163 | 3,783 |